ಭಾರತದಲ್ಲಿ ಶಕ್ತಿಪೂಜೆ

ಸ್ವಾಮಿ ಶಾರದಾನಂದ
(ಮೂಲ ಬಂಗಾಳಿಯ ಲೇಖಕರು)

ಶ್ರೀ ರಾಮಕೃಷ್ಣಾಶ್ರಮ
ಮೈಸೂರು 20

ಭಾರತದಲ್ಲಿ ಶಕ್ತಿಪೂಜೆ

ಸ್ವಾಮಿ ಶಾರದಾನಂದ

(ಮೂಲ ಬಂಗಾಳಿಯ ಲೇಖಕರು)

ಶ್ರೀ ರಾಮಕೃಷ್ಣಾಶ್ರಮ

ಮೈಸೂರು-570020

ಮೊದಲನೆ ಮುದ್ರಣ : ೧೯೫೭

ಎರಡನೆಯು ಮುದ್ರಣ : ೧೯೬೯

ಮೂರನೆಯು ಮುದ್ರಣ : ೧೯೭೮

ನಾಲ್ಕನೆಯು ಮುದ್ರಣ : ೧೯೮೩

ಐದನೆಯು ಮುದ್ರಣ : ೧೯೮೭

ಪ್ರಕಾಶಕರು :

ಅಧ್ಯಕ್ಷರು, ಶ್ರೀರಾಮಕೃಷ್ಣಾಶ್ರಮ, ಮೈಸೂರು

ಮುದ್ರಕರು :

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಭಾರತದಲ್ಲಿ ಶಕ್ತಿಪೂಜೆ

೧. ಶಕ್ತಿತತ್ತ್ವ ಮತ್ತು ಪೂಜಾಪದ್ಧತಿ

ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋನಮಃ ॥ (ಚಂಡಿ)

"ಜಡ-ಚೇತನ ಸಕಲದರಲ್ಲಿಯೂ ಸುಪ್ತ ಮತ್ತು ವ್ಯಕ್ತಭಾವದಲ್ಲಿ ಅವಸ್ಥಿತಳಾದ ಶಕ್ತಿರೂಪಿಣಿ ದೇವಿಗೆ ನನ್ನ ಅನಂತ ನಮಸ್ಕಾರಗಳು."

ನವಯುಗದಲ್ಲಿ, ನವೋದ್ಯಮದಲ್ಲಿ ಸನಾತನ ಶಕ್ತಿ ಪುನಃ ಜಾಗ್ರತವಾಗಿದೆ. ಭಗವಾನ್ ಶ್ರೀರಾಮಕೃಷ್ಣ ದೇವರ ಅಲೌಕಿಕ ತ್ಯಾಗ, ತಪಸ್ಯ ಮತ್ತು ನಿರಂತರ ಸಪ್ರೇಮ ಆಹ್ವಾನದಿಂದ ಶಕ್ತಿಯು ಜಾಗ್ರತಳಾಗಿರುವಳು. ನರದೇವ ಶ್ರೀ ವಿವೇಕಾನಂದರ ಗುರುತರಪ್ರಾಣಭಾವಕ್ಕೆ ಪ್ರಸನ್ನಳಾಗಿ, ಪರಮ ಕಲ್ಯಾಣವನ್ನೆಸಗಲು ನಿಯುಕ್ತಳಾಗಿರುವಳು. ಸಮಗ್ರ ಭಾರತ ಮತ್ತು ಕಾಲಕ್ರಮೇಣ ಇಡೀ ಪ್ರಪಂಚ ಈ ಶಕ್ತಿಯ ಪವಿತ್ರ ಸ್ಪರ್ಶನದಿಂದ ನವಭಾವದಿಂದ ಪೂರ್ಣವಾಗಿ ಒಂದು ದಿನ ಕೃತಾರ್ಥವಾಗುವುದು. ಇದರಲ್ಲಿ ಸಂದೇಹವಿಲ್ಲ. ಬ್ರಹ್ಮಸದ್ಭಾವದ ಮೂಲಕ ಬ್ರಹ್ಮಶಕ್ತಿ ಸರ್ವದಾ ಅಮೋಘ, ಅವಿನಾಶಿ ಸರ್ವಾಂತರ್ನಿಹಿತವಾಗಿ ಸರ್ವ ಕಾಲದಲ್ಲಿಯೂ ನಿಯಂತೃವಾಗಿರುವಳು.

ಶಕ್ತಿಯ ವಿಚಿತ್ರ ಪ್ರಭಾವದಿಂದ ಸಾಸುವೆಕಾಳಿಗಿಂತ ಸಣ್ಣದಾದ ಬೀಜದಲ್ಲಿ ವಿಶಾಲವೃಕ್ಷ ಅಂತರ್ಗತವಾಗಿರುವಂತೆ, ಮಾಂಸಪಿಂಡ ಮನುಷ್ಯದೇಹದಲ್ಲಿ ಜಡಜಗನ್ನಿಯಾಮಕ ಚೈತನ್ಯಮಯಿ ಬುದ್ಧಿ ಇರುವಂತೆ, ಆಕಾಶಕ್ಕಿಂತ ಸೂಕ್ಷ್ಮವಾಗಿರುವ ಇಂದ್ರಿಯಾತೀತ ಮನಸ್ಸಿನಲ್ಲಿ ಸಮಸ್ತ ವಿಶ್ವಸಂಸಾರವೂ ಪ್ರತಿಷ್ಠಿತವಾಗಿದೆ. ಸಾಧಾರಣ ಶಕ್ತಿಯು ಪ್ರಭಾವವೇ ಇಷ್ಟು ಅದ್ಭುತವಾದರೆ ಅಂತರ್ಜಗನ್ನಿಯಾಮಕ ಆಧ್ಯಾತ್ಮಿಕ ಶಕ್ತಿಯ ಮಹಿಮೆಗೆ ಅಂತ್ಯವೆಲ್ಲಿದೆ? ಅನಾದಿಕಾಲದಿಂದಲೂ ಶಕ್ತಿ ಉಪಾಸನೆಗಾಗಿ ತಮ್ಮ ಪ್ರಾಣವನ್ನು ಅರ್ಪಿಸಿ ಜನ ಪೂಜಿಸಲು ಏತಕ್ಕೆ ಮುಂದೆ ಬರಬಾರದು? ಪುನಃ ಜಗತ್ತಿನಲ್ಲಿ ನವ ಪ್ರಬೋಧಿತ ಶಕ್ತಿಪೂಜೆ ಪ್ರಸಾರವಾಗುತ್ತದೆ. ಪುನಃ ಭರತಖಂಡ ಭಗವಾನ್

ಶ್ರೀರಾಮಕೃಷ್ಣರಿಂದ ಬೋಧಿಸಲ್ಪಟ್ಟ ಸನಾತನೀ ಬ್ರಹ್ಮಶಕ್ತಿ ಪೂಜೆಯಿಂದ ತಾನು ಉದ್ಧಾರವಾಗಿ ಇತರರನ್ನೂ ಉದ್ಧಾರೋನ್ಮುಖರಾಗುವಂತೆ ಮಾಡುವುದು. ಆದಕಾರಣ ಶಕ್ತಿ ಪೂಜೆ ಮತ್ತು ಶಕ್ತಿ ತತ್ತ್ವದ ವಿಷಯವಾಗಿ ಕೆಲವು ಮಾತುಗಳನ್ನು ಹೇಳುವುದು ಸಮಯೋಚಿತವಾಗಿದೆ.

ಅನಾದಿಕಾಲದ ವೇದ, ಶಕ್ತಿಪ್ರಾಚೀನವಾದರೂ ನಿತ್ಯನವೀನ ಎಂದು ಹೇಳುವುದು. ಗುಪ್ತಭಾವದಿಂದ ವ್ಯಕ್ತವಾದಾಗ ನವೀನವಾಗುವುದು. ಶ್ರೀರಾಮಕೃಷ್ಣರು ಹೇಳುವಂತೆ ಸನಾತನೀಶಕ್ತಿ ಸರ್ವದಾ ತೆರೆಯ ಹಿಂದೆ ಇರುವಳು. ಶಕ್ತಿಗೆ ವೃದ್ಧಿಕ್ಷಯಗಳಿಲ್ಲ. ಲೋಪದ ಮಾತೇ ಇಲ್ಲ. ಸ್ಥೂಲ ಮತ್ತು ಸೂಕ್ಷ್ಮದ ಆವರಣದ ಮೂಲಕ ನೋಡಿದಾಗ ಕೆಲವು ವೇಳೆ ವೃದ್ಧಿಕ್ಷಯ, ಕೆಲವು ವೇಳೆ ಪೂರ್ಣಲೋಪ ಎಂಬ ಭಾವನೆಯನ್ನು ನಾವು ಕಲ್ಪಿಸಿಕೊಳ್ಳುವೆವು.

ಏಕಶಕ್ತಿ ಎಷ್ಟು ವೇಳೆ ಗುಪ್ತದಿಂದ ವ್ಯಕ್ತವಾಗಿ ವ್ಯಕ್ತದಿಂದ ಗುಪ್ತವಾಗಿ ಹೋಗುವಳೆಂಬುದನ್ನು ಹೇಳಲು ಯಾರಿಗೆ ಸಾಧ್ಯ. ವ್ಯಕ್ತವಾದಾಗಲೆಲ್ಲ ಲುಪ್ತ ಎನ್ನುವರು. ಅನೇಕ ಕಾಲದಿಂದಲೂ ಈ ಆಟ ಸಾಗುತ್ತಿದೆ. ದೇಶ ಮಹಾದೇಶ, ಪೃಥಿವೀ ಅಖಿಲಜಗತ್-ಜಾತಿ ಸಮಾಜ ಪ್ರತ್ಯೇಕ ಪರಿವಾರ ಮತ್ತು ವ್ಯಕ್ತಿತ್ವದಲ್ಲಿಯೂ ಈ ಆಟ ನಿತ್ಯ ಸಾಗುತ್ತಿದೆ. ಎಷ್ಟು ಗ್ರಹಗಳು ಚೂರ್ಣಿತವಾದವು, ಮತ್ತೆಷ್ಟು ಗ್ರಹಗಳು ಪುನಃ ಉದ್ಭವಿಸಿದವು? ಎಷ್ಟು ದೇಶ ಪರ್ವತಾದಿಗಳಿಂದ ತುಂಬಿದವು, ಮತ್ತೆಷ್ಟು ದೇಶ ಸಮುದ್ರಗಳಿಂದ ಕಬಳಿಸಲ್ಪಟ್ಟವು. ಇದನ್ನು ನಿರ್ಣಯಿಸುವವರಾರು? ಒಂದು ಗ್ರಹವಾದ ಈ ಪೃಥ್ವಿಯಲ್ಲಿ ಇಂತಹ ಸ್ಥಿತಿಗಳು ಎಷ್ಟು ಸಲ ಆದುವು, ಇದನ್ನು ಹೇಳುವವರಾರು? ತುಷಾರಾವೃತ ಹಿಮಾಲಯ ಶೃಂಗದಲ್ಲಿ ಒಂದು ಕಾಲದಲ್ಲಿ ಸಮುದ್ರ ಗರ್ಜನೆ, ಮತ್ತೊಂದು ಕಾಲದಲ್ಲಿ ಸಮುದ್ರ ಗರ್ಭದಲ್ಲಿ ದೇಶ ಜನಪದದ ಅಸ್ತಿತ್ವ, ಇವು ಇತಿಹಾಸದ ವಿಷಯಗಳಾಗಿವೆ. "ನೂರು ವರ್ಷ ರಾಜಧಾನಿ, ನೂರು ವರ್ಷ ಅರಣ್ಯ" ಎಂಬ ಗಾದೆಯೇ ಇದೆ.

ಈ ಸ್ಥಿತಿಯಲ್ಲಿ ಜಾತಿ ಮತ್ತು ಸಮಾಜ ಉನ್ನತಶಿಖರಕ್ಕೇರಿತು; ಅವನತಿಯ ಕೂಪಕ್ಕೆ ಬಿದ್ದಿತು. ಇದನ್ನು ಯಾರು ವಿವರಿಸಬಲ್ಲರು? ಶೈಶವ, ಯೌವನ, ವಾರ್ಧಕ್ಯದಲ್ಲಿ ವ್ಯಕ್ತಿಗತ ಶಕ್ತಿಯ ತಾರತಮ್ಯವನ್ನು ಯಾರು

ಅರಿಯರು? ಪುನರ್ಜನ್ಮದಲ್ಲಿ ಅದೇ ಶಕ್ತಿಯ ಪುನರ್ವಿಕಾಸವನ್ನು ಯಾವ ಋಷಿ ಅಥವಾ ಯೋಗಿ ಅರಿಯರು? ಪ್ರಫುಲ್ಲವಾದ ಕಮಲದ ಮೇಲೆ ಕುಳಿತು ಲಘು ಕಾಯದ ಸುಂದರಿಯೊಬ್ಬಳು ಗಜವನ್ನು ನುಂಗಿ ಪುನಃ ಹೊರಗೆ ಕೆಡಹುವುದನ್ನು ಕೇವಲ ಕವಿ ಕಲ್ಪನೆ ಎಂದು ಯಾರೂ ಹೇಳಲಾರರು, ಅಥವಾ ದೇವಋಷಿ ನಾರದರು ನೋಡಿದ ಭಗವತಿ ಮಹಾಮಾಯೆ ಸೂಜಿಮುಖದಲ್ಲಿ ಆನೆಯನ್ನು ಪುನಃ ಪುನಃ ಒಂದು ಕಡೆಯಿಂದ ನೂಕಿ ಮತ್ತೊಂದು ಕಡೆಯಿಂದ ಸೆಳೆಯುವ ಕಥೆಯನ್ನೂ ಯಾರೂ ಸಂದೇಹಪಡಲಾರರು. ಭಗವಾನ್ ಶ್ರೀರಾಮಕೃಷ್ಣರಿಗೆ ಒಂದು ದಿನ ಮಹಾಮಾಯೆಯ ಸ್ವರೂಪತತ್ತ್ವವನ್ನು ಅರಿಯಬೇಕೆಂಬ ಅಭಿಲಾಷೆಯಾಯಿತು. ಆಗ ಅನುಪಮಸುಂದರಿ ನಾರಿ, ಸರ್ವಾಂಗಸುಂದರವಾದ ಪುತ್ರನನ್ನು ಹೆತ್ತು, ಲಾಲನೆ ಪಾಲನೆಮಾಡಿ ಸ್ವಲ್ಪ ಕಾಲಾನಂತರ ಹರ್ಷವದನದಲ್ಲೇ ಅದನ್ನು ನುಂಗಿದಳು! ಇದನ್ನು ಶ್ರೀರಾಮಕೃಷ್ಣರು ನೋಡಿದರು. ಶಕ್ತಿ ತತ್ತ್ವವನ್ನು ಆಲೋಚಿಸಿ ನೋಡಿದರೆ ಶಕ್ತಿ ಏಕಕಾಲದಲ್ಲೆ ಸೃಷ್ಟಿ ಮತ್ತು ಪ್ರಳಯರೂಪಗಳ ವಿಪರೀತಗುಣಧಾರಿಣೀ ಎಂಬುದನ್ನು ಪರಮಸತ್ಯ ಎಂದು ಹೇಳಬೇಕಾಗುವುದು. ಆಧುನಿಕ ದಾರ್ಶನಿಕರು ಶಕ್ತಿಯಲ್ಲಿ ವೃದ್ಧಿಕ್ಷಯಗಳಿಲ್ಲ ಎಂಬ ನಿರ್ಧಾರಕ್ಕೆ ಬಂದಿರುವರು. ಅದು ಕೆಲವು ವೇಳೆ ಗುಪ್ತ ಮತ್ತು ವ್ಯಕ್ತವಾಗುವುದು ಮಾತ್ರ.

ಭಾವರಾಜ್ಯದಲ್ಲಿಯೂ ಕೂಡ ಹೀಗೆಯೆ. ಭಾವರಾಜ್ಯ ಅಥವಾ ಸೂಕ್ಷ್ಮ ಮನೋರಾಜ್ಯದಲ್ಲಿಯೂ ಶಕ್ತಿಯ ಈ ಲೀಲೆ ವ್ಯಕ್ತವಾಗಿದೆ. ಏಕ ಜಾತಿ ಸಮಾಜವ್ಯಕ್ತಿಯಲ್ಲಿ ಉಪಲಬ್ಧವಾದ ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಭಾವ, ಕಾಲಕ್ರಮೇಣ ಅಂಕುರವಾಗಿ ವರ್ಧಿತವಾಗಿ, ಪರಿಣಿತವಾಗಿ, ಲುಪ್ತವಾಗುವುದು. ಅನಂತರ ಅದೇ ಭಾವತರಂಗ ಅನ್ಯಜಾತಿ ಸಮಾಜ ವ್ಯಕ್ತಿಯಲ್ಲಿ ಪ್ರವೇಶಿಸಿ ವ್ಯಕ್ತವಾದರೆ ಅದು ನೂತನವೆಂಬಂತೆ ಕಾಣುವುದು. ಮಹಾಶಕ್ತಿಯ ವಿಚಿತ್ರಲೀಲೆ ಇದು. ಎರಡನೆಯ ಜಾತಿಗೆ ಈ ಭಾವನೆಯ ಪುರಾತನತ್ವ ಪರಿಚಯವೇ ಇಲ್ಲದೆ ಈ ಭಾವ ಜಗತ್ತಿನಲ್ಲಿ ಎಂದಿಗೂ ಇದುವರೆಗೆ ಉದಿಸಿಲ್ಲ ಎಂದು ಭಾವಿಸುವುದು. ಮದಗರ್ವಿತರಾಗಿ ಜೀವನ ಸಮಸ್ಯೆಗೆ ಏಕಮಾತ್ರ ಅಪೂರ್ವವಾದ ಸರಳವಾದ ಪರಿಹಾರವನ್ನು ನಾವು ಕಂಡುಹಿಡಿದಿರುವೆವು ಎಂದು ಪ್ರಚಾರಪಡಿಸುವರು.

ಆಧುನಿಕ ಯುರೋಪ್ ಮತ್ತು ಅಮೆರಿಕಾ ಇದಕ್ಕೆ ದೃಷ್ಟಾಂತರ. ಪ್ರಾಚೀನ ಭಾರತ, ಈಜಿಪ್ಟ್, ಗ್ರೀಸ್ ಮತ್ತು ಇತರ ದೇಶಗಳ ಸಾಮಾಜಿಕ ನೈತಿಕ ಮತ್ತು ಆಧ್ಯಾತ್ಮಿಕ ಭಾವತರಂಗ ಅಮೆರಿಕಾ ಮುಂತಾದ ದೇಶಗಳಲ್ಲಿ ಕಿಂಚಿತ್ ಪರಿವರ್ತಿತವಾಗಿ ಸುಪುಷ್ಟವಾಗಿ ಬೆಳೆದಾಗ ಅವರು ಇವೆಲ್ಲಾ ತಮ್ಮದೇ ಎಂದು ಮದಗರ್ವಿತರಾಗಿ ಮೆರೆಯುತ್ತಿರುವರು. ಪಾಶ್ಚಾತ್ಯ ದಾರ್ಶನಿಕರೆ, ಕ್ರಮ ವಿಕಾಸ (Evolution) ಯೋನಿ ನಿರ್ವಾಚನ (Sexual selection) ಸಂತಾನಾನುಗತ ಪಿತೃಗುಣವಾದ (Heredity) ಇತ್ಯಾದಿ ಗಳನ್ನು ತೆಗೆದುಕೊಂಡು, "ಜೀವನ ಶಂಕೆಗೆ, ಸರಳವಾದ ಸಮಾಧಾನವಾದ ಪರಿಹಾರವನ್ನು ನಾವು ಕಂಡುಹಿಡಿದಿರುವೆವು" ಎಂದು ಇಡೀ ಪ್ರಪಂಚವನ್ನು ನೀವು ಕರೆಯುತ್ತಿರುವಿರಿ. ಇದೆಲ್ಲಾ ವೃಥಾ ಗರ್ವ. ಭಾವತರಂಗ ಪುನಃ ಸ್ಥಾನಾಂತರವಾಗುವುದು. ದಿನವಾದಮೇಲೆ ರಾತ್ರಿ ಜೀವನಾನಂತರ ಮೃತ್ಯು ಪುನಃ ಏರುವುದು. ಜೀವನ ಸಮಸ್ಯೆಗೆ ಪರಿಹಾರ ಎಂದಿನಂತೆಯೇ ಮಾಯಾ ಮೃಗದಂತೆ ಮುಂದುವರಿಯುತ್ತಿರುವದು. ಹಾಗಾದರೆ ವ್ಯಕ್ತಿ ಮುಕ್ತನಾಗುವು ದೆಂದು ? ಅನಾದಿಕಾಲನದಿಂದಲೂ ಇದ್ದಂತೆಯೇ ಇದು ; "ಹಲವು ಪಟಗಳು ಹಾರುತ್ತಿರುವುವು. ಒಂದೋ ಎರಡೋ ಕಿತ್ತುಹೋಗುವುವು.'' ಹಾಗೆಯೇ ಮುಂದೆಯೂ ಕೂಡ.

ಯುರೋಪ್ ದೇಶೀಯರೆ ನೀವು ಕ್ಷಾತ್ರ ಮತ್ತು ವೈಶ್ಯ ಶಕ್ತಿಯ ಉಪಾಸನೆಗಾಗಿ ಹೃದಯರಕ್ತವನ್ನು ಬಿಂದು ಬಿಂದುಗಳಾಗಿ ದಾನಮಾಡಿರು ವಿರಿ. ಈ ಕಠೋರ ತಪಸ್ಸೆ ನಿಮ್ಮನ್ನು ಉನ್ನತಶಿಖರಕ್ಕೆ ಒಯ್ದಿದೆ. ನೀವು ಮೇಲಿನ ಎರಡು ಶಕ್ತಿಗಳೊಂದಿಗೆ ಶೂದ್ರ ಶಕ್ತಿಯ ಉಪಾಸನೆಯಲ್ಲಿಯೂ ತತ್ಪರರಾಗುವಿರಿ. ಆದಕಾರಣ ನಿಮ್ಮ ದೇಶ ಅಷ್ಟು ಉನ್ನತಶಿಖರಕ್ಕೆ ಏರಿರು ವುದು. ನೀವು ಪುನಃ ಕ್ರಮೇಣ ಆ ಮಹಾಶಕ್ತಿಯ ಆರಾಧನೆಯನ್ನು ಅವ ಹೇಳನ ಮಾಡುವಿರಿ. ನಂತರ ಅದನ್ನೆಲ್ಲಾ ಮರೆಯುವಿರಿ. ಆಗ 'ಸಹಸ್ರ ಪರಮಾ ಶತಮೂಲಾ, ಶತಾಂಕುರಾ' ಮಹಾಮಾಯೆಯನ್ನು ಅನ್ಯರು ಆರಾಧಿಸುವರು. ಅವರ ಉಪಾಸನೆಗೆ ಪ್ರಸನ್ನಳಾಗಿ ಬೇರೊಂದು ಕಡೆ ಅವಳು ಜಾಗ್ರತಳಾಗುವಳು. ಇದೇ ನಿಯಮ.

ಗುಪ್ತವಾದ ನಂತರ ವ್ಯಕ್ತವಾಗುವ, ವ್ಯಕ್ತವಾದನಂತರ ಗುಪ್ತವಾಗುವ,

ಈ ಶಕ್ತಿಯು ಎರಡು ಲೀಲೆ ಪ್ರಪಂಚದಲ್ಲಿ ನಿರಂತರ ಸರ್ವತ್ರ ವಿರಾಜಿಸುತ್ತಿರುವುದು. ಯಾವ ವ್ಯಕ್ತಿ ಸಮಾಜ ದೇಶದಲ್ಲಿ ಶಕ್ತಿ ಆವಿರ್ಭೂತಳಾಗಿರುವಳೋ ಅದು ಜೀವಂತವಾಗಿದೆ. ಉನ್ನತಶಿಖರವನ್ನು ಪಡೆದಿದೆ. ಅವರನ್ನು ಭಾಗ್ಯವಾನ್ ಎಂದು ಭಾವಿಸುವೆವು. ಎಲ್ಲಿ ಶಕ್ತಿ ಗುಪ್ತವಾಗುತ್ತಿರುವಳೊ, ಅಲ್ಲಿ ವಾರ್ಧಕ್ಯ, ಶ್ರೀಹೀನತೆ, ಅವನತಿ, ಮೃತ್ಯುಛಾಯೆ, ತಾಂಡವನಾಡುತ್ತಿರುವುದನ್ನು ನಾವು ನೋಡುವೆವು.

ಬಹುಕಾಲದಿಂದ ಗುಪ್ತವಾಗಿರುವ ಶಕ್ತಿ ಯಾವುದಾದರೂ ಒಂದು ಶರೀರ ಮತ್ತು ಮನಸ್ಸನ್ನು ಆಶ್ರಯಿಸಿಕೊಂಡು ವ್ಯಕ್ತವಾಗುವುದು. ಕೆಲವರು ಈ ಮಹಾಶಕ್ತಿಯ ಆವಿರ್ಭಾವವನ್ನು ಸ್ಪಷ್ಟವಾಗಿ ನೋಡುವರು. ಇವರನ್ನು ಶ್ರದ್ಧಾಭಕ್ತಿಯಿಂದ ನೋಡಿ ಪೂಜ್ಯಪೀಠದ ಮೇಲೆ ಇಟ್ಟು ಗೌರವಿಸುವೆವು. ಜಡರಾಜ್ಯದಲ್ಲಿ ಅವರು ಅವಿಷ್ಕಾರಕ. ಮನೋರಾಜ್ಯದಲ್ಲಿ ದಾರ್ಶನಿಕ ಧರ್ಮದಲ್ಲಿ ಮುಕ್ತಾತ್ಮನಾದ ಋಷಿ ಅಥವಾ ಶುದ್ಧ ಸತ್ತ್ವವಿಗ್ರಹಧಾರಿ ಅವತಾರವಾಗುವದು.

ಪಂಚೇಂದ್ರಿಯದ್ವಾರ ನಾವು ಅರಿಯುವ ಸ್ಪರ್ಶ, ಮನಸ್ಸಿನ ಮೂಲಕ ಮಾಡುವ ಚಿಂತನೆಗಳು, ಭಾವನೆಯ ಮೂಲಕ ಕಲ್ಪಿಸಿಕೊಳ್ಳುವುದೆಲ್ಲವೂ ಶಕ್ತಿ ಸಹಾಯದಿಂದ ; ಎಲ್ಲವೂ ಶಕ್ತಿಯ ಅಧಿಕಾರದಲ್ಲಿದೆ. ದೇವಿ ವೇದಮುಖವಾಗಿ ಹೀಗೆ ಹೇಳುವರು :

ಮಯಾ ಸೊ ಅನ್ನಮತ್ತಿ ಯೋ ವಿಪಶ್ಯತಿ ।
ಯಃ ಪ್ರಾಣಿತಿ ಯಃ ಈಂ ಶೃಣೋತ್ಯುಕ್ತಮ್
ಅಮಂತ್ತವೊ ಮಾಂ ತ ಉಪಕ್ಷಿಯಂತಿ
ಶ್ರುಧಿ ಶ್ರುತ ಶ್ರದ್ಧಿವಂ ತೇ ವದಾಮಿ ॥

ಅಹಂ ರುದ್ರಾಯ ಧನುರಾತನೋಮಿ
ಬ್ರಹ್ಮದ್ವಿಷೇ ಶರವೇ ಹನ್ತವಾಉ
ಅಹಂ ಜನಾಯ ಸಮದಂ ಕೃಣೋಮ್ಯಹಂ
ದ್ಯಾವಾಪೃಥಿವೀ ಆವಿವೇಶ ॥

(ಋಕ್-ದೇವೀಸೂಕ್ತ)

"ನನ್ನಿಂದ ಪ್ರಪಂಚವೆಲ್ಲವೂ ಜೀವಿಸಿದೆ. ಅನ್ನಗ್ರಹಣ ಮತ್ತು ಶ್ರವಣಾದಿ ಕ್ರಿಯೆಗಳೆಲ್ಲ ನನ್ನಿಂದ ಕೆಲಸ ಮಾಡುತ್ತಿವೆ. ಯಾರು ನನ್ನನ್ನು ಅವಹೇಳನ ಮಾಡುವರೋ ಅವರು ನಾಶವಾಗುವರು ನೀನು ಶ್ರದ್ಧಾವಾನ್ ಆದ ಕಾರಣವೇ ನಾನು ನಿನಗೆ ಎಲ್ಲವನ್ನೂ ಹೇಳುತ್ತಿರುವೆನು.''

"ಬ್ರಹ್ಮಶಕ್ತಿಯು ಹಿಂಸಕರಾದ ಅಸುರರನ್ನು ನಾಶಮಾಡುವ ರುದ್ರನ ಕೈಯಲ್ಲಿ ನಾನು ಶಕ್ತಿರೂಪಳಾಗಿ ಅವನ ಬಾಹುಬಲದಲ್ಲಿ ನೆಲೆಸಿದ್ದೆ. ನಾನು ಲೋಕರಕ್ಷಣೆಗಾಗಿ ಯುದ್ಧದಲ್ಲಿ ನಿರತಳಾಗಿದ್ದೆ. ನಾನು ಆಕಾಶ ಪೃಥಿವಿಗಳಲ್ಲಿ ನೆಲಸಿರುವೆನು.''

ಪೂರ್ವೋಕ್ತ ಶಕ್ತಿರಾಜ್ಯದಲ್ಲಿ ಯಾರು ಅದ್ಭುತಪ್ರಭಾವವನ್ನು ಒಮ್ಮೆ ಮನಗಂಡಿರುವರೋ ಅವರು ಜಗತ್ತು ಚಿರಕಾಲ ಶಕ್ತಿಪೂಜೆಯಲ್ಲಿ ನಿರತವಾಗಿತ್ತು ಎಂಬುದನ್ನು ಅರಿತಿರುವರು. ಶಕ್ತಿ ಆರಾಧನೆಯಿಲ್ಲದೆ ಬೇರಾವ ಉಪಾಸನೆಯೂ ಪ್ರಪಂಚದಲ್ಲಿ ಹಿಂದೆ ಇರಲಿಲ್ಲ ಮುಂದೆ ಇರುವಂತೆ ಇಲ್ಲ. ಜಡ ಚೇತನ ಸಕಲದರಲ್ಲಿಯೂ ಯುಗಯುಗಾಂತರಗಳಿಂದ ಮಾನವ ಶಕ್ತಿ ಆರಾಧನೆಯಲ್ಲಿ ನಿರತನಾಗಿದ್ದರೂ ಆ ಉಪಾಸನೆ ಇನ್ನೂ ಪೂರ್ಣವಾಗಿಲ್ಲ. ಇದು. ಯಾವುದಾದರೂ ಕಾಲಕ್ಕೆ ಸಾಧ್ಯವೆ? ಒಂದುವೇಳೆ ಇದು ಸಾಧ್ಯವಾದರೂ ಇದು ಕೂಡ ಶಕ್ತಿ ಸಹಾಯದಿಂದ.

"ಸೈಷಾ ಪ್ರಸನ್ನಾ ವರದಾ ನೃಣಾಂ ಭವತಿ ಮುಕ್ತಯೇ" ಅವಳು ಸುಪ್ರಸನ್ನಳಾದಾಗ ಮಾತ್ರ ಮುಕ್ತಿಗೆ ಸಹಾಯಕಳಾಗುವಳು.

ಶಕ್ತಿಪೂಜೆಯ ಫಲ ತಕ್ಷಣ ಪ್ರಾಪ್ತವಾಗುವುದು. ಅದರಲ್ಲಿಯೂ ಕಲಿಕಾಲದಲ್ಲಿ ಇತರ ದೇವತೆಗಳು ನಿದ್ರಿತರಾಗಿರುವರು. ಶಕ್ತಿಪೂಜೆಯ ಸಂಬಂಧವಾದ ತಂತ್ರಸಮೂಹ ವಿನಃ ಅನ್ಯಶಾಸ್ತ್ರವೆಲ್ಲ ನಿರ್ವಿಷಯ ಭುಜಂಗನ್ಯಾಯದಂತೆ ನಿಷ್ಪ್ರಯೋಜನವಾದ ತೋರಿಕೆ. ಇದು ಪೂರ್ಣ ಸತ್ಯವಲ್ಲದೇ ಇದ್ದರೂ ಇದರಲ್ಲಿ ಸ್ವಲ್ಪ ಸತ್ಯವಿದೆ. ನಾವು ಇದನ್ನು ಪ್ರತ್ಯಕ್ಷವಾಗಿ ನೋಡುತ್ತಿರುವೆವು. ಮಾನವ ಜಡ ಅಥವಾ ಮನೋರಾಜ್ಯದಲ್ಲಿ ಪಡೆದಿರುವ ಅಧಿಕಾರವೆಲ್ಲ ಶಕ್ತಿ ಆರಾಧನೆಯ ಫಲ. ಯಾವುದನ್ನು ಸಾಧಾರಣ ಮಾನವ ಜಡ ಶಕ್ತಿಯಂತೆ ಕಾಣುವನೋ ಆ ಶಕ್ತಿಯ ಆರಾಧನೆಯ ಫಲದಿಂದ ಶರೀರವಿಜ್ಞಾನ, ಭೂತವಿಜ್ಞಾನ, ರೋಗಶಾಂತಿ, ಮಹಾಮಾರಿ ಜಾಡ್ಯಗಳ ಪ್ರತಿಧಾನ, ಆಹಾರ

ಸೃಷ್ಟಿ, ಮತ್ತು ಧನಾರ್ಜನೆಗೆ ವಿವಿಧ ಉಪಾಯಗಳನ್ನು ಯುದ್ಧಕ್ಕೆ ಬೇಕಾಗುವಂತಹ ಅನ್ನವಸ್ತ್ರಗಳು ಅವನಿಗೆ ಕರತಲಾಮಲಕವಾಗಿರುವುವು. ಮಾನಸಿಕ ಶಕ್ತಿಯಂತೆ ನಮಗೆ ವ್ಯಕ್ತವಾಗಿರುವ ಮನೋವಿಜ್ಞಾನ, ಕವಿತ್ವ, ಸಂಯಮವಿವಾದ ವಿಧಾನ, ಸಭ್ಯತೆ, ನೀತಿ, ಸಮಾಜಸಂಘಟನ, ರಾಜನೀತಿ ಮುಂತಾದವು ಶಕ್ತಿಉಪಾಸನೆಯಿಂದ ಅವನ ಕರತಲಗತವಾಗಿರುವುವು. ಆಧ್ಯಾತ್ಮಿಕ ಶಕ್ತಿಯ ಉದ್ಬೋಧನದಿಂದ ಬ್ರಹ್ಮಚರ್ಯ, ಸತ್ಯ, ಸಂತೋಷ, ಶಮದಮಾದಿ ಸಾಧನಸಂಪತ್ತಿ ಕೊನೆಗೆ ಸರ್ವಬಾಧಾವಿನಿರ್ಮುಕ್ತಿ ರೂಪಲಾದ ಪರಮ ಪುರುಷಾರ್ಥ ಅವನಿಗೆ ಲಭಿಸುವುದು. ಇವು ಬಹುಕಾಲದಿಂದ ಬಹುಜನರ ಉಪಾಸನಾ ಪ್ರತಿಫಲವಾಗಿ ಬಂದಿದೆ. ಶ್ರದ್ಧಾಭಕ್ತಿ ಸಹಿತ ಮಾನವ ಎಷ್ಟನ್ನು ಉಪಾಸನೆ ಮಾಡಿರುವನೊ ಅದಕ್ಕೆ ತಕ್ಕ ಪರಿಣಾಮದಲ್ಲಿ ಅವನಿಗೆ ಪ್ರತಿಫಲ ಲಭಿಸಿದೆ. ಈ ಕಾಲದ ಉಪಾಸಕರ ಪ್ರತ್ಯಕ್ಷ ಅನುಭವವೂ ಅದೇ ಆಗಿರುವುದು.

ಪೂಜೆ ಸಾಂಗವಾಗಿ ವಿಧಿಪ್ರಕಾರ ಮಾಡದೆ ಶ್ರದ್ಧಾ, ವಿರಹಿತವಾಗಿದ್ದರೆ ಪೂರ್ಣಫಲ ದೊರಕುವುದಿಲ್ಲ. ಕೆಲವು ವೇಳೆ ಇದಕ್ಕೆ ವಿಪರೀತ ಫಲ ಕೂಡ ಲಭಿಸುವುದು. ಯಾವ ಯಾವ ಪೂಜೆಗೆ ಯಾವಯಾವ ಉಪಕರಣ ಆವಶ್ಯಕವೊ ಅದನ್ನು ಕಷ್ಟಸಾಧ್ಯವಾದರೂ ಒದಗಿಸಿಕೊಳ್ಳಬೇಕು. ಈ ಕಾರಣ ಸಮೋಹದಿಂದ ವಿಶೇಷ ಫಲ ಉತ್ಪತ್ತಿಯಾಗುವುದು. ಆದಕಾರಣವೇ ಅದನ್ನೆಲ್ಲಾ ಸಂಗ್ರಹಿಸಬೇಕು. ಈ ಸತ್ಯ ಇಷ್ಟು ಸುಲಭವಾಗಿದ್ದರೂ ಮಾನವ ಪದೇ ಪದೇ ಮರೆಯುವನು. ಈ ದೇಶದಲ್ಲಿ ನಾವು ಎಷ್ಟು ವೇಳೆ ಇದನ್ನು ಮರೆತಿಲ್ಲ. ಇದರಂತೆಯೇ ಪ್ರತಿಫಲ ಕೂಡ ನಮಗೆ ಬರುತ್ತಿದೆ. ಈಗ ದೇಶವೆಲ್ಲ ಶಕ್ತಿಪೂಜೆಯ ಆಡಂಬರದಲ್ಲಿ ನಿರತವಾಗಿದ್ದರೂ ನಿರ್ವೀರ್ಯರು, ಧರ್ಮಹೀನರು, ವಿದ್ಯಾಹೀನರು, ಧನಹೀನರು, ಅನ್ನಹೀನರು ಶ್ರೀಹೀನರು. ಈ ದೋಷಕ್ಕೆ ಕಾರಣ ಪೂಜಾವಿಧಿಯನ್ನು ಅತಿಕ್ರಮಿಸಿದ್ದು. ರಸಾಯನ ವಿಜ್ಞಾನದಲ್ಲಿ ಪಾಂಡಿತ್ಯವನ್ನು ಪಡೆಯಬೇಕೆಂದು ಯಾರಾದರೂ ತ್ರಿಸಂಧ್ಯಾಸ್ನಾನ, ಹವಿಷ್ಯಾನ್ನ ಭೋಜನ,ನಿರ್ಜನ ಪ್ರದೇಶದಲ್ಲಿ ಬೀಜಮಂತ್ರ ಜಪವನ್ನು ಪ್ರಾರಂಭಿಸಿದರೆ, ಆಗ ಪ್ರತಿಫಲಎಲ್ಲಿ ದೊರಕುವುದು? ಅವನ ಇಷ್ಟಶಕ್ತಿಯ ಉಪಾಸನೆ ಅಂಗಹೀನವಾಯಿತು. ಮಹಾಮಾರಿಯ ಉಪಟಳದಿಂದ ಪಾರಾಗಬೇಕೆಂದಿರು

ವಾಗ ಬಾಹ್ಯ ಶೌಚ ವಿಧಾನವನ್ನೆಲ್ಲಾ ಸಂಪೂರ್ಣ ಅಲ್ಲಗೆಳೆದು, ಆಹಾರ ಪಾನೀಯದಲ್ಲಿಯೂ ನಿರ್ಲಕ್ಷ್ಯವಾಗಿದ್ದು, ಒಂದೆರಡು ಗಂಟೆ ಹೊತ್ತು ಉಚ್ಚಕಂಠದಲ್ಲಿ ಹರಿಸಂಕೀರ್ತನೆ ಮಾಡಿದರೆ ಅವನನ್ನು ಹುಚ್ಚ ಎನ್ನದೆ ಮತ್ತೇನೆನ್ನಬೇಕು. ಅವನ ಇಷ್ಟಪೂಜೆಗೆ ಬೇಕಾದ ಉಪಕರಣಗಳಿಗೇ ಅತ್ಯಂತ ಅಭಾವ. ದುರ್ಭಿಕ್ಷದ ಕರಾಳವದನದಿಂದ ದೇಶವನ್ನು ರಕ್ಷಿಸಬೇಕೆಂದು ರಕ್ಷಾ ಕಾಳಿಯ ಪೂಜೆಮಾಡಿ ಒಬ್ಬ ನಿಶ್ಚಿಂತನಾಗಿದ್ದು, ನೂತನ ಉಪಾಯದ ಮೂಲಕ ಅರ್ಥವನ್ನು ಸಂಪಾದಿಸುವುದು, ಅನ್ನ ವೃದ್ಧಿಮಾಡುವುದು, ಅನ್ಯೋನ್ಯ ಉಪಯೋಗವಾದ ವೃತ್ತಿಗಳನ್ನು ಲಕ್ಷ್ಯದಲ್ಲಿಡದೆ ಇದ್ದರೆ ಅವರ ಆರಾಧನೆಯೂ ಕೂಡ ಅಂಗಹೀನವೆನ್ನದೆ ಮತ್ತೇನೆನ್ನಬೇಕು. ಸ್ವದೇಶದ ಕಲ್ಯಾಣ ಸಾಧನಕ್ಕಾಗಿ ಒಬ್ಬನು ಹಗಲು ರಾತ್ರಿ ಉಪನ್ಯಾಸ ಮಾಡುವುದರಲ್ಲಿ ನಿರತನಾಗಿ, ಸ್ವಲ್ಪ ಸ್ವಾರ್ಥತ್ಯಾಗ ಬಂದರೂ ಹಿಂದೆ ಸರಿಯುವನು. ಇಂತಹ ಉಪಾಸನೆಯಿಂದ ಎಂತಹ ಫಲ ಬಂದೀತು. ವಿವಾಹಕ್ಕೆ ತಕ್ಕ ಮಂತ್ರ ಹೇಳಬೇಕೆಂಬ ಗಾದೆ ಇದೆ. ಹೀಗೆ ಶ್ರದ್ಧಾಹೀನ, ವಿಧಿಹೀನ, ಮಂತ್ರಹೀನ, ಅದಕ್ಷಿಣ ಪೂಜೆ ಮಾಡಿ "ಪೂಜೆಯ ಫಲ" ದೊರಕಲಿಲ್ಲ ಎನ್ನುತ್ತೇವೆ. ಹೇ ಮಾನವ, ನಿನ್ನ ಸಹಜಬುದ್ಧಿ ಸಂಪೂರ್ಣ ನಾಶವಾಯಿತೆ? ಶಾಸ್ತ್ರ ಸಾರುವುದು, ಯಾವುದಾದರೂ ಕೆಲಸ ಆಗಬೇಕಾದರೆ ಐದು ಕರಣಗಳು ಇರಬೇಕು ಎಂದು :

> ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಂ
> ವಿವಿಧಾಶ್ಚ, ಪೃಥಕ್‌ಚೇಷ್ಟಾ ದೈವಂ ಚೈವಾತ್ರ ಪಂಚಮಮ್ —ಗೀತಾ

ಉಪಯುಕ್ತವಾದ ದೇಹ, ಉದ್ಯಮಶೀಲ ಕರ್ತ, ದೃಢವಾದ ಇಂದ್ರಿಯ ಪಟುತ್ವ, ಪುನಃ ಪುನಃ ಪ್ರಯತ್ನ, ಕೊನೆಯದಾಗಿ ದೈವ ಇವು ಐದು ಯಾವ ಕಾರ್ಯಕ್ಕಾದರೂ ಆವಶ್ಯಕ. ಪ್ರತಿದಿನವೂ ನಾವು ಇದನ್ನು ಗಮನಿಸುತ್ತಿರುವೆವು ; ಒಂದು ಕೈಯಲ್ಲಿ ದೈವ, ಮತ್ತೊಂದು ಕೈಯಲ್ಲಿ ಪುರುಷಕಾರ ಎರಡನ್ನೂ ಯಾರು ದೃಢವಾಗಿ ಹಿಡಿದಿರುವರೊ ಅವರು ತಮ್ಮ ಗಂತವ್ಯವನ್ನು ಸೇರುವರು. ಇಲ್ಲದೆ ಇದ್ದರೆ ದೇವರು ನಿಮಗೆ ಪುರುಷಾಕಾರವನ್ನು ಮತ್ತು ನಿರ್ಭರಭಾವವನ್ನು ಏತಕ್ಕೆ ಕೊಟ್ಟಿರುವುದು? ಒಮ್ಮೆ ಸರಿಯಾಗಿ ಆಲೋಚಿಸಿ ನೋಡಿ. ಭಾರತದ ಪೂರ್ವ ಋಷಿಗಳ ಮನೋವಿಜ್ಞಾನ, ಶರೀರವಿಜ್ಞಾನ, ಜ್ಯೋತಿಷ್ಯ, ರಾಜನೀತಿ, ಮುಂತಾದವುಗಳಲ್ಲಿ ಪಾಂಡಿತ್ಯವನ್ನು ಸಂಪಾದಿ

ಸಿದ್ಧರು. ಇವೆಲ್ಲಾ ಕೇವಲ ಮಂತ್ರ ಶಕ್ತಿಯ ಸಹಾಯದಿಂದಲೆ ಅಥವಾ ಯಾವ ಕಾರ್ಯವನ್ನೂ ಮಾಡದೆ ಅದೃಷ್ಟವನ್ನು ನೆಚ್ಚಿಕೊಂಡಿದ್ದರೆ? ಭಾರತದಲ್ಲಿರುವ ತಾಂತ್ರಿಕ ಅವಧೂತ ಸನ್ಯಾಸಿಗಳು, ವಿವಿಧ ಸಿದ್ಧಾಂತ ಪಥಗಳನ್ನು ಪ್ರಯೋಗಮಾಡಿ ರೋಗರುಜಿನಗಳಿಗೆ ಚಿಕಿತ್ಸೆಯನ್ನು ಕಂಡುಹಿಡಿದರು. ಅವರಲ್ಲಿ ಎಂತಹ ನಿರ್ಭೀತ ಉದ್ಯಮಶೀಲತೆ ಮತ್ತು ಆವಿಷ್ಕಾರ ಬುದ್ಧಿ ಇತ್ತು! ಎಷ್ಟು ಜನ ಸಾಧಕರ, ಅನುರಾಗ ಭಕ್ತಿಪೂತ ಹೃದಯದಿಂದ ಶಕ್ತಿಪೂಜೆಯ ಫಲವಾಗಿ. ಇವುಗಳೆಲ್ಲ, ಒಂದೊಂದಾಗಿ ಆವಿಷ್ಕೃತವಾದುವು. ಈಗ ಕೆಲವರು ಯಾವುದಾದರೂ ವಿಷಯದ ಮೇಲೆ ತಮ್ಮ ಹೃದಯ ರಕ್ತವನ್ನು ಅರ್ಪಿಸಿ ಸಂಶೋಧನೆ ನಡೆಸುತ್ತಿದ್ದರೆ ನೀವು ಅವನನ್ನು ದುರುಗುಟ್ಟಿಕೊಂಡು ನೋಡುವಿರಿ. ಬಲಿದಾನ ಅಥವಾ ಸ್ವಾರ್ಥತ್ಯಾಗದ ಮಾತನ್ನು ಕೇಳಿದೊಡನೆಯೆ ನೀವು ಹತಜ್ಞಾನರಾಗುವಿರಿ. ಆದರೆ ನೀವು ಇದನ್ನು ಕೇಳಿ; ಭಾರತೀಯ ಋಷಿಗಳು ಕಾರ್ಯದ ಮೂಲಕ ವ್ಯಕ್ತಪಡಿಸುತ್ತಾ ಚಿರಕಾಲ ಇದನ್ನು ಘೋಷಣ ಮಾಡುತ್ತಿರುವರು: ಶ್ರದ್ಧಾ ಮತ್ತು ಭಕ್ತಿಸಹಿತ ಧೀರಭಾವದಿಂದ ಯೋಗ್ಯವಾದ ಉಪಾಯವನ್ನು ಅವಲಂಬಿಸಿ ಎಲ್ಲ ಕಷ್ಟವನ್ನೂ ಸಹಿಸಿ, ಹೃದಯದ ರಕ್ತವನ್ನೆಲ್ಲಾ ಧಾರೆಯೆರೆಯುವುದನ್ನು ಸ್ವೀಕರಿಸಿ, ಶಕ್ತಿಯ ಪ್ರಾಣಪ್ರತಿಷ್ಠಾಪನೆ ಮಾಡಿ ಪೂಜೆಗೆ ಆರಂಭಿಸಿ. ನಿಮಗೆ ಯಾವುದು ಪ್ರಿಯವಾಗಿರಲಿ ಅತ್ಯಂತ ಪ್ರಿಯವಾದ ದೇಹ ಮನವನ್ನೂ ಕೂಡ ಇಷ್ಟಲಾಭೋದ್ದೇಶಕ್ಕೆ ದೇವಿಯ ಸಮ್ಮುಖದಲ್ಲಿ ಬಲಿದಾನಮಾಡಿ. ಆಗ ನೋಡಿ, ನೀವು ಯಾವ ಉದ್ದೇಶದಿಂದ ಪೂಜೆ ಮಾಡುವಿರೋ ಅದು ಸಿದ್ಧಿಸುವುದು. ನಿಮ್ಮ ಏಕಾಗ್ರವಾದ ಭಕ್ತಿಪೂತ ಸಾಧನೆಯ ಪ್ರತಿಫಲವಾಗಿ ನಿಮ್ಮ ಕುಲ, ಜಾತಿ, ದೇಶ. ಎಲ್ಲಕ್ಕೂ ಮಹಾ ಕಲ್ಯಾಣವಾಗುವುದು. ನೀವೂ ಧನ್ಯರಾಗಿ ಇತರರ ಧನ್ಯತೆಗೂ ಕಾರಣರಾಗುವಿರಿ.

ಬಲಿಪ್ರದಾನ ಅಥವಾ ಸ್ವಾರ್ಥತ್ಯಾಗವಿಲ್ಲದೆ ಶಕ್ತಿಪೂಜೆ ಅಸಂಪೂರ್ಣ. ಫಲವೂ ತದ್ರೂಪವೆ. ಮೇಕೆ ಅಥವಾ ಮಹಿಷಬಲಿ ಕೇವಲ ಅನುಕಲ್ಪ ಮಾತ್ರ (subtistute) ಯಾವ ಉದ್ದೇಶದಿಂದ ನಾನು ಪೂಜೆಮಾಡುತ್ತಿರುವೆಯೋ ಅದಕ್ಕಾಗಿ ನೀನು ಹೃದಯರಕ್ತವನ್ನು ಅರ್ಪಿಸಿ ನಿನ್ನ ಶರೀರ, ಮನಸ್ಸನ್ನು ಸಂಪೂರ್ಣ ತ್ಯಾಗಮಾಡದೆ ಇದ್ದರೆ, ಯಾವ ವಿಧವಾದ ಶಕ್ತಿಪೂಜೆಯಿಂದಲೂ

ಫಲ ಅಸಂಭವ. ವೇದ ಸಾರುವುದು, "ತ್ಯಾಗೇ ನೈಕೇ ಅಮೃತತ ಮಾನುಷುಃ". ಆತ್ಮಜ್ಞಾನ ಪಡೆದು ಅಮೃತನಾಗಲು ತ್ಯಾಗವೊಂದೇ ಏಕಮಾತ್ರ ಉಪಾಯ. ಆತ್ಮಜ್ಞಾನ ಮಾತ್ರವಲ್ಲ. ಸ್ವಾರ್ಥಸುಖತ್ಯಾಗ ಮಾಡದೇ ಇದ್ದರೆ ಪ್ರಪಂಚದಲ್ಲಿ ಯಾವ ಮಹದ್ ವಿಷಯವನ್ನೂ ಪಡೆಯಲಾರೆವು. ಇಂತಹ ವಿಧವಾದ ತ್ಯಾಗದಿಂದ ಅಮೃತತ್ವದ ಲಾಭ. ವಿದ್ಯೆಕ್ಕಾಗಿ ತ್ಯಾಗಮಾಡಿದರೆ ಪ್ರಭುತ್ವಲಾಭ; ಇದರಂತೆಯೇ ಇತರ ಕಾರ್ಯಕ್ಷೇತ್ರಗಳಲ್ಲಿಯೂ ತ್ಯಾಗ ಅಥವಾ ಬಲಿಯ ಮಹತ್ಮ್ಯೆ, ನಿತ್ಯಪ್ರತ್ಯಕ್ಷ ಇವನ್ನೆಲ್ಲಾ ಸಂಪಾದಿಸಬೇಕಾದರೆ ತ್ಯಾಗ ಬೇಕು. ಅದನ್ನು ರಕ್ಷಿಸಬೇಕಾದರೆ ತ್ಯಾಗ ಬೇಕು. ಇದು ನಿತ್ಯಪ್ರತ್ಯಕ್ಷ.

ಯಾವ ಉದ್ದೇಶದಿಂದಲಾದರೂ ಆಗಲಿ, ಶಕ್ತಿಪೂಜೆಯಲ್ಲಿ ಸಿದಿ ಲಭಿಸಬೇಕಾದರೆ ವೃಥಾ ಶಕ್ತಿಕ್ಷಯವನ್ನು ನಿವಾರಿಸಬೇಕು. ಸರ್ವಶಕ್ತಿಯ ಆಕಾರವಾದ ಅಂತರಸ್ತನಾದ ಆತನನ್ನು ಸೇರಿ ಮಹಾಶಕ್ತಿಯ ಅವತರಣಕ್ಕೆ ಮಾರ್ಗವನ್ನು ಪರಿಷ್ಕಾರವಾಗಿಡಬೇಕು. ಅನಂತರ ಶ್ರದ್ಧೆ ಆವಾಹನಾದಿಗಳ ಮೂಲಕ ಪೂಜೆ ಮಾಡಿ ಆತ್ಮಬಲಿದಾನಮಾಡಿ ಮಹಾಶಕ್ತಿಯ ಪ್ರಸನ್ನತೆ ಯನ್ನು ಪಡೆಯಬೇಕು. ಆಗ ದೇವಿ ಸುಪ್ರೀತಳಾಗಿ ಸಾಧಕನ ಪ್ರಾಣ ಮನ ಗಳಲ್ಲಿ ಅಪೂರ್ವಬಲ ಸಂಚರಿಸುವಂತೆ ಮಾಡಿ. ಈಪ್ಸಿತಾರ್ಥಗಳನ್ನೆಲ್ಲಾ ನೀಡುವಳು. ನೀನು ಇದನ್ನೆಲ್ಲಾ ಮಾಡಿದರೆ ಫಲಸಿದ್ಧಿ. ಕರತಲಾಗತ ಮಾಡುವುದನ್ನೆಲ್ಲಾ ಅವಳೇ ಮಾಡುವಳು. ಸಾಧಕನ ಮನ ಪ್ರಾಣ ಕೇವಲ ನಿಮಿತ್ತಮಾತ್ರ.

ವಿಘ್ನೋತ್ಸರಣ ಭೂತಬಲಿ, ಭೂತಶುದ್ಧಿ, ನ್ಯಾಸ, ಪ್ರಾಣಾಯಾಮ ಮುಂತಾದುವನ್ನು ಪ್ರಾರಂಭದಲ್ಲಿ ಮಾಡುವ ಉದ್ದೇಶ ಕೂಡ ಸಾಧಕನ ವೃಥಾ ಶಕ್ತಿಕ್ಷಯವನ್ನು ತಪ್ಪಿಸುವುದಕ್ಕೆ. ಯಾವ ಉಪಾಯದಿಂದಲಾದರೂ ಆಗಲಿ, ವೃಥಾಶಕ್ತಿಕ್ಷಯವನ್ನು ನಾವು ತಪ್ಪಿಸಿದರೆ ನಾವು ಉದ್ದಿಷ್ಟವಿಷಯ ಲಾಭದಲ್ಲಿ ಪ್ರಥಮ ಸೋಪಾನವನ್ನು ಏರಿದಂತೆಯೇ ಆಯಿತು. ಅಂತರ್ಹಿತ ಪರಮಾತ್ಮನ ಧ್ಯಾನದಿಂದ ನೀನು ಇಚ್ಛಿಸುವ ಉದ್ದೇಶಕ್ಕೆ ಯಾವ ಶಕ್ತಿ ಆವಶ್ಯಕವೋ ಅದು ನಿನ್ನಲ್ಲಿ ಉದ್ಬೋಧಿತವಾಯಿತು. ಪೂಜೆ ಮತ್ತು ಸ್ವಾರ್ಥ ತ್ಯಾಗದಿಂದ ಶಕ್ತಿ ಸಂಚಿತವಾಗಿ ಘನೀಭೂತವಾಗಿ ಆ ಮೂರ್ತಿ ಆಕಾರ ತಾಳಿ ಪ್ರಕಾಶಿತವಾಯಿತು. ಕೊನೆಗೆ ನವಶಕ್ತಿಯ ನಿಯೋಗದಿಂದ ಅಭೀಷ್ಟಫಲ ಕರತಲಗತವಾಯಿತು.

ಸರ್ವದೇಶ ಸರ್ವಕಾಲದಲ್ಲಿ ಸರ್ವಫಲ ಸಿದ್ಧಿ ಸಂಬಂಧದಲ್ಲಿಯೂ ಈ ನಿಯಮ ಜಾರಿಯಲ್ಲಿದೆ. ಶಕ್ತಿಕ್ಷಯನಿವಾರಣೆ, ಅಂತರ್ನಿಹತ ಮಹಾಶಕ್ತಿಯ ಧ್ಯಾನ ಮತ್ತು ಆತ್ಮ, ಬಲಿದಾನ, ಇವು ಆವಶ್ಯಕ. ಶಂಖ, ಗಂಟೆ, ಧೂಪದೀಪಾದಿ ಆಡಂಬರ ಇರಲಿ ಇಲ್ಲದಿರಲಿ ಸರ್ವಶಕ್ತಿಯೂ ಸಾಧಕನಲ್ಲಿ ಅಂತರ್ನಿಹಿತ ವಾಗಿರುವುದು. ಈ ವಿಷಯ ಅವರಿಗೆ ಗೊತ್ತಿರಲಿ ಗೊತ್ತಿಲ್ಲದಿರಲಿ ಈ ಶಕ್ತಿ ಅವರಿಗೆ ವಿಕಾಸವಾಗುವ ಸ್ಥಿತಿ ಗೊತ್ತಿರಲಿ ಇಲ್ಲದಿರಲಿ ಯಾವುದನ್ನೂ ಅವರು ಪಡೆಯಬೇಕೆಂದಿರುವರೋ ಅದರ ಮೇಲೆ ತೀವ್ರ ಅನುರಾಗ ಮತ್ತು ಧ್ಯಾನ ಮಾತ್ರ ಸರ್ವಕಾಲದಲ್ಲಿಯೂ ಸರ್ವಸಾಧಕರಲ್ಲಿಯೂ ಪೂರ್ವೋಕ್ತ ಕ್ರಮದಲ್ಲಿ ಫಲಸಿದ್ಧಿಯನ್ನು ನೀಡಿರುವುದು. ಇದನ್ನು ಸ್ವಲ್ಪ ಯೋಚಿಸಿದರೆ ಗೊತ್ತಾಗುವುದು.

ಅನೇಕ ಪಾಶ್ಚಾತ್ಯ ದಾರ್ಶನಿಕರು ಶಕ್ತಿಯನ್ನು ಜಡ ಎನ್ನುವರು. ಜಡ ಪರಮಾಣುಪುಂಜದಲ್ಲಿ ಜಡಶಕ್ತಿಯ ಲೀಲೆಯಲ್ಲದೆ ಮತ್ತೇನೂ ಅವರ ಕಣ್ಣಿಗೆ ಗೋಚರಿಸದು. ವಿಚಿತ್ರ ಬಹಿರ್ ಜಗತ್, ಇದಕ್ಕಿಂತಲೂ ಸಮಧಿಕ ವಿಸ್ಮಯಕರ ಮಾನವನ ಅಂತರ್ ಜಗತ್ತು ಕೂಡ ಪೂರ್ವೋಕ್ತ ಜಡಪಿತಾಮಾತಯ ಜಡಲೀಲಾಪ್ರಸೂತಿ ಜಡಸಂತಾನ ಎಂಬುದು ಅದನ್ನು ಮನಸ್ಸು, ಬುದ್ಧಿ, ಆತ್ಮ ಎಂದು ಏನುಬೇಕಾದರೂ ಕರೆಯಬಹುದು. ಅವೆಲ್ಲಾ ಹೀಗೆ ಉತ್ಪತ್ತಿಯಾಗುವುದು. ಮತ್ತೊಂದು ಪಂಗಡದವರು ಶಕ್ತಿ ಜಡ ಚೇತನದಂತೆ ಎರಡು ವಿಧವಾಗಿ ಕಾಣುತ್ತಿದೆ ಎನ್ನುವರು. ಈ ಎರಡು ಶಕ್ತಿಗಳ ಲೀಲೆಯಿಂದ ಉಭಯ ಜಗತ್ತು ಜನಿಸಿತು. ಸೂಕ್ಷ್ಮ ಚೈತನ್ಯಶಕ್ತಿ ತನ್ನ ಭಗಿನಿಯಾದ ಸ್ಥೂಲ ಜಡಶಕ್ತಿಯನ್ನು ತನ್ನ ಅಧೀನದಲ್ಲಿಟ್ಟುಕೊಂಡು ನಡೆಸುವುದು.

ಶಕ್ತಿಸಂಬಂಧದ ಜ್ಞಾನದಲ್ಲಿ ಪಾಶ್ಚಾತ್ಯರಲ್ಲಿ ಎಲ್ಲೋ ಒಬ್ಬಿಬ್ಬರು ಭಾರತೀಯ ಋಷಿಗಳ ಜ್ಞಾನವನ್ನು ಸಮೀಪಿಸಿರುವರು. ಅವರು ಅನುಮಾನದ ಸಹಾಯದಿಂದ ಬಂದಿರುವರೇ ಹೊರತು ಭಾರತೀಯ ಋಷಿಗಳಂತೆ ಅನುಭೂತಿಯ ಫಲದಿಂದ ಅಲ್ಲ. ಯುರೋಪ್ ಮತ್ತು ಅಮೆರಿಕಾ ದೇಶೀಯರು ಇತ್ತೀಚಿಗೆ ಮಾತ್ರ ಚಾರ್ವಾಕರ ಮತದಿಂದ ಸ್ವಲ್ಪ ಮುಂದೆ ಹೋಗಿರುವರು. ಯುದ್ಧ ವಿಗ್ರಹ ಧನಾಗಮಕೌಶಲ, ಹಲವು ಜನ ಒಂದುಕಡೆ ವಾಸಿಸುವುದು, ಒಂದೇ ಉದ್ದೇಶಕ್ಕಾಗಿ ಹೋರಾಡುವುದು, ಭೌತಿಕ ಶಕ್ತಿಯ ಆಧಿಪತ್ಯ ವಿಸ್ತರಣೆ, ವೈಶ್ಯ

ಮತ್ತು ಇದುವರೆಗೆ ನಿಕೃಷ್ಟ ದೃಷ್ಟಿಗೆ ಪಾತ್ರನಾದ ಶೂದ್ರ ಇವರಲ್ಲಿ ಅಂತರ್ ನಿಹಿತವಾದ ಶಕ್ತಿಯ ಅಪೂರ್ವ ವಿಕಾಸ ಇವುಗಳನ್ನೆಲ್ಲಾ ನಾವು ಪಾಶ್ಚಾತ್ಯರಿಂದ ಕಲಿತುಕೊಳ್ಳಬೇಕಾದುದೇನೊ ಯೋಗ್ಯ. ಮಾನಸಿಕ ಮತ್ತು ಆಧ್ಯಾತ್ಮಿಕ ರಾಜ್ಯದಲ್ಲಿ ಉಚ್ಚತರ ಆಧ್ಯಾತ್ಮಿಕ ಶಕ್ತಿ, ಮೇಲೆ ಹೇಳಿದ ಎರಡು ದೇಶಗಳಲ್ಲಿಯೂ ಅಧಿಪತ್ಯ ಮಾಡಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಅಲ್ಲಿ "ಯಾ ನಿಶಾ ಸರ್ವ ಭೂತಾನಂ ತಸ್ಯಾಂ ಜಾಗ್ರತಿ ಸಂಯಮಿ" —ವಿಷಯಾಸಕ್ತ ವ್ಯಕ್ತಿಗೆ ಎಲ್ಲಿ ಅಂಧಕಾರವೋ ಅಲ್ಲಿ ಸಂಯಮಿ ಬೆಳಕನ್ನು ನೋಡುವನು—ಎಂಬ ಭಾರತೀಯ ಋಷಿಯ ಪುರಾತನ ವಾಣಿ ಈಗಲೂ ಸತ್ಯ. ಈಗಲೂ ಆ ದೇಶಗಳಲ್ಲಿ ಭಾರತೀಯ ಋಷಿಗಳ ಪೂರ್ವಾಧಿಪತ್ಯ ತಗ್ಗಿಲ್ಲ. ಆದಕಾರಣವೆ ಭಾರತೀಯ ವೇದ ವೇದಾಂತ ಗಂಭೀರ ಧ್ವನಿಗೆ ಈಗಲೂ ಪಾಶ್ಚಾತ್ಯ ಜಗತ್ತು ಮೋಹಿತವಾಗಿರುವುದು; ಸ್ತಬ್ಧವಾಗಿರುವುದು.

ಶಕ್ತಿಯ ಜಡಸ್ವರೂಪದ ಭಾವನೆ ಹೊಸದಲ್ಲ. ಬಹು ಸಹಸ್ರ ವರ್ಷಗಳ ಹಿಂದೆ ಭಾರತದ ಕಪಿಲಾದಿ ಋಷಿಗಳು ಈ ಭಾವನೆಯನ್ನು ಪ್ರಚಾರ ಮಾಡಿರುವರು. ಆಗಿನ ಕಾಲದ ಜಡವಾದಿಗಳಿಗೂ ಆಧುನಿಕ ಪಾಶ್ಚಾತ್ಯ ಗಣದ ಜಡವಾದಕ್ಕೂ ಎಷ್ಟೋ ವ್ಯತ್ಯಾಸವಿದೆ. ಯಾವ ಶಕ್ತಿ, ಕಾರ್ಯ ಅಕಾರ್ಯವನ್ನು ವಿಮರ್ಶಿಸಬಲ್ಲ ಮಾನವ ಬುದ್ಧಿಗೆ ಜನ್ಮ ಕೊಟ್ಟಿದೆಯೋ ಅದು ಮಾನವ ಬುದ್ಧಿಗಿಂತ ಕೀಳು ಎಂಬ ಭಾವನೆ ಋಷಿಗಳಿಗೆ ಸ್ವಪ್ನದಲ್ಲಿಯೂ ಅಗೋಚರ. ಕಾರ್ಯ ಎಂದಾದರೂ ಕಾರಣಕ್ಕೆ ಗುರುವಾಗಬಲ್ಲದೆ? ಯಾವುದು ಕಾರಣದಲ್ಲಿದೆಯೋ ಅದು ಕಾರ್ಯದಲ್ಲಿ ವ್ಯಕ್ತವಾಗುವುದು. ಈ ವಿಷಯ ಋಷಿಗಣಕ್ಕೇ ಏಕೆ ಸರ್ವ ವಾದಿಗಳಿಗೂ ಸಮ್ಮತ.

ಭಾರತದಲ್ಲಿ ಋಷಿಗಳ ಶಕ್ತಿ ತಾನೆ ಸ್ವಂತ ಏನನ್ನೂ ಮಾಡದೆ ಇದ್ದರೂ ನಿತ್ಯಚೈತನ್ಯಮಯ ಪುರುಷನ ಸಮೀಪದಲ್ಲಿರುವುದರಿಂದ ಶಕ್ತಿಯಲ್ಲಿಯೂ ಅದು ವ್ಯಕ್ತವಾಗಿರುವುದೆಂದು ಒಪ್ಪಿಕೊಳ್ಳುವವರು. ಅವರು ಹೇಳುತ್ತಾರೆ. ಶಕ್ತಿ ಮತ್ತು ಶಕ್ತಿಮಾನ್ ಮಾತನಾಡುವಾಗ ಕಲ್ಪನೆಯ ಮೂಲಕ ಬೇರ್ಪಡಿಸಿದರೂ ಯಾರಾದರೂ ಅದನ್ನು ಬೇರ್ಪಡಿಸಲು ಸಾಧ್ಯವೆ ಎಂದು? ಅಗ್ನಿ ಮತ್ತು ಅದರ ದಾಹಿತ ಶಕ್ತಿಯನ್ನು ಯಾರಾದರೂ ಬೇರ್ಪಡಿಸಿರುವುದನ್ನು ನೋಡಿರುವಿರೇನು? ಅನೇಕದರಲ್ಲಿ ಏಕವನ್ನು ಅರಸುತ್ತಾ ಕೊನೆಗೆ ದ್ವೈತಾ

ದ್ವೈತ ವಿವರ್ಜಿತ ಸತ್ಯವನ್ನು ಭಾರತೀಯ ಋಷಿಗಳು ಸೇರಿರುವರು. ಬಾಹ್ಯ ಮತ್ತು ಆಂತರಿಕ ಜಗತ್ತುಗಳೆರಡೂ ಒಂದೇ ಶಕ್ತಿಯಿಂದ ಜನಿಸಿದೆ ಎಂದು ಅವರು ಅನುಭವಿಸಿರುವರು. ಕೊನೆಯವರೆಗೆ ಅವರು ಶಕ್ತಿ ಮತ್ತು ಶಕ್ತಿವಾನ್ ಒಟ್ಟಿಗೆ ಇರುವುದನ್ನು ನೋಡಿರುವರು. ಆದಕಾರಣವೇ ಅವರು ಹೇಳಿದ್ದು—

ನಿತ್ಯೈವ ಸಾ ಜಗನ್ಮೂರ್ತಿಸ್ತಯಾಂ ಸರ್ವಮಿದಂ ತತಂ (ಚಂಡಿ)
ಮಮ ಯೋನಿರಪ್ ಸ್ವಂತಃ ಸಮುದ್ರೇ (ದೇವೀಸೂಕ್ತ)

"ದೇವಿ ವಿಶ್ವಸ್ವರೂಪ, ಈ ಜಗತ್ತೇ ಅವಳ ದೇಹ, ಅವಳು ಅಖಂಡ ಬ್ರಹ್ಮಾಂಡವನ್ನು ವ್ಯಾಪಿಸಿರುವಳು" "ಎಲ್ಲಿಂದ ಜೀವ ಜಗತ್ತು ಪ್ರಭುತಿ ಇತ್ಯಾದಿಗಳೆಲ್ಲ ಬರುವುವೋ ಅವುಗಳೆಲ್ಲದರ ಕಾರಣಸ್ವರೂಪಿಣಿ ನಾನೆ. ಪರಬ್ರಹ್ಮನೊಡನೆ ನಿತ್ಯ ಇರುವವಳು ನಾನೆ" ಆದಕಾರಣವೆ ದೇವಗಣ ಶಕ್ತಿಯನ್ನು ಸ್ತುತಿಸುವಾಗ ಹೀಗೆ ಹೇಳುತ್ತಾರೆ :

ಯಾ ದೇವಿ ಸರ್ವಭೂತೇಷು ಚೇತನೇತ್ಯಭಿಧೀಯತೇ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ (ಚಂಡಿ)

ಯಾವ ದೇವಿ ಸರ್ವಭೂತಗಳಲ್ಲಿ ಚೇತನದಂತೆ ನೆಲೆಸಿರುವಳೋ ಅವಳಿಗೆ ಅನಂತ ನಮಸ್ಕಾರಗಳು.

ಶಕ್ತಿ ಚೈತನ್ಯದೊಂದಿಗೆ ಮಿಲನವಾಗಿರುವುದನ್ನು ಕಂಡು ವಿಶೇಷ ಶಕ್ತಿಶಾಲಿ ಪದಾರ್ಥಗಳಲ್ಲಿ ಶವಶಿವ ಆರಾಧನೆಯನ್ನು ಬಳಕೆಗೆ ತಂದರು. ಆಕಾಶ ಚುಂಬಿತ ಪರ್ವತಮಾಲೆ. ಸಾಗರವಾಹಿನೀ ನದನದಿ. ಉಷೆಯ ರಕ್ತಕಿರಣಗಳು ಸಂಜೆವೆಣ್ಣಿನ ತಿಮಿರೆಯ ಅವಗುಂಠನ ಇವುಗಳೆಲ್ಲ ಭಾರತೀಯ ಋಷಿಗಳ ಕಣ್ಣಿಗೆ ಅನಂತ ಬ್ರಹ್ಮಾಂಡ ಪ್ರಸವಿನೀ ದೇವಿಯ ಪ್ರತೀತಸ್ವರೂಪವಾಗಿ ಅಲ್ಲಿ ಅವಳ ಸೌಮ್ಯ, ಸೌಮ್ಯತರ ಮೂರ್ತಿ ಪ್ರಕಾಶಿತವಾಯಿತು. ಅಮಾವಾಸ್ಯೆಯ ರಾತ್ರಿಯ ಸೂಚೀಭೇದ್ಯ ಅಂಧಕಾರ, ಮೃತ್ಯುವಿನ ನಿಷ್ಠುರಚಿತ್ರ, ಸ್ಮಶಾನದ ಕಠೋರ–ಉದಾಸೀನತೆ ಕಾಲನ ಸಂಹಾರಛಾಯೆ— ಇವುಗಳೆಲ್ಲ ಆ ಕರಾಳ ವದನದಲ್ಲಿ ಕೋಮಲ ಕಠೋರಭಾವದಲ್ಲಿ ಏಕಕಾಲದಲ್ಲಿ ಒಂದೆಡೆ ಇರುವುದನ್ನು ಅವರಿಗೆ ತೋರಿ ಮುಗ್ಧರನ್ನಾಗಿ ಮಾಡಿದಳು. ದೇವಾಸುರರ ನಿತ್ಯಸಂಗ್ರಾಮ ಸ್ಥಳ ಮನುಷ್ಯನ ಮನಸ್ಸು, ಇಲ್ಲಿ ದೇವಿಯ ವಿಶೇಷ ಪ್ರಕಾಶವನ್ನು ಮನಗಂಡು,

ಇಲ್ಲಿ ವಿಶೇಷ ಆರಾಧನಾವಿದಾನವನ್ನು ಜಾರಿಗೆ ತಂದರು- ದಾರಿತೋರುವ ಗುರುವಿನಹೃದಯದಲ್ಲಿ ಜಗದ್ಮೋಹಿನೀ ಸ್ತ್ರೀಮೂರ್ತಿಯಲ್ಲಿ ವಿದ್ಯಾ ಕ್ಷಮಾ. ಶಾಂತಿ, ಮೋಹ, ನಿದ್ರಾ, ಭ್ರಾಂತಿ ಮುಂತಾದವುಗಳಲ್ಲಿ ಸಾತ್ವಿಕ ಮತ್ತು ತಾಮಸಿಕ ಗುಣಗಳಲ್ಲಿ. ಸಂಸಾರದ ವಿಶೇಷ ಗುಣಶಾಲಿ ವಸ್ತು ಮತ್ತು ವ್ಯಕ್ತಿಯಲ್ಲಿ, ಅದ್ವಿತೀಯ ವರಾಭಯಕರಾ ಮುಂಡಮಾಲಿನಿ ದೇವಿಯ ಆವಿರ್ಭಾವವನ್ನು ಕಂಡು, ಶ್ರದ್ಧೆಯಿಂದ ಆರಾಧನೆಮಾಡಿ, ಅವರು ತಾವು ಕೃತಾರ್ಥರಾಗಿ, ಮಾನವರು, ಆ ಪಥದಲ್ಲಿ ಹೋಗಿ ಕೃತಾರ್ಥರಾಗಲು ಶಿಕ್ಷಣ ಕೊಟ್ಟಿರುವರು.

ಯಾವ ಯಾವ ಸ್ಥಳದಲ್ಲಿ ಶಕ್ತಿಯ ಯಾವ ಯಾವ ವಿಶೇಷ ಪ್ರಕಾಶ ಮತ್ತು ಅದರ ಪೂಜಾವಿಧಾನ ಇವುಗಳನ್ನೆಲ್ಲಾ ಇನ್ನು ಮೇಲೆ ಹೇಳಲು ಪ್ರಾರಂಭಿಸುವೆನು ; ಉಪಸಂಹಾರದಲ್ಲಿ ಇದನ್ನು ಮಾತ್ರ ಹೇಳುತ್ತೇನೆ. ಭಾರತೀಯ ಕುಲದೇವಿ, ದುಃಸ್ವಪ್ನನಾಶಿನೀ, ಶಿವಾನಿಯ ಉಪಾಸನೆಯಲ್ಲಿ ಆತ್ಮಬಲಿದಾನದ ಜ್ವಲಂತ ಮಹಿಮೆಯನ್ನು ನೋಡಬೇಕೆಂದು ಅನುಭವಿಸ ಬೇಕೆಂದು ಇಚ್ಛೆ ಇದ್ದರೆ ಬನ್ನಿ. ನಿಮಾಲಿತ ನೇತ್ರರಾಗಿ ಧ್ಯಾನ ಸಹಾಯದಿಂದ ದಕ್ಷಿಣೇಶ್ವರದ ಪಂಚವಟಿ ತಲದಲ್ಲಿ ಕುಟೀರದಲ್ಲಿರುವ ಶಕ್ತಿ ಸೇವೆಯಲ್ಲಿ ತನ್ನನ್ನು ಮರೆತ ದೇವಮಾನವ ಪ್ರೇಮಿಯ ಪದಪ್ರಾಂತ್ಯಕ್ಕೆ— ಯಾರಿಂದ ಉಪದೇಶ ಪಡೆದು ಇಂದು ಶ್ರೀ ವಿವೇಕಾನಂದ ದೂರದ ಯುರೋಪ್ ಮತ್ತು ಅಮೆರಿಕಾ ದೇಶದಲ್ಲಿ ಚಿರ ಪದದಲಿತ ಹಿಂದೂಗಳ ಧರ್ಮಧ್ವಜವನ್ನು ಸಗೌರವದಿಂದ ಮೇಲೆತ್ತಿರುವರೋ, ತೀರ್ಥಸಮನಾದ ಅವರ ಪಾದಪದ್ಮಗಳೆಡೆಗೆ ಬನ್ನಿ, ಸ್ವಲ್ಪಹೊತ್ತು ಅಲ್ಲಿ ನಿಲ್ಲುವ.

೨. ಅವತಾರ ಶಕ್ತಿ ಮತ್ತು ಗುರುಪ್ರತೀಕ

ಮೇಲೆ ಅನೇಕ ಕೋಟಿ ಬ್ರಹ್ಮಾಂಡಗಳ ಚಲನವಲನಗಳಿಂದ ಕೂಡಿದ ಶ್ಯಾಮಲಾಕಾರ, ಕೆಳಗೆ ಸಸ್ಯಶ್ಯಾಮಲಗಳಿಂದ ಕೂಡಿದ ವಸುಂಧರೆಯ ವಕ್ಷದ ಮೇಲೆ ಶ್ಯಾಮಲ ವರ್ಣದ ಅಚಲಮಾಲೆಗಳಂತೆ ಇರುವ ಕೃಷ್ಣವರ್ಣದ ಮೋಡ ಗಳಿಂದ ಅಲಂಕೃತವಾದ ಗಿರಿಶೃಂಗಗಳು ಇದರ ತಳದಲ್ಲಿ ಚಿರಚಂಚಲವಾದ ಶ್ಯಾಮಲ ಜಲಧಿಯ ತರಂಗಗಳ ಪ್ರಳಯ ತಾಂಡವ. ಹೇ ಶ್ಯಾಮ ! ವಿರಾಟ್ ಸ್ಥೂಲ ಶರೀರದಲ್ಲಿ ನಿನ್ನ ಸ್ಥೂಲಭಾವದ ಲೀಲೆ ಇದು.

ಹೊರಗೆ—ಕ್ಷಣಭಂಗುರವಾದ, ರೋಗಾದಿಗಳ ನಿತ್ಯ ಆಶ್ರಯವಾದ ಕ್ಷುದ್ರ ಶರೀರ ; ನಿಶ್ಚಿತ ಮೃತ್ಯು, ಅನಿಶ್ಚಿತ ತತ್ಕಾಲದ ನಗಣ್ಯ ಮನುಷ್ಯ ಶರೀರ. ಅಂತರ್ಯದಲ್ಲಿ—ದೇಶಕಾಲವನ್ನು ಅತಿಕ್ರಮಿಸುವುದರಲ್ಲಿ ನಿರತನಾಗಿ, ಸರ್ವವಿಧ ರಹಸ್ಯ ಭೇದನದಲ್ಲಿ ತತ್ಪರನಾಗಿ, ಹಟಕಾರನಾಗಿ, ಜಗತ್ಕರ್ತನ ಸ್ವಭಾವವನ್ನು ತಿಳಿಯಲು ಮುಂದುವರಿಯುತ್ತಿರುವ ಕಾರ್ಯ ಮಾತ್ರ ಅನುಮೇಯವಾಗಿರುವ ; ಇಂದ್ರಿಯಾತೀತ ಮನುಷ್ಯ ಮನಸ್ಸು, ಹೇ ದೇವಿ! ಸೂಕ್ಷ್ಮ ಶರೀರದಲ್ಲಿ ಸೂಕ್ಷ್ಮಭಾವದಲ್ಲಿ ಇದು ನಿನ್ನ ಅಧಿಕತರ ಲೀಲೆ.

ಮುಂದೆ—ರೂಪರಸಾದಿಗಳಲ್ಲಿ ಅನಂತಭಾವಯುಕ್ತ ಅವರ್ಣಮೋಹನಶ್ರೀ ; ನಾನಾ ಚಿಂತಾಕಾರ್ಯಸಮಾಕುಲನಾದ, ಆತ್ಮನನ್ನು ಮರೆತ ಹಿತಾಹಿತವನ್ನು ಆಲೋಚಿಸಲು ಸಮಯವಿಲ್ಲದವನು, ಉನ್ಮಾದ ಮನಸ್ಸಿನಿಂದ ಕೂಡಿದ ಇಂದ್ರಿಯ ಗ್ರಾಮಗಳು ಸದಾ ಇವನನ್ನು ಆಲಂಗಿಸಲು ಪ್ರಯತ್ನ ಮಾಡುತ್ತಿವೆ. ಹಿಂದೆ ಇಚ್ಛಾಮಾತ್ರ ಸಹಾಯನಾಗಿ, ಕೇಂದ್ರೀಭೂತಶಕ್ತಿಯಾಗಿ, ಅಚಲ, ಅಟಲ, ಸಾಕ್ಷಿವತ್. ಸಮಾಸೀನನಾದ ಅಪರೋಕ್ಷ ಆತ್ಮ. ಹೇ ಮಾಯೆ, ಕಾರಣರೂಪಿಣಿ, ಇದು ನಿನ್ನ ಸರ್ವೋತ್ಕೃಷ್ಟ ಅಪೂರ್ವ ಲೀಲಾವಿಲಾಸ.

“ಸ್ತಿಮಿತ ಸಲಿಲರಾಶಿ ಪ್ರಖ್ಯಮಾಖ್ಯವಿಹೀನ” “ವಿಗತ ಭೇದಾಭೇದ ಶಮಿತ ಸರ್ವನಾಮರೂಪ” ಇಂತಹ ನಿನ್ನ ಸ್ಥಿತಿಯನ್ನು, ಮಹಿಮೆಯನ್ನು, ಭಾರತೀಯ ಋಷಿಗಳು ಏಕಪ್ರಾಣದಲ್ಲಿ ಏಕವಾಣಿಯಲ್ಲಿ ಸಾಧಾರಣ ಮನುಷ್ಯನಿಗೆ ಅರ್ಥವಾಗುವಂತೆ ಹೇಳುವುದಕ್ಕೆ ಶಾಂತಿ ನೀಡುವುದಕ್ಕೆ ಚಿರಕಾಲವೂ

ನಿರತರಾಗಿರುವರು. ಹೇ ಅಂಬೆ, ಶಕ್ತಿರೂಪಿಣಿ. ಇದೇ ನಿನ್ನ ನಿತ್ಯ ಸ್ವಭಾವವೆ? ಸಾಧಾರಣ ಮಾನವ ಇದರ ವಿಷಯವಾಗಿ ಏನು ಹೇಳಬಲ್ಲ? ವಾಸನಾಜಾಲವನ್ನೆಲ್ಲ ಸ್ತಬ್ಧಗೊಳಿಸಿದ, ಮನಬುದ್ಧಿಗೆ ಅತೀತನಾಗಿ ಕುಳಿತ ನಿನ್ನ ವರಪುತ್ರನಾದ ಜಗದ್ಗುರುವಾದ ಮಹಾಪುರುಷನಾದ ಈಶ್ವರಾವತಾರನಿಗೆ ಮಾತ್ರ ಇದನ್ನು ಹೇಳಲು ಸಾಧ್ಯ.

ಎಷ್ಟು ಕಾಲದಿಂದ ಭಾರತ ನಿನ್ನ ಜಗದ್ಗುರು ಪೂಜೆಯನ್ನು ಮಾಡುತ್ತಿದೆ? ಇದು ಎಂದು ಆರಂಭವಾಯಿತು? ನಿನ್ನ ಈ ಅತೀಂದ್ರಿಯ ದರ್ಶನ ಲಾಭದಿಂದ ಮಾನವ, ಋಷಿತ್ವ, ದೇವತ್ವವನ್ನು ಹೊಂದಿ ಸಮಗ್ರ ಮಾನವ ಕುಲವನ್ನು ಕೃತಾರ್ಥರನ್ನಾಗಿ ಮಾಡಿದನು. ಇದನ್ನು ಸಾಧಾರಣ ಮನುಷ್ಯರು ಎಂದು ಅರಿತರು? ಅವರಿಗೆ ಯಾರು ಹೇಳಿಕೊಟ್ಟರು?

ಸಹಸ್ರಾರದಲ್ಲಿರುವ ದಿವ್ಯಪಂಕಜ ನಿನ್ನ ಕೃಪೆಯಿಂದ ಭರತಖಂಡದಲ್ಲಿ ಪ್ರಥಮಬಾರಿ ವಿಕಸಿತವಾಯಿತು. ಭ್ರಮರಗಳು ಅದರ ಸಮೀಪದಲ್ಲಿ ಸಕಾಲದಲ್ಲಿ ನೆರೆದವು. ಮೋಹಿತರಾಗಿ ತಮ್ಮ ಪ್ರಾಣಮನಗಳನ್ನು ಅದಕ್ಕೆ ಅರ್ಪಿಸಿದವು. ಶ್ರೀಗುರುಮೂರ್ತಿಯಲ್ಲಿ ನಿನ್ನನ್ನು ಪೂಜಿಸುವುದನ್ನು ಜನಸಾಧಾರಣರು ಮೊದಲು ಕಲಿತರು.

ಮಾನವನಲ್ಲಿ ಶಕ್ತಿಪೂಜೆ—ಮಾನವನ ಮನುಷ್ಯತ್ವದಲ್ಲಿ ನಿನ್ನ ಅಭೂತಪೂರ್ವ ಮಿಲನವನ್ನು ನೋಡಿ ಹೃದಯದ ಸರಳ ಪವಿತ್ರ ಕೋಮಲಭಾವ ಸಮೂಹವನ್ನು ಆ ಪಾದಕಮಲಗಳಲ್ಲಿ ಅರ್ಪಿಸುವುದು, ನಿನ್ನಲ್ಲಿ ಗುರು ಚಿರ ಮಿಲನ ವಾಗಿರುವುದನ್ನು ನೋಡಿ, ಏಕತ್ವವಾಗಿರುವುದನ್ನು ನೋಡಿ, ಅವನನ್ನು ಬ್ರಹ್ಮ ವಿಷ್ಣು ಮಹೇಶ್ವರ ಪರಬ್ರಹ್ಮಾದಿನಾಮಗಳಿಂದ ಕರೆಯುವುದು, ಎಲ್ಲೋ ಒಂದು ಢೋಂಗಿ ಮಾಡಿ ಹತ್ತಾರುಜನ ಕಲೆತು ಚರ್ಚಿಸಿ ಮಾಡಿದುದಲ್ಲ. ಹೃದಯದ ಪೂರ್ಣತೆಯಿಂದ ಪ್ರಾಣದ ಉಲ್ಲಾಸದಿಂದ ಮಾತು ಮತ್ತು ನಡತೆಯನ್ನು ಒಂದುಗೂಡಿಸಿ ಸತ್ಯವಾಗಿ ಇದನ್ನು ಮಾಡಿದರು. ಹೀಗೆಯೇ ಗುರುಸಿದ್ಧಾಂತ ಭರತಖಂಡದಲ್ಲಿ ಕ್ರಮೇಣ ಪ್ರಕಾಶಿತವಾಯಿತು.

ಮನ ಬುದ್ಧಿ ಕಲ್ಪನೆಗೆ ಅತೀತವಾದ ಮಾನವನಲ್ಲಿ ಶಕ್ತಿ ಪ್ರಕಾಶವಾಗುವುದು. ಭಾವನಕ್ಕೆ ಅತೀತವಾದ ಭಾವದಲ್ಲಿ ನೀನು ಪ್ರಕಾಶಿತವಾಗಿರುವೆ.

ವಿಷಯಸಮುದ್ರಾಭಿಮುಖವಾಗಿ ವೇಗದಲ್ಲಿ ಓಡುತ್ತಿರುವ ಕಾಮ ಕಾಂಚನ ಮಹಾಪ್ರವಾಹವೆಂಬ ಜಗತ್ತಿನಲ್ಲಿ ಈ ಗುರುಗಳು ನಿತ್ಯಹಿಮಾಚಲ ನಿಬದ್ಧದೃಷ್ಟಿಯುಳ್ಳವರು. ಪ್ರವಾಹಕ್ಕೆ ಎದುರಾಗಿ ಹೋಗಬಲ್ಲ ಸಾಮರ್ಥ್ಯ ಅವರಲ್ಲಿದೆ. ಸಾಧಾರಣ ಮಾನವರು ಅವರನ್ನು ಹೇಗೆ ಪೂಜಿಸದೆ ಇದ್ದಾರು !

ಪ್ರತಿಯೊಬ್ಬರೂ ತಮ್ಮ ಸ್ವಾರ್ಥ ಚಿಂತನೆಯಲ್ಲಿ ನಿರತರಾಗಿ ಆ ಬ್ರಹ್ಮ ಸ್ಥಂಭ ಪರಿಯಂತ ಇರುವ ಪ್ರಾಣಿಸಮೂಹ ಮಧ್ಯದಲ್ಲಿ ಅವನು ಮಾತ್ರ ಲಬ್ಧ ಕಾಮನಾಗಿ ಪರಹಿತಾನು ಧ್ಯಾನಮಗ್ನ. ಇದು ಕೂಡ ಯಾವ ಪ್ರತಿಫಲದ ಆಶೆ ಯಿಂದಲೂ ಅಲ್ಲ. ಜಗತ್ತಿನಲ್ಲಿ ಎಷ್ಟು ವೇಳೆ ತಮ್ಮ ಕಲ್ಯಾಣವನ್ನು ಮರೆತು ಜನ ಇಂತಹ ಮಹಾಪುರುಷರಿಗೆ ಅನಾಚಾರ, ಅತ್ಯಾಚಾರ ವಿಷಸದೃಶ ವ್ಯವ ಹಾರ ನಡೆಸಿದೆ. ಚರಿತ್ರೆ ಇದಕ್ಕೆ ಸಾಕ್ಷಿ. ಇಂತಹ ಗುರುಗಳು ವ್ಯಥೆಯಿಲ್ಲದೆ ಮಂದಹಾಸದಿಂದ ಆಶೀರ್ವಾದ ವಾಣಿಯನ್ನು ಉಚ್ಚರಿಸುತ್ತಾ ತಮ್ಮ ಹೃದಯ ರಕ್ತವನ್ನು ಧಾರೆಯೆರೆದರು. ಇದನ್ನು ಸಹಿಸುದುದು ಮಾತ್ರವಲ್ಲ, ಇದಕ್ಕೆ ತಮ್ಮ ಜೀವನವನ್ನು ಅರ್ಪಿಸಿರುವರು. ದಧೀಚಿಯು ತನ್ನ ಮೂಳೆಯನ್ನು ಇದಕ್ಕಾಗಿ ದಾನಮಾಡಿದನು. ಇದರಿಂದ ಜನರ ಹಿತ ಸಾಧಿತವಾಯಿತು. ಹೇ ಅಹೇತು ದಯಾನಿಧೇ ಗುರು ! ನೀನು ಕಾಲವಾದರೂ ಅಮೃತನು, ಸಜಲ, ಜೀವಂತ ಘನೀಭೂತ ಶಕ್ತಿಪ್ರತಿಮಾ ಜಗತ್ತು ತನ್ನ ಇಚ್ಛಾಪೂರ್ವಕ ನಿನ್ನ ಅಡಿದಾವರೆಗಳಲ್ಲಿ ಏಕೆ ಬೀಳಬಾರದು ! ಏತಕ್ಕೆ ನಿನ್ನನ್ನು “ಗುರುಬ್ರಹ್ಮ, ಗುರುವಿಷ್ಣು, ಗುರುದೇವೋ ಮಹೇಶ್ವರಃ ” ಎಂದು ಸ್ತುತಿಸಬಾರದು !

ಭಾರತ ಅರಿತಿದೆ, ಗುರು ಮನುಷ್ಯನಲ್ಲಿ, ಮನುಷ್ಯರೂಪಿನಲ್ಲಿರುವ ವಿದ್ಯಾರೂಪಿಣಿ ಎಂದು. ಮಹಾಶಕ್ತಿ ಕೇಂದ್ರೀಭೂತವಾಗಿ, ಆಕಾರ ಮತ್ತು ವಿಗ್ರಹಗಳನ್ನು ಆಶ್ರಯಿಸಿ ಮಾನವನಿಗೆ ಶಿಕ್ಷಣ ಕೊಡುವುದಕ್ಕೆ ಅವನ ಹಿತಾ ರ್ಥಕ್ಕಾಗಿ, ಅವನ ಮಹತ್‌ಭಯವಿನಾಶಕ್ಕಾಗಿ ಕರುಣೆಯಿಂದ ಪ್ರಕಾಶಿತವಾಗಿ ರುವೆ. ಇದರಂತೆಯೇ ಮಾನವರೂಪಿನಲ್ಲಿಯೂ ನೀನು ಕೇಂದ್ರೀಭೂತಳಾಗಿ ರುವೆ. ನಿನ್ನ ಅನಂತ ಲೀಲಾವಿಲಾಸದಲ್ಲಿ ಇದೂ ಒಂದು ಅಪೂರ್ವ ಲೀಲೆ. ಎಲ್ಲಿ ಹೇಗೆ ಈ ಮಹಾಶಕ್ತಿ ಕೇಂದ್ರಿಭೂತವಾಗಿ ವ್ಯಕ್ತವಾಗುವುದು ? ಅವರು ಅವತಾರವೆತ್ತುವಾಗ ದೇಶದ ಪೂರ್ವಾಪರ ವಿಚಾರವೇನು ?

ಭಗವಾನ್ ಶ್ರೀಕೃಷ್ಣ ಹೇಳುತ್ತಾನೆ:

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥—ಗೀತಾ.

ಪುಂಜೀಭೂತ ರವಿಯ ಕಾವಿನಿಂದ ಗಾಳಿ ಕಾದು ಹಗುರವಾಗಿ ಮೇಲೆ ಎದ್ದಾಗ, ಹಠಾತ್ತಾಗಿ ಬೇರೆ ಕಡೆಯಿಂದ ಶೀತಗಾಳಿ ಬಂದು ಚಂಡಮಾರುತವನ್ನು ಸೃಷ್ಟಿಸುವಂತೆ, ಅಜ್ಞಾನಪ್ರಸೂತ ಪುಂಜೀಭೂತ ಅನಾಚಾರ ಅಧರ್ಮ ಮಾನವನ ಅಂತರ್ ಜಗತ್ತಿನಲ್ಲಿ ಉಂಟಾದಾಗ,ಮಹಾಶಕ್ತಿಯ ಆವಿರ್ಭಾವಕ್ಕೆ ಅವಕಾಶವನ್ನು ಕಲ್ಪಿಸುವುದು. ಆಗ ಮಾನವರ ಮನಸ್ಸಿನಲ್ಲಿ ಭಾವಸ್ರೋತ ಪರಿವರ್ತಿತವಾಗಿ ತಾಂಡವ ತರಂಗ ಎದ್ದು ವಿರೋಧವಾಗಿ ಧಾವಿಸುವುದು, ಮಾನವನ ಕ್ಷುದ್ರಮನಸ್ಸು ಚೂರ್ಣೀಭೂತವಾಗುವುದು. ಹೊಸದಾಗಿ ಬಂದ ಭಾವಸ್ರೋತದಲ್ಲಿ ಕ್ಷುದ್ರಭಾವಗಳೆಲ್ಲ ಅಟ್ಲಾಂಟಿಕ್ ಸಾಗರದ ತಡಿಯಲ್ಲಿರುವ ದ್ವೀಪದಂತೆ ಅಂಧತಮಸ್ಸಿನಲ್ಲಿ ಲೀನವಾಗುವುದು. ಜನಸಾಧಾರಣ ಕುಸಂಸ್ಕಾರ ಮತ್ತು ಸಂಕೀರ್ಣಭಾವರಾಶಿಯ ಮೇಲೆ ನೆಲಸಿದ ಕಪಟ ಗುರು, ವ್ಯಾಪಾರಕ್ಕಾಗಿ ಅಂಗಡಿ ತೆರೆದು ಜೀವನೋಪಾಯದಲ್ಲಿ ನಿರತರಾದವರು, ನಿಜವಾಗಿ ಕೇಂದ್ರೀಭೂತ ಶಕ್ತಿಯ ಗುರುಗಳು ಯುಗದಲ್ಲಿ ಅವತಾರಮಾಡಿದಾಗ, ತಮ್ಮ ವ್ಯಾಪಾರಕ್ಕೆ ಧಕ್ಕೆ ಬರುವುದೆಂದು ಅಂಜುವರು. ದಶಕರ್ಮನಿರತ ಬ್ರಾಹ್ಮಣರೆ, ಮೂಢ ಶಿಷ್ಯ ವ್ಯವಸಾಯಿ ಗುರುಗಳೆ, ಜೋಪಾನವಾಗಿರಿ ! ಪುನಃ ಆ ಕೇಂದ್ರೀಭೂತ ಗುರುಶಕ್ತಿ ಪ್ರಕಾಶವಾಗಿ ಮಾನವನ ಕ್ಷುದ್ರ ಮನಸ್ಸನ್ನು ಚೂರ್ಣೀಭೂತ ಮಾಡುತ್ತಿದೆ. ನೂತನ ತರಂಗಕ್ಕೆ ನಮ್ಮ ದೇಶ ಎತ್ತಕಡೆ ಎಷ್ಟುದೂರ ಹೋಗುವುದೋ ಯಾರಿಗೆ ಗೊತ್ತು ? ಆಷಾಢಭೂತಿ ಗುರುಗಳೆ, ನಿಮ್ಮ ದುರ್ದೆಶೆ ಇನ್ನೆಷ್ಟು ದಿನ ಹೀಗೆಯೇ ಇರುವುದು? ಇದನ್ನು ಯಾರು ಹೇಳಬಲ್ಲರು ?

ಮನಸ್ಸಿನ ಭಾವಗಳು ಕಾರ್ಯಪರಿಣಾಮದಲ್ಲಿ ಸ್ಥೂಲಭಾವವನ್ನು ಧಾರಣೆ ಮಾಡುವುವು. ಇದು ವ್ಯಕ್ತಿಗಳಿಗೆ ಹೇಗೆ ಅನ್ವಯಿಸುವುದೋ ಹಾಗೆಯೇ ಜನಾಂಗಕ್ಕೂ ಅನ್ವಯಿಸುವುದು. ವ್ಯಷ್ಟಿ, ಸಮಷ್ಟಿ, ಸಮಾಜ, ದೇಶ, ಪೃಥಿವಿ ಮತ್ತು ವಿಶ್ವಬ್ರಹ್ಮಾಂಡವೂ ಅದರಂತೆಯೆ.

ಯಥಾರ್ಥಗುರುಶಕ್ತಿಯ ಉದಯದೊಂದಿಗೆ ನೂತನ ಭಾವ ಪ್ರಸಾರವಾಗುವುದು. ಅದರೊಡನೆ ಸಮಾಜದಲ್ಲಿ ಹಲವು ಬದಲಾವಣೆಗಳಾಗುವುವು.

ಪರಿವರ್ತನ ಮುಖದಲ್ಲಿ ನೆಲಸಿರುವ ಭಯಂಕರ ಭೀಮಾಶಕ್ತಿ ಸರ್ವತ್ರ ಪರ್ಯಟನ ಮಾಡುವಳು. ಬಹುಕಾಲದಿಂದಲೂ ಸಾದರದಿಂದ ಪೋಷಿಸಲ್ಪಟ್ಟ ಕ್ಷುದ್ರಭಾವನೆಗಳನ್ನು ಮಥಿಸಿ ಧ್ವಂಸಮಾಡುವಳು. ವಿಪರೀತ ಭಾವಸೂತ್ರದ ಎದುರಿಗೆ ಕಿಂಕರ್ತವ್ಯ ಮೂಢರಾಗುವರು. ಅಣ್ಣ ತಮ್ಮಂದಿರು ಬೇರೆ ಬೇರೆ ವಿಧವಾಗಿ ಆಲೋಚಿಸುವರು. ಗಂಡಹೆಂಡಿರಲ್ಲಿ ಮತಭೇದಗಳು ಉಂಟಾಗುವುವು. ಪಿತಾಪುತ್ರರು ವಿಪಕ್ಷದಲ್ಲಿ ನಿಲ್ಲುವರು.

ಜ್ಞಾನ ಅಜ್ಞಾನದೊಂದಿಗೆ ಹೋರಾಡುತ್ತಿರುವುದು. ಅನಾದಿಯಿಂದಲೂ ಯುಗಯುಗಗಳಿಂದಲೂ ವ್ಯಕ್ತಿ ಜಾತಿ ಸಮಾಜ ದೇಶ ವಿಶ್ವಬ್ರಹ್ಮಾಂಡದಲ್ಲಿ ಎಷ್ಟು ಭಾವದಲ್ಲಿ ಎಷ್ಟು ರೂಪಿನಲ್ಲಿ ಈ ಸಂಗ್ರಾಮ ಹಿಂದಿನಿಂದ ನಡೆದಿದೆ, ಈಗಲೂ ನಡೆಯುತ್ತಿದೆ, ಇದನ್ನೇ ಶಾಸ್ತ್ರದಲ್ಲಿ ದೇವಾಸುರ ಯುದ್ಧವೆನ್ನುವುದು? ಇದು ಎಂದಾದರೂ ನಿಲ್ಲುವುದೆ? ಯಾವುದಾದರೂ ಕಾಲದಲ್ಲಿ ಸಮಾಜ ಸತ್ಯನ್ಯಾಯ ಧರ್ಮವನ್ನು ಮುಂದೆ ಇಟ್ಟುಕೊಂಡು ಕೆಲಸಮಾಡುವುದೆ? ಈ ಜಗತ್ತು ಯಾರದೊ ಅವನೇ ಹೇಳಬಲ್ಲ. ಆದರೆ ಈ ಸಂಗ್ರಾಮದಲ್ಲಿ ಎಂದಿಗೂ ಬೆನ್ನು ತೋರಬೇಡ. ಹಿಂತಿರುಗಿದರೆ ನೀನು ಏನು ಮಾಡಬಲ್ಲೆ? ಒಳಗೆ ಹೊರಗೆ ಎಲ್ಲಿ ನೋಡಿದರೂ ಆ ಸಂಗ್ರಾಮ ನಡೆಯುತ್ತಿರುವುದು. ಆತ್ಮಹಿತ ನಿನಗೆ ಬೇಕಾದರೆ ಬೆನ್ನು ತೋರಬೇಡ. ಪರಹಿತ ಬೇಕಾದರೂ ಹೀಗೆಯೇ ಮಾಡಬೇಕು. ನಿಶ್ಚಿಂತೆಯಿಂದ ವಿರಾಮ ಪಡೆಯಬೇಕೆಂದು ಇಚ್ಛಿಸಿ ನೀನು ಹೀಗೆ ಮಾಡದೆ ಹೋದರೆ ವಿರಾಮ ದೊರಕುವುದಿಲ್ಲ. ಹಾಗಾದರೆ ಜಾಗ್ರತನಾಗು, ಎದ್ದುನಿಲ್ಲು, ಕಟಿಬಂಧನಗೈ. ಶಕ್ತಿರೂಪಿಣಿ ನಿನ್ನ ಸಹಾಯಕ್ಕೆ ಬರುವಳು.

ಅನ್ಯ ದೇಶದಲ್ಲಿ ಜಗನ್ಮಾತೆ ಶತಹಸ್ತಗಳಿಂದ ಧನಧಾನ್ಯಗಳನ್ನು ನೀಡುತ್ತಿರುವಳು. ಇದನ್ನು ನೋಡಿ ಈರ್ಷ್ಯೆಯಿಂದ ನೀವು ಕುದಿಯುತ್ತಿರುವಿರಿ. ಅವರ ಪುಷ್ಟಿಯಿಂದ ಬೆಳೆದ ಪ್ರಫುಲ್ಲಮುಖಕಮಲದಿಂದ ಕೂಡಿದ ಮಕ್ಕಳನ್ನು ನಮ್ಮ ಕ್ಷಾಮಪೀಡಿತ, ವಸನಹೀನ, ರೋಗಗಳಿಂದ ಜರ್ಜರಿತ ಸಂತಾನದೊಡನೆ ತುಲನೆಮಾಡಿ. ನೀವು ಜಗದಂಬೆಯೇ ಇದಕ್ಕೆ ಕಾರಣ ಎಂದು ನೂರುವೇಳೆ ದೂಷಿಸಬಹುದು. ಅನ್ಯರ ಪದಾಘಾತದಿಂದ ಪೀಡಿತರಾಗಿ ನಿಮ್ಮ ಅದೃಷ್ಟವನ್ನು ನೀವೇ ಹಳಿದುಕೊಳ್ಳುವಿರಿ. ಆದರೆ ತಪ್ಪು ಯಾರದು? ನೀವು ಇದನ್ನು

ನೋಡುವುದಿಲ್ಲವೆ? ಅವರು ಅಜ್ಞಾನದೊಂದಿಗೆ ಹೋರಾಡಿ ಪ್ರಖ್ಯಾತರಾಗಿರುವರು, ಆದರೆ ನೀವು ಸಾವಿರಾರು ವರ್ಷಗಳಿಂದ ಅಜ್ಞಾನವನ್ನು ಹೃದಯದಲ್ಲಿ ಪೋಷಿಸುತ್ತಾ ನಿಶ್ಚಿಂತರಾಗಿರುವಿರಿ. ಅವರು ಹೃದಯರಕ್ತವನ್ನು ಧಾರೆಯೆರೆದಿರುವರು. ಇತರರ ಹಿತಕ್ಕಾಗಿ ತಮ್ಮನ್ನು ಬಲಿದಾನಮಾಡಿಕೊಂಡು ತಾಯಿಯನ್ನು ಪ್ರಸನ್ನಮಾಡಿಕೊಂಡಿರುವರು. ಆದರೆ ನೀವು ಅವಿದ್ಯಾಸೇವೆಯಿಂದ ಕ್ಷುದ್ರ ಸ್ವಾರ್ಥರಾಗಿ ಇರುವಿರಿ. ಜಗನ್ಮಾತೆ ನಿಮಗೆ ಏತಕ್ಕೆ ಕೊಡಬೇಕು? ಶಾಸ್ತ್ರ ಅನೇಕವೇಳೆ ನಿಮಗೆ ಹೇಳುತ್ತದೆ. ಅವಳು ಬಲಿಪ್ರಿಯೆ ರುಧಿರಪ್ರಿಯೆ ಎಂದು. ದೇವಿಯ ಈ ಭಾವ ಧ್ಯಾನಮಂತ್ರದಲ್ಲಿದೆ. ಅದನ್ನು ಕೇಳಿ, ಭಾರತೀಯ ತಂತ್ರಕಾರರು ನಿಮಗೆ ಹೇಗೆ ಧ್ಯಾನಮಾಡಬೇಕೆಂದು ಹೇಳಿರುವರು.

ಶಿವಾರೂಢಾಂ ಮಹಾಭೀಮಾಂ ಘೋರದಂಷ್ಟ್ರಾಂ ವರಪ್ರದಾಂ ।
ಹಾಸ್ಯಯುಕ್ತಾಂ ತ್ರಿನೇತ್ರಾಂ ಚ ಕಪಾಲಕರ್ತೃಕಾಕರಾಂ ॥
ಮುಕ್ತಕೇಶಿಂ ಲೋಲಜಿಹ್ವಾಂ ಪಿಬಂತೀಂ ರುಧಿರಂ ಮುಹುಃ ।
ಚತುರ್ಬಾಹುಯುತಾಂ ದೇವೀಂ ವರಾಭಯಕರಾಂ ಸ್ಮರೇತ್ ॥

ಮಹಾಶ್ರದ್ಧಾ ಸಂಪನ್ನರಾಗಿ, ಸ್ವಾರ್ಥಸುಖ ತ್ಯಾಗಮಾಡಿ, ಆತ್ಮಬಲಿದಾನದಿಂದ ನಿಮ್ಮನ್ನು ಅರ್ಪಣಮಾಡಿಕೊಳ್ಳಿ. ಅವಳನ್ನು ಒಲಿಸಿ. ಆಗ ನೋಡಿ ಶಕ್ತಿರೂಪಿಣಿ ಜಗದಂಬಾ ಪುನಃ ನಿಮ್ಮ ಕಡೆ ತಿರುಗುವಳು. ಅವಳು ನಿಮ್ಮ ಕಣ್ಣಿನಲ್ಲಿ ಕಾಂತಿಯಂತೆ, ಬಾಹುವಿನಲ್ಲಿ ಬಲದಂತೆ, ಹೃದಯದಲ್ಲಿ ತೇಜದಂತೆ, ಅಂತರದಲ್ಲಿ ಅದಮ್ಯ ಉತ್ಸಾಹದಂತೆ ವ್ಯಕ್ತವಾಗುವಳು. ಆಗ ನೋಡಿ ಜಗನ್ಮಾತೆಯ ನಿತ್ಯ ಸಹಚರಿದಳವಾದ ಬುದ್ಧಿ, ಲಜ್ಜಾ, ಧೃತಿ, ಮೇಧಾ ಮುಂತಾದುವು ನಿಮ್ಮನ್ನು ಮೆಚ್ಚಿ ನೀವು ಮಾಡುವ ಕೆಲಸಕ್ಕೆ ಸಹಾಯಕರಾಗುವವು.

ಪ್ರತಿಯೊಂದು ಹೊಸ ಭಾವನೆಯನ್ನು ಸ್ವೀಕರಿಸಬೇಕಾದರೂ ನಾವು ಎಷ್ಟು ಹೋರಾಡಿರುವೆವು. ವ್ಯಾವಹಾರಿಕ ಜಗತ್ತಿನಲ್ಲಿ ಸ್ವಾತಂತ್ರ್ಯ, ಸಾಮ್ಯ ಮೈತ್ರೀ ಭಾವಕ್ಕಾಗಿ ಫ್ರಾನ್ಸಿನಲ್ಲಿ ಕ್ರಾಂತಿಯುಂಟಾಯಿತು. ಉದಾಹರಣೆಗಾಗಿ ಇತ್ತೀಚಿನ ಜಪಾನಿನ ಯುದ್ಧವನ್ನು ಕುರಿತು ಯೋಚಿಸಿ. ವ್ಯಾವಹಾರಿಕ ಜಗತ್ತಿನಲ್ಲಿ ಹೇಗೆಯೊ ಹಾಗೆಯೆ ಆಧ್ಯಾತ್ಮಿಕ ಜಗತ್ತಿನಲ್ಲಿಯೂ. ಆದಕಾರಣವೆ ಗುರುರೂಪಿ ಮಹಾಶಕ್ತಿ ಧರ್ಮವಿಪ್ಲವದ ಸಮಯದಲ್ಲಿ ವ್ಯಕ್ತವಾಗುವು

ದೆಂಬುದು ಶಾಸ್ತ್ರಪ್ರಸಿದ್ಧವಾಗಿರುವುದು. ಪ್ರಬಲ ಮಾರುತವಾದ ಮೇಲೆ ಪ್ರಕೃತಿ ಶಾಂತವಾಗುವಂತೆ, ಕಾರ್ಯವಾದಮೇಲೆ ವಿರಾಮ ಸ್ವಭಾವತಃ ಬರುವುದು. ಇದರಂತೆಯೇ ವಿಪ್ಲವವಾದ ಮೇಲೆ ಶಾಂತಿಜ್ಞಾನ ಸಮಾಜದಲ್ಲಿ ದೃಢತರವಾಗಿ ನೆಲಸುವುದು.

ಗುರುರೂಪಿ ಶಕ್ತಿಯ ಉದಯದಿಂದ ಆಧ್ಯಾತ್ಮಿಕ ಜಗತ್ತಿನಲ್ಲಿ ಭಾವಪ್ಲವ ನಿಧಾನವಾಗಿ ದೇಶ ಮತ್ತು ಸಮಾಜದಲ್ಲೆಲ್ಲಾ ವ್ಯಾಪಿಸುವುದರಲ್ಲಿ ಸಂದೇಹವಿಲ್ಲ. ಜಂಝಾಮಾರುತದಿಂದ ಪೀಡಿತವಾದ ಸಾಗರ, ಮಿಂಚುಗಳಿಂದ ಕೂಡಿದ ಆಕಾಶದೆದುರಿಗೆ ಉಬ್ಬುವುದು ಎಂಬುವರು. ಮತ್ತೊಂದು ಉಬ್ಬುವಿಕೆಯು, ಚಂದ್ರೋದಯದ ಸಮಯದಲ್ಲಿ ಸ್ನಿಗ್ಧ ಕಿರಣಕಾಂತಿಯಿಂದ ಮುಗ್ಧವಾಗಿ ಸಾಗರ ಚಂದ್ರಮನೆಡೆಗೆ ಏರುವುದು. ಅಮಿತಾಬ ಬುದ್ಧ, ಜ್ಞಾನಗುರು ಶಂಕರ, ಶ್ರೀಚೈತನ್ಯ ಮುಂತಾದವರ ಉದಯಕಾಲದ ಸ್ಥಿತಿಯನ್ನು ನೆನಿಸಿಕೊಳ್ಳಿ.

ಅವತಾರ ಜಗದ್ಗುರು ; ಮನುಷ್ಯನಲ್ಲಿರುವ ಈಶ್ವರ, ಮನುಷ್ಯತ್ವದಲ್ಲಿ ಈಶ್ವರತ್ವದ ಅಪೂರ್ವ ಮಿಲನ. ಮಾನವನಲ್ಲಿ ಅಮಾನುಷೀ ದೈವೀಶಕ್ತಿ ವಿಕಾಸವಾಗುವುದು. ಶಕ್ತಿಪ್ರಸೂತ ಸಂಸಾರಮಹೀರುಹದಲ್ಲಿ ವಿಕಸಿತವಾದ ಪಾರಿಜಾತ ಈ ಗುರುಗಳು. ಈಶ್ವರ, ಸಂಸಾರದಲ್ಲಿ ಸಮಗ್ರ ಶಕ್ತಿಯ ಚಾಲಕ ಅವರು ಎಂದಿಗೂ ಆ ಚಾಲಕ ಶಕ್ತಿಗೆ ವಶರಾಗಿ ಆತ್ಮವಿಸ್ಮೃತರಾಗಿ ಮೂಢರಾಗಿ, ಅದರ ಕೈಗೊಂಬೆಯಾಗುವುದಿಲ್ಲ. ಹೇ ಜಗದ್ಗುರು ' ನೀನು ಮಾನವ ರೂಪವನ್ನು ಧಾರಣೆಮಾಡಿದರೂ ನೀನು ಈ ಜಗತ್ತಿಗೆ ಮೂಲಭೂತ ಸ್ವರೂಪ ಎಂಬ ಜ್ಞಾನವನ್ನು ಎಂದಿಗೂ ಮರೆತಿರಲಿಲ್ಲ, ನೀನು ಮಾಯೆಯಲ್ಲಿದ್ದರೂ ಯಾವಾಗಲೂ ನಿನ್ನ ತೃತೀಯ ಚಕ್ಷು ಮಾಯಾತೀತವಾದುದನ್ನು ನೋಡುತ್ತಿರುವುದು. ಮನುಷ್ಯ ಸಾಧಾರಣರನ್ನು ಶಬ್ದಸ್ಪರ್ಶಾದಿಗಳು ಗುಲಾಮರನ್ನಾಗಿ ಮಾಡಿವೆ. ಆದರೆ ಅವುಗಳ ಪ್ರಭಾವ ಸಹಸ್ರ ವೇಳೆ ಪ್ರಯತ್ನಿಸಿದರೂ ನಿನ್ನನ್ನು ವಶಪಡಿಸಿಕೊಳ್ಳಲಾರವು. ಆದಕಾರಣ ನಿನ್ನನ್ನು ನರರೂಪಿ ಈಶ್ವರ ಎಂದು ಏತಕ್ಕೆ ಕರೆಯಬಾರದು.

ಅವತಾರ ಜಗದ್ಗುರು : ನರರೂಪಿ ಈಶ್ವರ. ಈಶ್ವರ ಸರ್ವ ಅವಸ್ಥೆಯಲ್ಲಿಯೂ ಸರ್ವಭಾಗದಲ್ಲಿಯೂ ಪೂರ್ಣ. ಅವನಲ್ಲಿ ಯಾವ ಅಭಾವ ಇಲ್ಲದೇ

ಇದ್ದರೂ ತಾನು ಆಗಲೆ ಪರಿಪೂರ್ಣನಾಗಿರುವುದರಿಂದ ಯಾವುದನ್ನೂ ಮಾಡುವಅವಶ್ಯಕತೆ ಇಲ್ಲದೇಇದ್ದರೂ ಅವನು ಜಗದ ಘಟನೆಗಳ ಹಿಂದೆಲ್ಲ ಇರುವನು. ಹೇ ನಿತ್ಯಮುಕ್ತ ಆತ್ಮಾರಾಮ ಗುರು, ನಿನ್ನ ಸ್ವರೂಪ ಸರ್ವದಾ ಪ್ರಕಾಶಿತವಾಗಿರುವುದು. ನಿನ್ನಲ್ಲೀ ಯಾವ ಅಭಾವ ಇಲ್ಲದೇ ಇದ್ದರೂ ನೀನು ಮನುಷ್ಯ ಸಮಾಜದ ಕಲ್ಯಾಣಾರ್ಥ ಹಗಲೂ ರಾತ್ರಿ ಕರ್ಮದಲ್ಲಿ ನಿರತನಾಗಿ ರುವೆ. ನಿನ್ನ ಆಹಾರ, ವಿಹಾರ, ನಿದ್ರಾ, ಜಾಗರಣೆ, ಕರ್ಮ, ಸಂಸಾರ, ಸನ್ಯಾಸ ಇವುಗಳೆಲ್ಲ ಇತರರಿಗಾಗಿ. ನಿನ್ನನ್ನು ಏತಕ್ಕೆ ಮಾನವಾಕೃತಿಯಲ್ಲಿರುವ ಭಗವಾನ್ ಎಂದು ಹೇಳಬಾರದು ?

ಅವತಾರನಾದ ಜಗದ್ಗುರು, ಮಾನವಾಕೃತಿಯಲ್ಲಿರುವ ದೈವೀಶಕ್ತಿ. ಈಶ್ವರನ ಶಕ್ತಿ ಮತ್ತು ಮಹಿಮೆಗೆ ಹೇಗೆ ಒಂದು ಮಿತಿ ಇಲ್ಲವೊ ಅದರಂತೆಯೆ ನೀನು. ನಿನ್ನಿಂದ ಬೇರೆ ಇರುವ, ಪೂರ್ವಸಂಸ್ಕಾರದ ಪಾಷಾಣ ಸದೃಶವಾಗಿರು ವಂತಹ ಮನುಷ್ಯ ಪ್ರಭಾವ ಜೀರಿ ಮೇಲೆ ನೀನು ಇಚ್ಛಾಮಾತ್ರದಿಂದ ಹೃದಯ ಗ್ರಂಥಿಯನ್ನು ಶಿಥಿಲ ಮಾಡಿ, ಮನುಷ್ಯನನ್ನು ಕಾಂಚನಾತೀತ ಸಮಾಧಿ ರಾಜ್ಯದಲ್ಲಿ ಸಂಚರಿಸುವಂತೆ ಮಾಡಬಲ್ಲೆ. “ ಯತೋವಾಚೋ ನಿವರ್ತಂತೆ ಅಪ್ರಾಪ್ಯಮನಸಾ ಸಹಾ ” ಎಂಬ ಪರಂಧಾಮನನ್ನು ಸೇರಲು, ಹೊಸ ಹೊಸ ಪಥಗಳನ್ನು ಆವಿಷ್ಕಾರಮಾಡಿ ಭಿನ್ನ ಬಿನ್ನ ಪ್ರಕೃತಿಯ ಮನು ಷ್ಯರ ಮಾರ್ಗವನ್ನು ಸುಗಮ ಮಾಡುವರು. ಎಲ್ಲಾ ಭಾವಗಳಿಗೂ ಒಂದೇ ಮರ್ಯಾದೆಯನ್ನು ಕೊಟ್ಟು ಇವುಗಳ ಗಂತವ್ಯವೆಲ್ಲಾ ಒಂದೇ ಎಂಬುದನ್ನು ಅವರು ತೋರಿರುವರು. ವಿಪರೀತ ಭಾವಗಳಲ್ಲಿ “ ಸೂತ್ರೇ ಮಣಿಗಣಾ ಇವ ” ಎಂಬ ಸಮನ್ವಯ ಸೂತ್ರವನ್ನು ಇತರರಿಗೆ ಮನಗಾಣುವಂತೆ ಮಾಡಿ ಮನುಷ್ಯನ ಮನಸ್ಸನ್ನು ಉದಾರ ಮಾಡಿರುವರು. ಯುಗಯುಗ ಗಳಲ್ಲಿ ಬಹುಜನ ಹಿತಕ್ಕೆ ಸ್ವೇಚ್ಛೆಯಿಂದ ಮಾನವಾಕೃತಿಯನ್ನು ತಾಳಿ, ಅಸೀಮ ಉತ್ಸಾಹದಿಂದ ಆದರ್ಶವಾದ ಮೇಲೆ ಆದರ್ಶಗಳನ್ನು ತಮ್ಮ ಜೀವನ ದಲ್ಲಿ ಅನುಷ್ಠಾನ ಮಾಡಿ, ಮನುಷ್ಯನಲ್ಲಿಯೂ ಅದನ್ನು ಅನುಷ್ಠಾನಕ್ಕೆ ತರ ಬೇಕೆಂಬ ಸ್ಫೂರ್ತಿಯನ್ನು ತುಂಬ ಬಲ್ಲರು.

ಹೇ ನಿತ್ಯ ಶುದ್ಧ ಬುದ್ಧ ಮುಕ್ತಸ್ವಭಾವ, ಅಪಾರಮಹಿಮ, ಜೇಂದ್ರೀ ಭೂತ ವಿದ್ಯಾರೂಪ ಆತ್ಮರಾಮಗುರು, ನಿನ್ನ ಕೃಪೆಯಿಂದ ಭಾರತ ಸರ್ವಕಾಲ

ದಲ್ಲಿಯೂ ಪುಣ್ಯಕ್ಷೇತ್ರ, ಧರ್ಮಕ್ಷೇತ್ರ, ಜ್ಞಾನ, ವೀರ್ಯಕ್ಕೆ ಆಕಾರಭೂಮಿ. ನಿನ್ನನ್ನು ಮರೆತುದೇ ಭಾರತದ ದುಃಖ ದಾರಿದ್ರ್ಯ ಅಜ್ಞಾನಕ್ಕೆ ಕಾರಣ. ಅವರು ನಿನ್ನನ್ನು ಮರೆತರೂ ನೀನು ಅವರನ್ನು ಮರೆಯದಿರು. ಗುಪ್ತ ಭಾವ ದಲ್ಲಿ ಉದಿಸಿದರೂ ಭಾರತ ಮತ್ತು ಅದರ ಮೂಲಕ ಇಡೀ ಪ್ರಪಂಚದ ಕಲ್ಯಾಣಕ್ಕಾಗಿ ಭಕ್ತಿಜ್ಞಾನ ಬೀಜವನ್ನು ನೆಟ್ಟುಹೋಗಿರುವೆ. ಅದರಲ್ಲಿ ಎಲ್ಲೊ ಸ್ವಲ್ಪ ಪಾಶ್ಚಾತ್ಯ ದೇಶದಲ್ಲಿ ಬಿದ್ದುದರಿಂದಲೇ ಒಂದು ಅಪೂರ್ವಭಾವ ವಿಪ್ಲವ ವನ್ನು ಉಂಟುಮಾಡಿದೆ. ಹೇ ದೇವ, ಹೇ ದಯಾನಿಧೇ, ಆ ಬೀಜ ಭಾರತದಲ್ಲಿ ಫಲ ಪುಷ್ಪದಿಂದ ತುಂಬಿದ ಮಹಾವೃಕ್ಷವಾಗಲಿ; ಪ್ರತಿಯೊಬ್ಬ ನರನಾರಿಯರ ಪ್ರಾಣದಲ್ಲಿ ಬಲ ಉತ್ಸಾಹ, ಉದ್ಯಮ, ಅಧ್ಯವಸಾಯಾದಿ ಛಾಯೆಯನ್ನು ಹರಡಲಿ. ನಮ್ಮ ಆಧ್ಯಾತ್ಮಿಕ ದುರ್ದಶೆ, ಸಂಸಾರತಾಪ, ನಾಶವಾಗಲಿ. ಹೇ ಗುರು, ಇದನ್ನು ಕರುಣಿಸು.

ಹೇ ಶ್ರದ್ಧಾಸಂಪನ್ನ ಶ್ರೋತೃವರ್ಗ, ಭಗವಾನ್ ಶ್ರೀರಾಮಕೃಷ್ಣ ಮತ್ತು ವೀರೇಶ್ವರ ವಿವೇಕಾನಂದರಿಂದ ಪ್ರಚಾರಿತವಾದ ಮಹಾ ಸತ್ಯಗಳನ್ನು ಶ್ರದ್ಧೆಯಿಂದ ನಿಮ್ಮ ಹೃದಯದಲ್ಲಿ ರಕ್ಷಿಸಿ, ಅವರ ಅಪಾರ ಮಹಿಮೆ, ಅಪ್ರತಿಹತ ಪ್ರಭಾವ, ಗುರುಶಕ್ತಿಯ ವಿಷಯವನ್ನು ಭಾರತದ ಮನೆಮನೆಯಲ್ಲಿ ಪ್ರಚಾರ ಮಾಡಲು ದೃಢಬದ್ಧರಾಗಿ.

"ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಬೋಧತ" ಎಂಬ ವಾಣಿ ಯನ್ನು ಉಚ್ಚರಿಸಿ ಎಲ್ಲರಲ್ಲಿಯೂ ಭರವಸೆ ಸಂಚರಿಸುವಂತೆ ಮಾಡಿ. ನವ ಯುಗದಲ್ಲಿ ನವಶಕ್ತಿ ನಿಮ್ಮಲ್ಲಿ ಸಂಚರಿಸಲಿ, ಪ್ರಕಾಶಿಸಲಿ.

Arise Awake Stop not till goal is reached

೩. ಶಕ್ತಿಪ್ರತೀಕ

ಶ್ರೀರಾಮಕೃಷ್ಣರು ಹೀಗೆ ಹೇಳುತ್ತಿದ್ದರು: "ಕಲ್ಲು ಮರದಲ್ಲಿ ಭಗವಂತನ ವಿಶೇಷ ಲೀಲೆಯನ್ನು ನೋಡುವುದಿಲ್ಲ. ಮನುಷ್ಯನ ಮನಸ್ಸೆ ಅವನ ವಿಶೇಷ ಲೀಲೆಯ ಸ್ಥಾನ." ಮತ್ತೊಮ್ಮೆ ಹೇಳುವರು: "ಮನುಷ್ಯ ಇಲ್ಲದೇ ಇದ್ದರೆ, ಭಕ್ತ ಇಲ್ಲದೇ ಇದ್ದರೆ, ಭಗವಂತನನ್ನು ಯಾರು ಲೆಕ್ಕಿಸುತ್ತಿದ್ದರು? ಯಾರು ಅರಿಯುತ್ತಿದ್ದರು? ಅವನ ಅಪಾರ ಶಕ್ತಿ ಮತ್ತು ಮಹಿಮೆಯನ್ನು ವೇದವೇದಾಂತಗಳ ಮೂಲಕ ಯಾರು ಬರೆದು ಪ್ರಚಾರಪಡಿಸುತ್ತಿದ್ದರು? ಭಕ್ತ ಇರುವನು, ಅದರಿಂದಲೇ ಭಗವಂತನಿರುವುದು. ಭಾಗವತ, ಭಕ್ತ, ಭಗವಾನ್ ಮೂರೂ ಒಂದೇ; ಒಂದೇ ಮೂರೂ ಆಗಿರುವುದು."

ವಿಶೇಷ ಶಕ್ತಿಯ ಆವಿರ್ಭಾವಗಳ ವಿಷಯವನ್ನು ಮಾತನಾಡುತ್ತಿದ್ದಾಗ ಶಕ್ತಿಪ್ರತೀಕವನ್ನು ಕುರಿತು ಹೇಳಿದಾಗ, ಮಾನವನಲ್ಲಿ ಶಕ್ತಿಪೂಜೆ ಹೇಗೆ ಪ್ರಾರಂಭವಾಯಿತೆಂದು ಸೂಚಿಸಿದೆವು. ಇದನ್ನು ಯಾರೂ ಅನುಮಾನಿಸಬೇಕಾಗಿಲ್ಲ. ಮನುಷ್ಯನಲ್ಲಿ ಮೊದಲು ಶಕ್ತಿಯ ಆವಿರ್ಭಾವವನ್ನು ನೋಡಿ, ಮಾನವ ಅವನನ್ನು ಆರಾಧಿಸಲು ಮೊದಲುಮಾಡಿದನು. ಆದಕಾರಣವೆ ಗುರುಪೂಜೆಯನ್ನು ಪ್ರಪ್ರಥಮದಲ್ಲಿ ಮಾಡುವುದನ್ನು ಕಲಿತಿರಬೇಕು. ಮಾನವ ಪ್ರಕೃತಿ ಇತಿಹಾಸ ಹೀಗೆ ಹೇಳುವುದು: ನಾವು ಅಷ್ಟು ಸರಳವಾಗಿ ಸರಳಪಥದಲ್ಲಿ ಹೋಗುವುದಿಲ್ಲ. ಅತಿ ಹತ್ತಿರವಿರುವ ಪದಾರ್ಥ ಕೂಡ ನಮಗೆ ಅತಿ ದೂರದಂತೆ ಕಾಣುವುದು. ತನ್ನ ಮನೆಯನ್ನೇ ನೋಡಿಕೊಳ್ಳುವುದಕ್ಕೆ ಮುಂಚೆ ಅನ್ಯರ ಮನೆಯನ್ನು ಸರಿ ಮಾಡಬೇಕೆಂಬುದು ಮಾನವಸ್ವಭಾವ. ಇಲ್ಲದೇ ಇದ್ದರೆ ಯಥಾರ್ಥ ಜ್ಞಾನ, ಸಭ್ಯತೆ ಇಷ್ಟುಹೊತ್ತಿಗೆ ಪ್ರಪಂಚದಲ್ಲಿ ಎಷ್ಟೋ ಮುಂದುವರಿದಿರಬೇಕಾಗಿತ್ತು.

ಮಾನವನಲ್ಲಿ ಪ್ರತ್ಯಕ್ಷವಾಗಿ ಶಕ್ತಿಪೂಜೆ ಮಾಡುವುದನ್ನು ಜಗತ್ತು ಬೇಗ ಅರಿಯಿತು. ಭಾರತದಲ್ಲಿ ಈ ಪೂಜೆಯ ಪ್ರಥಮ ಅಭ್ಯುದಯ. ಭಾರತದ ಮೂಲಕ ಪ್ರಪಂಚದಲ್ಲಿ ಇದು ಪ್ರಥಮ ಪ್ರಚಾರವಾಯಿತು. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಿದ್ದರು: "ಭಾರತದಿಂದ ಪ್ರಬಲ ಧರ್ಮತರಂಗ ಕಾಲಕಾಲಕ್ಕೆ ಎದ್ದು ಜಗತ್ತಿನಲ್ಲೆಲ್ಲಾ ಪ್ರಸಾರಿತವಾಯಿತು. ಅನಂತರವೂ ಚಿರ

ಕಾಲದವರೆಗೆ ಅದು ಹಾಗೆಯೇ ಇರುವುದು. ವೈದಿಕಯುಗದಿಂದಲೂ ಇದನ್ನು ನೋಡುವೆವು. ಬುದ್ಧಯುಗದಲ್ಲಿ ಇದು ನಿಸ್ಸಂದೇಹವಾಗಿ ಪ್ರಮಾಣಿತವಾಗಿದೆ. ವರ್ತಮಾನ ಯುಗದಲ್ಲಿಯೂ ನಮ್ಮ ಕಣ್ಣೆದುರಿಗೇ ಇದು ಆಗುತ್ತಿರುವುದನ್ನು ನೋಡುವೆವು. ಇತಿಹಾಸ ಎಲ್ಲಿ ಕಾಲಗರ್ಭವನ್ನು ಸೀಳಿಕೊಂಡು ಸತ್ಯವನ್ನು ಕಂಡುಹಿಡಿದಿದೆಯೊ ಅಲ್ಲೆಲ್ಲಾ ಇದು ಸತ್ಯವಾಗಿದೆ ಮತ್ತು ಈಗಲೂ ಆಗುತ್ತಿದೆ."

ಭಾರತದಲ್ಲೇ ಗುರುರೂಪಿ ದೈವೀಶಕ್ತಿ ಮಾನವನಲ್ಲಿ ಪ್ರಥಮ ವಿಕಸಿತವಾಯಿತು. ಬ್ರಹ್ಮಜ್ಞ ವೈದಿಕ ಋಷಿಕುಲವೇ ಇದಕ್ಕೆ ಪ್ರಮಾಣ. ಅವತಾರ ರೂಪಿ ಮಹಾಶಕ್ತಿಯ ಕೇಂದ್ರ ಭಾರತದಲ್ಲಿ ಪ್ರಥಮ ಉದಯಿಸಿ ಜಗತ್ತಿನಲ್ಲಿ ಮಹಾವಿಪ್ಲವವನ್ನು ಉಂಟುಮಾಡಿತು, ಸಭ್ಯತೆ ಮತ್ತು ಜ್ಞಾನವನ್ನು ಜಗತ್ತಿನಲ್ಲಿ ಮೂಡುವಂತೆ ಮಾಡಿತು. ಭಗವಾನ್ ಬುದ್ಧ ಮತ್ತು ಆತನ ನಂತರ ಬಂದ ಪ್ರಚಾರಗಣವೇ ಇದಕ್ಕೆ ಪ್ರಮಾಣ ನಾಗಾರ್ಜುನ ಮುಂತಾದ ಬೌದ್ಧ ಪ್ರಚಾರಕರು ಟರ್ಕಿ, ಚೀನ, ಜಪಾನುಗಳಿಗೆ ಹೋದರು ಮಹಾರಾಜ ಧರ್ಮ ಅಶೋಕನ ಕಾಲದಲ್ಲಿ ಈಜಿಪ್ಟ್, ಏಶ್ಯಾಮೈನರ್. ಪರ್ಶಿಯಾ ಮುಂತಾದ ಕಡೆ ಪ್ರಚಾರಕ್ಕೆ ಹೋದರು. ಶಾಸನಸ್ತಂಭಾದಿಗಳೇ ಇದಕ್ಕೆ ನಿದರ್ಶನ. ಬಹು ಕಾಲದಿಂದ ಅಭ್ಯಾಸವಾದ ಶ್ರೀಗುರುಪೂಜೆಯ ಭಾವ ಭಾರತೀಯ ರಕ್ತ ಮೂಳೆಗಳಲ್ಲಿ ಐಕ್ಯವಾಗಿ ಹೋಗಿದೆ.

ಆಧ್ಯಾತ್ಮಿಕ ರಾಜ್ಯದ ಚಕ್ರವರ್ತಿ ಅವತಾರ. ಸರ್ವದೇಶದ ಸರ್ವಕಾಲದ ಲೋಕಗುರು ಕಾಲಕಾಲದಲ್ಲಿ ಹಲವು ಆಕಾರಗಳನ್ನು ತಾಳಿದರೂ ಒಂದೇ ವ್ಯಕ್ತಿ ಕೆಲವು ವೇಳೆ ವ್ಯಕ್ತ, ಕೆಲವು ವೇಳೆ ಗುಪ್ತವಾಗಿ ಚಿರಕಾಲ ಜನರ ಕಲ್ಯಾಣದಲ್ಲಿ ನಿರತರಾಗಿರುವುದು.

ಈಶ್ವರೀ ಸಂಪೂರ್ಣತೆಯನ್ನು ಮತ್ತು ಮಾನವ ದೌರ್ಬಲ್ಯದ ಅಪೂರ್ವ ಮಿಲನ ಭೂಮಿ ಅವರ ಶರೀರ ಮತ್ತು ಮನಸ್ಸು. ಮಾನವನ ಸ್ಥೂಲಬುದ್ಧಿಗೆ ವಿಪರೀತ ಭಾವಗಳನ್ನು ನಿಲುಕುವಂತೆ ಮಾಡುವುದಕ್ಕಾಗಿ ಪುರಾಣಕಾರರು ಹರಿಹರ, ಅರ್ಧನಾರೀಶ್ವರ, ಅಪೂರ್ವ ದೇವೀ ಮೂರ್ತಿಗಳನ್ನು ಕಲ್ಪಿಸಿರುವರು. ಇವರ ಕಲ್ಪನಾ ಮೂಲಕ್ಕೆ ವಿಪರೀತ ಧರ್ಮಶೀಲ ಅಪೂರ್ವ ಅವತಾರ ವ್ಯಕ್ತಿಗಳೇ ಕಾರಣ.

" ಅವಜಾನಂತಿ ಮಾಂ ಮೂಢ ಮಾನುಷೀಂ ತನುಮಾಶ್ರಿತಂ ।
ಪರಂ ಭಾವಮಜಾನಂತೋ ಮಮಭೂತ ಮಹೇಶ್ವರಮ್ ॥ (ಗೀತಾ)

ಅವತಾರ ರೂಪೀ ಗುರುವನ್ನು ಯಾರು ಅರಿಯಬಲ್ಲರು, ಕಂಡುಹಿಡಿಯ ಬಲ್ಲರು? ಅವರು ಸರ್ವಕಾಲದಲ್ಲಿಯೂ " ಯಮೇವೈಷ ವೃಣುತೇ ತೇನ ಲಭ್ಯಃ " ಅವನಿಚ್ಛೆಯಂತೆ ಕೃಪೆಮಾಡಿ ತನ್ನ ಸ್ವರೂಪವನ್ನು ಇತರರಿಗೆ ತೋರು ವನು. ಅವನ ಸ್ವರೂಪ ಲಕ್ಷಣವನ್ನು ಅವನು ಮಾತ್ರ ವ್ಯಕ್ತಗೊಳಿಸಬಲ್ಲ. ಶ್ರುತಿಸ್ಮೃತ್ಯಾದಿ ಧರ್ಮಶಾಸ್ತ್ರ ಅವನ ಮುಖದಿಂದ ಕೇಳಿ ಸ್ವಲ್ಪವನ್ನು ವಿವರಿ ಸಲು ಸಾಧ್ಯವಾಯಿತು. ಅವುಗಳ ಸಂಕ್ಷೇಪ ಮರ್ಮವನ್ನು ಕೊಟ್ಟು ಜಗದ್ಗುರು ಅವತಾರ ಪುರುಷರ ಶಕ್ತಿ ಪೂಜೆಯನ್ನು ಮುಕ್ತಾಯಗೊಳಿಸುವೆವು.

೧. ತಾನು ಯಾರು, ಹಿಂದೆ ಏನಾಗಿದ್ದೆ, ಈ ಜನ್ಮದಲ್ಲಿ ಅವತಾರ ಮಾಡಿದ್ದು ಏಕೆ? ಇಂತಹ ವಿಷಯಗಳು ಅವತಾರವ್ಯಕ್ತಿಗೆ ಹೆಚ್ಚುಕಡಿಮೆ ಯಾವಾಗಲೂ ಗೊತ್ತಿರುವುದು. ಭಗವಾನ್ ಶ್ರೀಕೃಷ್ಣನಲ್ಲಿ ಈ ಜ್ಞಾನ ಸಮ ಧಿಕತರವಾಗಿ ವಿಕಾಸವಾಗಿದೆ. ಇದು ಭಾರತ ಧರ್ಮದಲ್ಲಿ ಇತಿಹಾಸ ಪ್ರಸಿದ್ಧ.

೨. ನಮ್ಮ ಕರ್ಮಗಳ ಮೂಲದಲ್ಲಿ ಅಭಾವವೇ ಕಾರಣ—ಅಭಾವಪೂರ ವಾಗದೆ ಇದ್ದರೆ ದುಃಖ. ಅವತಾರ ವ್ಯಕ್ತಿಗಳಿಗೆ ತಮ್ಮದೇ ಆದ ಅಭಾವ ಇಲ್ಲದೇ ಇದ್ದರೂ ಇತರರ ಅಭಾವವನ್ನು ಅನುಭವಿಸಿ ಅಥವಾ ಅವರ ಅಭಾವವನ್ನು ದೂರಮಾಡುವುದಕ್ಕಾಗಿ ಅವರು ಕರ್ಮದಲ್ಲಿ ನಿರತರಾಗಿರುವರು. ಅವರ ಏಕಾ ಗ್ರವಾದ ಕರ್ಮದ ಅಮಿತ ವೇಗದ ಎದುರಿಗೆ, ಪುರುಷಸಾಧಾರಣರ ಅಭಾವ ದಿಂದ ಪ್ರೇರಿತವಾದ ಯಾವ ಕರ್ಮವೂ ನಿಲ್ಲಲಾರದು. ಅಜೀವ ನಿಸ್ವಾರ್ಥದಿಂದ ಕರ್ಮಮಾಡಲು ಅವರಿಗೆ ಮಾತ್ರ ಸಾಧ್ಯ.

೩. ಮನೋರಾಜ್ಯದಲ್ಲಿ ಅವರು ಸಾರ್ವಭೌಮರು. ತಮ್ಮ ಮನಸ್ಸಿನ ಮೇಲೆ ಹೇಗೆಯೊ ಹಾಗೆಯೆ ಇತರರ ಮನಸ್ಸಿನ ಮೇಲೆ. ಇತರರ ಮನಸ್ಸಿನಲ್ಲಿ ಕರ್ಮಸಂಚಿತ ಪೂರ್ವಸಂಸ್ಕಾರ ಸಮೂಹವನ್ನು ಚೂರ್ಣವಿಚೂರ್ಣ ಮಾಡಿ ಸ್ವಲ್ಪಕಾಲದಲ್ಲಿ ನೂತನ ಭಾವ ಮತ್ತು ನೂತನ ಆದರ್ಶವನ್ನು ಸ್ಥಾಪಿಸುವುದಕ್ಕೆ ಅವರಿಗೆ ಮಾತ್ರ ಸಾಧ್ಯ. ಶರೀರ ಸ್ಪರ್ಶಮಾತ್ರದಿಂದ ಇತರರ ಮನಸ್ಸಿನ ಮೇಲೆ ದೊಡ್ಡ ಪರಿಣಾಮವನ್ನು ಉಂಟುಮಾಡಿ ಸಮಾಧಿಸ್ಥನನ್ನಾಗಿ ಮಾಡು

ವುದು ಅಥವಾ ಭಾವ ವಿಶೇಷವನ್ನು ಅನುಭವಿಸುವಂತೆ ಮಾಡುವ ಶಕ್ತಿ ಎಲ್ಲಾ ಧರ್ಮದ ಇತಿಹಾಸದಲ್ಲಿಯೂ ಇದೆ.

೪. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಹೊಸಮಾರ್ಗವನ್ನು ಆವಿಷ್ಕಾರ ಮಾಡುವುದಾಗಲಿ ಅಥವಾ ಜನ ಸಮಾಜದಲ್ಲಿ ಪೂರ್ವವಿದಿತಪಥಗಳಲ್ಲಿ ಒಂದು ಹೊಸ ಸಂಬಂಧ ಸೂತ್ರವನ್ನು ಕಂಡುಹಿಡಿಯುವುದರಲ್ಲಾಗಲಿ, ಈ ಹೊಸ ಆದರ್ಶವನ್ನು ತಮ್ಮ ಜೀವನದಲ್ಲಿ ಅನುಷ್ಠಾನ ಮಾಡಿ ಅದನ್ನು ಸಮಾಜದಲ್ಲಿ ಪ್ರಚಾರ ಮಾಡುವುದನ್ನು ಹಿಂದಿನಿಂದಲೂ ಮಾಡುತ್ತಿರುವರು.

೫. ಧರ್ಮಾದರ್ಶಕ್ಕೆ ಭಿನ್ನವಾದ ಸಮಾಜಕ್ಕೆ ಅನ್ವಯಿಸುವ ನೈತಿಕ ಆದರ್ಶಗಳೂ ಅವರಲ್ಲಿ ವ್ಯಕ್ತವಾಗಿದೆ. ನೈತಿಕ ಆದರ್ಶ, ಧರ್ಮ ಆದರ್ಶಕ್ಕಿಂತ ಬೇರೆ. ಸಮಾಜ ಪರಿವರ್ತನವಾಗುತ್ತಿರುವಾಗ ಜೊತೆಜೊತೆಯಲ್ಲೇ ನೈತಿಕ ಆದರ್ಶ ಬದಲಾಯಿಸುತ್ತಿರುವುದು. ಇದನ್ನು ತಿಳಿಯದೆ ನಾವು ಅನೇಕ ವೇಳೆ ಸಕಲ ಅವತಾರಪುರುಷರಲ್ಲಿಯೂ ಒಂದೇ ನೈತಿಕ ಆದರ್ಶವನ್ನು ನೋಡಬೇಕೆಂದು ಇಚ್ಛಿಸಿದರೆ ನಾವು ಭ್ರಾಂತಿವಶರಾಗುವೆವು.

೬. ಅವತಾರ ಮುಕ್ತಕಂಠದಿಂದ ಜನಸಾಧಾರಣರಿಗೆ "ಮಾಮೇವ ಯೇ ಪ್ರಪದ್ಯನ್ತೇ ಮಾಯಾಮೇತಾಂ ತರನ್ತಿ ತೇ" "Come unto Me all ye that labour and are heavy laden, I will give you rest" "ಹೇ ತ್ರಿತಾಪಗ್ಧ ಜೀವಿಗಳೇ, ನನ್ನನ್ನು ಆಶ್ರಯಿಸಿ, ನಾನು ನಿಮಗೆ ಶಾಂತಿ ನೀಡುವೆ." ಯಾರು ಲೋಕಗುರುವೊ, ಈಶ್ವರಾವತಾರವೊ, ಅವನು ಇದನ್ನು ತಾನು ಸ್ವಯಂ ಅನುಭವಿಸಿ ಮತ್ತು ತನ್ನ ಶಕ್ತಿಯಿಂದ ಇದೇ ಅನುಭವವನ್ನು ಇತರರಿಗೂ ಕೊಡಬಲ್ಲ.

ಅವತಾರಪುರುಷರು ಕಾಲಕಾಲಕ್ಕೆ ಗುಪ್ತವೇಷದಲ್ಲಿ ಆವಿರ್ಭಾವಾಗುವುದನ್ನು ನಾವು ಆಗಲೇ ವಿವರಿಸಿರುವೆವು. ಶ್ರೀರಾಮಕೃಷ್ಣರು ಈ ವಿಷಯದಲ್ಲಿ ಹೀಗೆ ಹೇಳುತ್ತಿದ್ದರು: "ರಾಜ ಕೆಲವು ವೇಳೆ ತನ್ನ ಅನುಯಾಯಿಗಳೊಡನೆ ಪ್ರಜೆಗಳಿಗೆ ಮುಂಚೆ ತಿಳಿಸಿ ನಗರಿಯನ್ನು ನೋಡುವುದಕ್ಕೆ ಹೋಗುವನು ಮತ್ತು ಕೆಲವು ವೇಳೆ ಪ್ರಜೆಗಳಿಗೆ ತಿಳಿಸದೆ ಅವರ ಸ್ಥಿತಿಯನ್ನು ಅರಿಯಲು ಗೋಪ್ಯವಾಗಿ ಹೋಗುವನು. ಪ್ರಜೆಗಳಿಗೆ ಯಾವಾಗ ಈತ ರಾಜ, ಗುಪ್ತ ವೇಷದಲ್ಲಿ ತಮ್ಮನ್ನು ನೋಡುವುದಕ್ಕೆ ಬಂದಿರುವನು ಎಂದು ಗೊತ್ತಾಗು

ವುದೋ ಆಗ ರಾಜ ಪಲಾಯನ ಮಾಡುವನು. ಇದರಂತೆಯೇ ಅವತಾರಗಳ ವ್ಯಕ್ತ ಮತ್ತು ಗುಪ್ತ ಆವಿರ್ಭಾವ."

ಶ್ರೀರಾಮಕೃಷ್ಣರು ಅವತಾರ ಸಂಬಂಧದಲ್ಲಿ ಮತ್ತೊಂದು ನಿದರ್ಶನ ವನ್ನು ಕೊಡುತ್ತಿದ್ದರು. "ಅವತಾರ ಪುರುಷರಿಗೆ ಎಂದಿಗೂ ಮುಕ್ತಿಯಿಲ್ಲ. ಸರ್ಕಾರಿ ಅಧಿಕಾರಿಗಳು ಯಾವುವಾದರೂ ಜಮೀನ್ದಾರಿಯಲ್ಲಿ ಅವ್ಯವಸ್ಥೆ ಯಾದರೆ ತಕ್ಷಣ ಅಲ್ಲಿಗೆ ಹೋಗಿ ಅವನ್ನು ಅಡಗಿಸುವಂತೆ ಬ್ರಹ್ಮಮಯಿಯ ಜಮೀನ್ದಾರಿಯಲ್ಲಿ ಎಂದಾದರೂ ಅವ್ಯವಸ್ಥೆಯಾದರೆ ಆಗ ಅವತಾರಪುರುಷ ಆವಿರ್ಭೂತನಾಗಿ ಲೋಕದ ದುಃಖ ಮೋಚನ ಮಾಡುವನು." ಎಂದರೆ ಅವತಾರಪುರುಷ ಇದರಿಂದ ಯಾವಾಗಲೂ ಮಾಯಾಧೀನರಾಗಿರುವನು ಎಂದು ಭಾವಿಸಬಾರದು. ಅವನು ಸ್ವಭಾವತಃ ಮಾಯಾಧೀಶ, ಆತ್ಮಾರಾಮ ಯಾವ ಕಾಲದಲ್ಲಿಯೂ ಬದ್ಧನಲ್ಲ. ಹೀಗಿರುವಾಗ ಮುಕ್ತಿ ಎಲ್ಲಿ, ಅದನ್ನು ಹೇಗೆ ಅವನು ಹೊಂದುವನು!

ಅವತಾರ ಆಧ್ಯಾತ್ಮಿಕ ಜಗತ್ತಿನಲ್ಲಿ ಏಕಮಾತ್ರ ಪಥಪ್ರದರ್ಶಕ. ಅವರ ಪವಿತ್ರ ಜೀವನವನ್ನು ಜಗತ್ತು ಅನಾದಿಕಾಲದಿಂದಲೂ ಅವನತಮಸ್ತಕದಿಂದ ಪೂಜಿಸುತ್ತಿರುವುದು, ಇನ್ನು ಮುಂದೆಯೂ ಹಾಗೆಯೇ ಮಾಡುವುದು. ಅವನು ಮನುಷ್ಯ ಶರೀರವನ್ನು ಧರಿಸಿ ಇಡೀ ಮಾನವ ಕೋಟಿ ಧನ್ಯವಾಗಿದೆ. ಹೇ ಭಾರತ, ಯುಗಯುಗದಲ್ಲಿ ನೀನು ಅವನ ವಿಶೇಷ ಕೃಪೆಗೆ ಪಾತ್ರವಾಗಿ ಧರ್ಮ ಜಗತ್ತಿನಲ್ಲಿ ಅಗ್ರಸ್ಥಾನವನ್ನು ಅಲಂಕರಿಸಿರುವೆ. ಅದನ್ನು ಸನ್ಮಾನಿಸುವುದನ್ನು ಎಂದಿಗೂ ಮರೆಯಬೇಡ.

ಈಶ್ವರಾವತಾರವಲ್ಲದೆ ಜೊತೆಗೆ ಸಿದ್ಧಪುರುಷ, ಮಂತ್ರದಾತ, ಕುಲಗುರು ಮತ್ತು ಉಪಗುರು ಮುಂತಾದವರುಗಳನ್ನ ಚಿರಕಾಲ ಸನ್ಮಾನಿಸುತ್ತಿರುವುದು. ಇದರ ವಿಷಯದಲ್ಲಿಯೂ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ.

ಸಿದ್ಧಪುರುಷ, ಈಶ್ವರಾವತಾರನ ನಿರ್ದಿಷ್ಟ ಪಥದಲ್ಲಿ ಮುಂದುವರಿದು ಪೂರ್ಣಕಾಮನಾಗಿ ಜೀವನ್ಮುಕ್ತನಾಗುತ್ತಾನೆ. ಆಗ ಅವರಿಗೆ ಸ್ವಾರ್ಥಕರ್ಮ ಅಸಂಭವ, ಏಕೆಂದರೆ ಆಗ ಅವರ ಮನಸ್ಸು:

ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿ ವಿಚಾಲ್ಯತೇ ॥ (ಗೀತಾ)

[ಯಾವುದನ್ನು ಹೊಂದಿದವನಾಗಿ ಅದಕ್ಕಿಂತ ಅಧಿಕತರ ಲಾಭ ಮತ್ತಾವುದೂ ಇಲ್ಲವೆಂದು ಭಾವಿಸುವನೊ ಮತ್ತು ಯಾವುದರಲ್ಲಿ ಸ್ಥಿತನಾದರೆ ಅತಿ ಕಠಿಣವಾದ ದುಃಖದಿಂದಲೂ ವಿಚಲಿತನಾಗುವುದಿಲ್ಲವೊ] ಇಂತಹ ಅವಸ್ಥೆ ಅವರಿಗೆ ಪ್ರಾಪ್ತವಾದಾಗ ಪ್ರಪಂಚದ ಸುಖದುಃಖಗಳು ತುಚ್ಛವಾಗಿ ಕಾಣುವುವು. ಇವರಲ್ಲಿ ಅವತಾರ ಪುರುಷರ ಶಕ್ತಿ ವ್ಯಕ್ತವಾಗದೇ ಇದ್ದರೂ ಇವರಲ್ಲಿ ಗುರುಶಕ್ತಿ ಪ್ರಬುದ್ಧವಾಗಿ ಲೋಕಕಲ್ಯಾಣದಲ್ಲಿ ನಿಯುಕ್ತರಾಗುವರು. ಧರ್ಮ ಜಗತ್ತಿನಲ್ಲಿ ನೂತನ ಪಥವನ್ನು ಆವಿಷ್ಕಾರ ಮಾಡದೆ ಹೋದರೂ ಅವರ ದರ್ಶನದಿಂದ ಕಾಮಾಕಾಂಚನದಲ್ಲಿ ನಿರತನಾದ ಸ್ಥೂಲದೃಷ್ಟಿಯ ಮಾನವ, ಧರ್ಮಾದರ್ಶವನ್ನು ಕೇವಲ ಛಾಯಾಪ್ರತೀಕವೆಂದು ಅಲ್ಲಗಳೆಯುತ್ತಿದ್ದವನು, ಅವನಿಗೆ ಇವು ಸಜಲ ಜೀವನವೆಂದು ಭಾಸವಾಗುವುದು.

ಈಶ್ವರಾವತಾರದಂತೆ ಸಿದ್ಧಪುರುಷರು ಇಚ್ಛಾ ಅಥವಾ ಸ್ಪರ್ಶ ಮಾತ್ರದಿಂದ ಇತರರಿಗೆ ಧರ್ಮ ಜೀವನವನ್ನು ದಾನಮಾಡಲು ಸಮರ್ಥರಲ್ಲದೇ ಇದ್ದರೂ ಇತರರ ಧರ್ಮ ಜೀವನವನ್ನು ಉದ್ದೀಪನಗೊಳಿಸುವ ಇಚ್ಛೆ ನಿಷ್ಫಲವಾಗುವುದಿಲ್ಲ. ಜನಾಂಗದ ಜೀವನದಲ್ಲಿ ಅವತಾರಪುರುಷರಂತೆ ಉತ್ತಾಲ ತರಂಗ ಮಾಲೆಯಿಂದ ಕೂಡಿದ ಮಹಾಪ್ರವಾಹದಂತಹ ಬದಲಾವಣೆಯನ್ನು ತರಲು ಸಾಧ್ಯವಿಲ್ಲದೇ ಇದ್ದರೂ ಸುತ್ತಮುತ್ತಲ ಜನರ ಮೇಲೆ ತಮ್ಮ ಪ್ರಭಾವವನ್ನು ಬೀರಿ ಅವರಲ್ಲಿ ಧರ್ಮ ಜಾಗೃತಿಯನ್ನು ಉದ್ದೀಪನಗೊಳಿಸಬಲ್ಲರು. ಸಿದ್ಧಾತ್ಮ ಮಂತ್ರಶಕ್ತಿಯ ಸಹಾಯದಿಂದ ಇತರರಲ್ಲಿ ಧರ್ಮಶಕ್ತಿ ಸಂಚರಿಸುವಂತೆ ಮಾಡುವನು; ಅವತಾರ ಪುರುಷನನ್ನು ಬಿಟ್ಟರೆ ಇತರರಲ್ಲಿ ಎಲ್ಲಿಯೂ ಅಷ್ಟೊಂದು ಆಧ್ಯಾತ್ಮಿಕಪ್ರಕಾಶವನ್ನು ನೋಡಲಾರೆವು. ಅವತಾರ ಧರ್ಮಪ್ರವರ್ತಕ. ಸಿದ್ಧಾತ್ಮ ಅವತಾರಪುರುಷನಿಂದ ಉದಿಸಿದ ಧರ್ಮಕ್ಕೆ ತನ್ನ ಜೀವನದ ಸಾಧನೆಯಿಂದ ಆ ಧರ್ಮಕ್ಕೆ ಶಕ್ತಿಯನ್ನು ನೀಡುವನು. ಇಂತಹ ಸಿದ್ಧಾತ್ಮರ ಪೂಜೆಯಿಂದ, ಇವರ ಆದರ್ಶದ ಚಿಂತನೆಯಿಂದ, ಮಾನವ ಧನ್ಯನಾಗುವನು, ಕೃತಾರ್ಥನಾಗುವನು. ಈ ವಿಷಯದ ಮೇಲೆ ಹೆಚ್ಚು ಹೇಳಬೇಕಾಗಿಲ್ಲ.

ಸ್ಥೂಲ ಚಕ್ಷುಸ್ಸಿಗೆ ಕಾಣದೇ ಇದ್ದರೂ ಧರ್ಮ ಸಚೇತನ. ಅನುಷ್ಠಾನದಿಂದ ಇದರ ಫಲವನ್ನು ಪ್ರತ್ಯಕ್ಷ ಅನುಭವಿಸಿ, ಇತರರಿಗೂ ಇದನ್ನು ಅನುಭವಿಸುವಂತೆ ಮಾಡಬಹುದು. ವಿಶೇಷ ಶಕ್ತಿಸಂಪನ್ನ ಪುರುಷ, ತನ್ನ ಶರೀರ ಮತ್ತು ಮನಸ್ಸಿನ ಮೂಲಕ ಇತರರಲ್ಲಿ ಆ ಶಕ್ತಿ ಸಂಚರಿಸುವಂತೆ ಮಾಡಬಲ್ಲ. ಈಶ್ವರ–

ಆತ್ಮ, ಪರಲೋಕ ಸಂಬಂಧಾದಿವಸ್ತುಗಳು ಸಾಧಾರಣ ಜನರಿಗೆ ತಿಳಿದುಕೊಳ್ಳಲು, ಸ್ವಪ್ನದಲ್ಲಿ ಕೂಡ ಸಾಧ್ಯವಾಗದೇ ಇದ್ದರೂ, ಇವೆಲ್ಲವನ್ನು ಸಿದ್ಧ ಪುರುಷ ಅವರಿಗೆ ಪ್ರತ್ಯಕ್ಷಮಾಡಿಕೊಡಬಲ್ಲ. ಅನಾದಿಕಾಲದಿಂದಲೂ ಈ ವಿಷಯಗಳನ್ನು ಭಾರತ ಪ್ರತ್ಯಕ್ಷ ಮನಗಂಡು ವಿಶ್ವಾಸಿಸುತ್ತಿರುವುದು.

ಬಹುಕಾಲದಿಂದಲೂ ಬಂದಿರುವ ಧ್ಯಾನ ಮತ್ತು ಏಕಾಗ್ರತೆಯ ಮೂಲಕ ಭಾವ ವಿಶೇಷಗಳನ್ನು ಅನುಭವಿಸಿ ಅವನ್ನು ಶಬ್ದ ವಿಶೇಷದಲ್ಲಿ ಸಂಗ್ರಹಿಸಿಡುವರು. ಇದು ಉಚ್ಚಾರಮಾತ್ರದಿಂದ ಆ ಭಾವ ಇತರರಲ್ಲಿ ಉದಿಸಿ ಅಪೂರ್ವ ಅನುಭವ ಬರುವಂತೆ ಮಾಡಬಲ್ಲದು. ಪ್ರತಿಯೊಬ್ಬರ ಅನುಭವವೂ ಜೀವನದಲ್ಲಿ ಸುಖ ದುಃಖಗಳ ಫಲವನ್ನು ನೀಡಿ ಅವನ ಜೀವನವನ್ನು ಪರಿವರ್ತನ ಮಾಡುವುದು. ಅವನ ಅನುಭವಕ್ಕೆ ತಕ್ಕಂತೆ ಪರಿವರ್ತನವಾಗಿ ವಿಶೇಷ ಆನಂದಕ್ಕೂ ದುಃಖಕ್ಕೂ ಅಧಿಕಾರಿಯಾಗುವನು. ಇದೇ ಮಂತ್ರಶಕ್ತಿ. ಈ ಮಂತ್ರಶಕ್ತಿಯ ಪ್ರಭಾವವನ್ನು ಭಾರತ ಬಹುಕಾಲದಿಂದಲೂ ಮನಗಂಡು ಅದರ ಆರಾಧನೆಯಲ್ಲಿ ನಿತ್ಯನಿರತವಾಗಿರುವುದು. ಭಾರತ ಧೂರ್ತರ ಮತ್ತು ದುರ್ಜನರ ಉಪಟಳಕ್ಕೆ ಹಲವು ವೇಳೆ ಒಳಗಾದರೂ ಗುರು ಶಕ್ತಿ ಸಹಾಯದಿಂದ ಇಂತಹ ಪರೀಕ್ಷೆಗಳಿಂದ ಉತ್ತೀರ್ಣವಾಗಿ ನಿಂತಿದೆ. ಮಂತ್ರಶಕ್ತಿಯ ಮೇಲಿನ ವಿಶ್ವಾಸ ಮಂತ್ರದಾತಾಗುರು ಉಪಾಸನೆಯ ಮೂಲದಲ್ಲಿದೆ.

ಅವತಾರಪುರುಷನಿಂದ ಉಚ್ಚಾರಿತ ಸಕಲ ವಾಕ್ಯವೂ ಯತಾರ್ಥ ಮಂತ್ರ, ಆಶುಫಲಪ್ರದ. ಏಕೆಂದರೆ ಅವುಗಳಲ್ಲಿ ಇವನ ವಿಶೇಷಶಕ್ತಿ ಆವಿರ್ಭೂತವಾಗಿದೆ. ಸಹಸ್ರಾರು ವರ್ಷಗಳಾದರೂ ಈ ಶಕ್ತಿ ಮಾಯವಾಗುವುದಿಲ್ಲ. ಸಿದ್ಧಪುರುಷ ಉಚ್ಚಾರಿತ ಮಂತ್ರದಿಂದ ಹನ್ನೆರಡು ವರುಷಗಳ ಒಳಗೆ ಫಲ ಪ್ರತ್ಯಕ್ಷವಾಗುವುದು. ಇದು ಲೋಕಪ್ರಸಿದ್ಧ. ಸಾಧು ಮತ್ತು ಸಾಧಕರ ಉಚ್ಚಾರಿತ ಮಂತ್ರ ಫಲಪ್ರದವಾಗಬೇಕಾದರೆ ಹೆಚ್ಚುಕಾಲ ಹಿಡಿಯುವುದು

ಮಂತ್ರಫಲವನ್ನು ಪಡೆಯಬೇಕಾದರೆ ಉಪಯುಕ್ತ ಗುರು ಒಂದೇ ಸಾಲದು. "ಆಶಿಷ್ಠ, ದೃಢಿಷ್ಠ, ಬಲಿಷ್ಠ" ಮತ್ತು ಶ್ರದ್ಧಾ ಸಂಪನ್ನನಾದ ಶಿಷ್ಯನಲ್ಲಿ ಗುರುಶಕ್ತಿ ಸಂಚಾರಿತವಾದರೆ ಫಲ ಪ್ರತ್ಯಕ್ಷವಾಗುವುದು. ಒಳ್ಳೆ ಬೆಳೆ ಸಿಕ್ಕಬೇಕಾದರೆ ಫಲವತ್ತಾದ ಭೂಮಿ, ಸರಿಯಾಗಿ ಉತ್ತಿರಬೇಕು, ಒಳ್ಳೆ ಬೀಜ ವಿರಬೇಕು, ಜೊತೆಗೆ ಶ್ರಮದಿಂದ ಅದನ್ನು ಸಂರಕ್ಷಿಸಿ ನಿರೇನ್ನು ಎರೆಯಬೇಕು.

ಬೀಜ ಉತ್ತಮವಾದರೂ ಅನೇಕ ವೇಳೆ ಮಂತ್ರಶಕ್ತಿ ಫಲ ದೊರಕುವುದಿಲ್ಲ. ಅದಕ್ಕೆ ಕಾರಣ ಇತರ ವಿಷಯಗಳ ಅಭಾವವೇ ವಿನಃ ಬೇರಲ್ಲ. ನಮ್ಮ ಪೂಜ್ಯ ಬಂಧುಗಳೊಬ್ಬರು ಹೇಳುವಂತೆ "ದೋಣಿ ಲಂಗರ್ ತೆಗೆದಲ್ಲದೆ ಮುಂದೆ ಹೋಗುವುದಿಲ್ಲ". ಅದರಂತೆಯೇ ಉಳಿದವುಗಳು ಅಭಾವವಾಗಿರುವಾಗ ಭಗವತ್ ಶಕ್ತಿಯನ್ನು ಪಡೆಯಲಾರೆವು.

ವಿಷಯಾಸಕ್ತ ಮನಸ್ಸಿನಿಂದ ಮಂತ್ರಶಕ್ತಿಯನ್ನು ಉಪಯೋಗಿಸಿದರೆ ಕೆಲವುವೇಳೆ ಅಪಕಾರವೂ ಆಗುವುದುಂಟು. ಒಬ್ಬ ಮತ್ತೊಬ್ಬರ ಮನಸ್ಸನ್ನು ಸ್ವಾಧೀನಮಾಡಿಕೊಳ್ಳುವುದು ಸಾಧ್ಯ ಎಂಬುದನ್ನು ಅರಿತು ಕೆಲವುವೇಳೆ ಕಾಮ ಕ್ರೋಧವಶರಾಗಿ, ಮಂತ್ರಶಕ್ತಿಯಿಂದ ತಮ್ಮ ಸ್ವಾರ್ಥಸಾಧನೆ ಮಾಡಿಕೊಳ್ಳಲೆತ್ನಿಸುವರು. ಅಥವಾ ದುರ್ಬಲ ನೀಚ ಪಶುವೃತ್ತಿ ಮಾನವ ತನ್ನ ಮೃಗೀಯ ತೃಷ್ಣೆಯನ್ನು ತೃಪ್ತಿಪಡಿಸಿಕೊಳ್ಳುವ ಸಲುವಾಗಿ ಪವಿತ್ರ ಗುರುನಾಮವನ್ನು ಸ್ವೀಕರಿಸಲು ಅಯೋಗ್ಯನಾದರೂ ಇತರ ನೀಚ ಮನುಷ್ಯರ ಸಹಾಯದಿಂದ ಆ ಶಕ್ತಿಯನ್ನು ಪ್ರಯೋಗಿಸಲು ಯತ್ನಿಸುವನು. ಇದರಿಂದ ಎಂದಾದರೂ ಸ್ವಲ್ಪ ಜಯ ಲಭಿಸಿದರೂ ಇಂತಹ ದುಷ್ಟವೃತ್ತಿಯವರು ಪರಿಣಾಮದಲ್ಲಿ ನಾನಾ ವಿಧ ದುಃಖ ಅಶಾಂತಿ ಮತ್ತು ಮಾನಸಿಕ ಅವನತಿರೂಪದ ಶಿಕ್ಷೆಯನ್ನು ಅನುಭವಿಸುವರು. ತಂತ್ರಶಾಸ್ತ್ರದಲ್ಲಿ ಅನೇಕ ಕಡೆ ಪವಿತ್ರ ದೈವೀಶಕ್ತಿಯ ಆರಾಧನೆಯ ಜೊತೆಯಲ್ಲೆ ಮಾರಣ ಉಚ್ಚಾಟನ ವಶೀಕರಣ ಮುಂತಾದುವನ್ನು ನೋಡುವೆವು. ಪಾಶವಪ್ರವೃತ್ತಿಮಾನವ, ಪವಿತ್ರ ಧರ್ಮಶಾಸ್ತ್ರವನ್ನು ತೆಗೆದುಕೊಂಡರೂ ಧರ್ಮದ ಹೆಸರಿನಲ್ಲಿ ಪೈಶಾಚಿಕ ಪ್ರವೃತ್ತಿಯನ್ನು ಅಲ್ಲಿ ತೋರಿ ಕಳಂಕಿತ ಮಾಡಿರುವನು. ಬೌದ್ಧಧರ್ಮದ ಅಧಃಪತನಕಾಲದಿಂದ ಈ ದುರ್ವೃತ್ತಿ ಅಧಿಕವಾಯಿತು. ಇದು ಇತಿಹಾಸಪ್ರಸಿದ್ಧವಾಗಿದೆ. ಆ ಧರ್ಮಗ್ಲಾನಿಯನ್ನು ನಿವಾರಿಸುವ ಸಲುವಾಗಿ ಜ್ಞಾನಗುರು ಶಿವಾವತಾರಿ ಶಂಕರಾಚಾರ್ಯ ಮತ್ತು ಭಕ್ತಿಪ್ರಾಣರಾದ ಶ್ರೀ ಚೈತನ್ಯರು ಭರತಖಂಡದಲ್ಲಿ ಉದಿಸಿದರು. ಅವರು ಪುನಃ ಶಕ್ತಿ ಉಪಾಸನೆಯ ಪವಿತ್ರ ಆದರ್ಶವನ್ನು ಜನಸಾಧಾರಣರಿಗೆ ತೋರಿ ಶಿವೋಕ್ತ ತಂತ್ರಶಾಸ್ತ್ರಕ್ಕೆ ಪುನಃ ಗೌರವವನ್ನು ಸಂಪಾದಿಸಿ ಕೊಟ್ಟರು. ಶ್ರೀ ಶಂಕರಾಚಾರ್ಯ ಲಿಖಿತ ಶಿವದುರ್ಗಾದಿಗಳ ಸ್ತವರಾಜಿ, ವಿಷ್ಣುಸಹಸ್ರನಾಮ ಭಾಷ್ಯ ಮತ್ತು ಶ್ರೀಚೈತನ್ಯರು ಅನ್ನಪೂರ್ಣಾದೇವಿ

ಯನ್ನು ತಮ್ಮ ಇಷ್ಟದೈವವಾಗಿ ತೆಗೆದುಕೊಂಡದ್ದು, ಇವುಗಳಿಂದ ಮೇಲಿನ ವಿಷಯ ವ್ಯಕ್ತವಾಗುವುದು. ಅನ್ನಪೂರ್ಣ ಶ್ರೀಶಂಕರಾಚಾರ್ಯರ ಇಷ್ಟದೇವಿ ಎಂಬುದಕ್ಕೂ ಪ್ರಮಾಣಗಳು ದೊರಕುವುವು.

ಶ್ರೀರಾಮಕೃಷ್ಣರು ಹೀಗೆ ಹೇಳುತ್ತಿದ್ದರು : ಪ್ರತಿಯೊಂದು ಅವತಾರ ವ್ಯಕ್ತಿಗಳೂ ಶಕ್ತಿ ಉಪಾಸನೆ ಮಾಡಿದರು. ಶಕ್ತಿಯ ವಿಶೇಷ ಅನುಗ್ರಹವಿಲ್ಲದೆ ಲೋಕಗುರುತ್ವ ಲಭಿಸುವುದಿಲ್ಲ. ಅಥವಾ ಧರ್ಮ ಭಾಗೀರಥಿಯ ಪ್ರಬಲ ತರಂಗವನ್ನು ದೇಶದಲ್ಲೆಲ್ಲಾ ಹರಿಸಿ, ಜನಸಾಧಾರಣರಲ್ಲಿ ಧರ್ಮಪ್ರಚಾರವನ್ನು ಮಾಡಲು ಸಾಧ್ಯವಾಗುವುದಿಲ್ಲ.'' ಶ್ರೀಚೈತನ್ಯರ ಜೀವನದಲ್ಲಿ ವೇದಾಂತ ಮತ್ತು ಶಕ್ತಿಭಾವನೆಗಳು ಕಾಣಬರುವುದಿಲ್ಲ ಎಂದಾಗ ಶ್ರೀರಾಮಕೃಷ್ಣರು, "ಆನೆಗೆ ಎರಡು ವಿಧದ ಕೊಂಬು ಇರುವಂತೆ, ಒಂದು ಹೊರಗೆ ಶತ್ರುಗಳಿಂದ ಪಾರಾಗುವುದಕ್ಕೆ, ಮತ್ತೊಂದು ಒಳಗೆ ಆಹಾರವನ್ನು ಅಗಿಯುವುದಕ್ಕೆ. ಇದ ರಂತೆಯೇ ಶ್ರೀಚೈತನ್ಯರಲ್ಲಿಯೂ ಎರಡು ವಿಧದ ಭಾವಗಳು ಇದ್ದುವು" ಎನ್ನು ತ್ತಿದ್ದರು. ಭಕ್ತಿ ಅವರ ಹೊರಗಿನ ಭಾವ, ಜನಸಾಮಾನ್ಯಕ್ಕೆ ಪ್ರಚಾರಮಾಡುವು ದಕ್ಕಾಗಿ. ವೇದಾಂತ ಮತ್ತು ಶಕ್ತಿ ಉಪಾಸನೆ ಅಂತರಂಗದ ಭಾವ. ಅದು ಅವರಿಗೋಸುಗವಾಗಿ, ಕೇಶವ ಭಾರತಿಯಿಂದ ಸನ್ಯಾಸ ತೆಗೆದುಕೊಂಡದ್ದು, ಅನ್ನಪೂರ್ಣಾದೇವಿಯ ಉಪಾಸನೆ ಇದಕ್ಕೆ ನಿದರ್ಶನ.

ಯಾವ ಶಕ್ತಿದೇವತೆಯನ್ನಾದರೂ ಉಪಾಸನೆಮಾಡಲಿ, ಪವಿತ್ರಭಾವದಿಂದ ಶ್ರದ್ಧಾಸಂಪನ್ನರಾಗಿ ಅದನ್ನು ಮಾಡಿದರೆ ನೀವು ಮುಂದುವರಿಯುವಿರಿ. ಸ್ವಾರ್ಥಾನುಸಂಧಾನದ ನಾಮಗಂಧದಿಂದಲೂ ಮನಸ್ಸು ಪಾರಾಗಿರಬೇಕು. ಇಲ್ಲದೇ ಇದ್ದರೆ ಉಪಾಸನೆಯು ಸಿದ್ಧಿ ಲಾಭ ಅಸಂಭವ. ಅನೇಕ ವೇಳೆ ವಿಪರೀತ ಫಲದಿಂದ ಉಪಾಸಕನನ್ನೇ ಅಧೋಗತಿಗೆ ಒಯ್ಯುವುದು. ವಿಷಯವನ್ನು ಮನಸ್ಸಿನಲ್ಲಿ ಸದಾ ಜಾಗರೂಕತೆಯಿಂದ ನೋಡಿ ಮುಂದುವರಿಯಬೇಕಾಗಿದೆ. ಶಕ್ತಿಪ್ರಯೋಗವನ್ನು ಯಥಾರ್ಥರೀತಿ ಉಪಯೋಗಿಸದೆ, ಸ್ವಾರ್ಥಸುಖಕ್ಕಾಗಿ ಅದನ್ನು ಉಪಯೋಗಿಸಿದರೆ ಪರಿಣಾಮದಲ್ಲಿ ಶಕ್ತಿ ಹಾನಿ. ಮತ್ತು ದುಃಖ ಪ್ರಾಪ್ತಿಯಾಗುವುದರಲ್ಲಿ ಸಂದೇಹವಿಲ್ಲ. ಬೆಂಕಿಯೊಂದಿಗೆ ಆಡುತ್ತಿದ್ದರೆ ಅನೇಕ ವೇಳೆ ಅವರು ತಮ್ಮ ದೇಹವನ್ನು ಸುಟ್ಟುಕೊಂಡು ಮನೆಯನ್ನು ಭಸ್ಮಮಾಡಿ ಕೊಳ್ಳುವರು. ಸ್ಥೂಲಶಕ್ತಿಯೊಂದಿಗೆ ಆಟವಾಡುವಾಗ ಹೇಗೋ ಹಾಗೆಯೆ

ಸೂಕ್ಷ್ಮ ಶಕ್ತಿಯೊಂದಿಗೆ ಆಟವಾಡುವುದು. ಇಲ್ಲಿ ಕೆಲವು ವೇಳೆ ಅದಕ್ಕಿಂತಲೂ ಅಧಿಕ ದುಃಖಪ್ರಾಪ್ತಿ. ಶಾರೀರಿಕ, ಮಾನಸಿಕ, ಆಧ್ಯಾತ್ಮಿಕ ಶಕ್ತಿಪ್ರಯೋಗ ವನ್ನು ಸಾವಧಾನದಿಂದ ಕೇಳಿ, ತಿಳಿದುಕೊಂಡು, ಶ್ರದ್ಧಾಸಂಪನ್ನನಾಗಿ ಮಾಡ ಬೇಕು. ಶಾರೀರಿಕ ಶಕ್ತಿಯ ಅಪವ್ಯಯದಿಂದ ಅನೇಕ ಜನ ಅಕಾಲದಲ್ಲಿ ವೃದ್ಧಾಪ್ಯವನ್ನು ಪಡೆದು ತಮ್ಮ ಮತ್ತು ತಮ್ಮ ಸಮಾಜದ ದೌರ್ಬಲ್ಯಕ್ಕೆ ಕಾರಣರಾಗುವರು. ಮಾನಸಿಕ ಶಕ್ತಿಯ ಅಪವ್ಯಯದಿಂದ ತಾವು ಬುದ್ಧಿಹೀನ ರಾಗಿ, ದೃಢಮನಸ್ಸಿಲ್ಲದೆ, ಉನ್ಮಾದಗ್ರಸ್ಥರಾಗಿ ತಮ್ಮ ಮತ್ತು ಇತರರ ಹಾನಿಗೆ ಕಾರಣರಾಗುವರು. ಆಧ್ಯಾತ್ಮಿಕ ಶಕ್ತಿಯ ಅಪವ್ಯಯದಿಂದ ಇಡೀ ದೇಶ ಸಮೂಹ ಪಶುಸಮಾನರಾಗಿ ಬಿದ್ದುಹೋಗಿರುವರು. ಇತಿಹಾಸ ಇದಕ್ಕೆ ಸಾಕ್ಷಿ. ಇವುಗಳನ್ನೆಲ್ಲಾ ನಿಮ್ಮ ಮನಸ್ಸಿನಲ್ಲಿಟ್ಟು ಶ್ರದ್ಧಾಸಂಪನ್ನರಾಗಿ ಸಾವಧಾನದಿಂದ ಶಕ್ತಿ ಪೂಜೆಯಲ್ಲಿ ನಿರತರಾಗಿ.

ಮಂತ್ರದಾತಾಗುರು ಉಪಾಸನಾಪ್ರಸಂಗ ಬಂಗಾಳದಲ್ಲಿರುವ ಒಂದು ಲೋಕಾಚಾರ. ಕುಲಗುರು ಮತ್ತು ಗುರುವಂಶವನ್ನು ಪೂಜಿಸುವುದು ಬಂಗಾಳ ದೇಶದಲ್ಲಿ ಅಲ್ಲದೆ ಇತರ ಕಡೆ ಇಂದು ರೂಢಿಯಲ್ಲಿ ಇಲ್ಲ. ಎಲ್ಲಿ ಸಂಸಾರತ್ಯಾಗಿ ಸಾಧು ಅಥವಾ ನಿಷ್ಠಾವಂತನಾದ ಗೃಹಸ್ಥನ ಮೇಲೆ ಭಕ್ತಿಭಾವ ಉದಿಸು ವುದೋ ಅವನಿಂದ ಮಂತ್ರದೀಕ್ಷೆಯನ್ನು ಪಡೆಯುವುದು ಪ್ರಚಾರದಲ್ಲಿದೆ. ಅವನು ಸಂಸಾರತ್ಯಾಗಿ ಗುರುವಾದರೆ ಯಾವ ಪ್ರದೇಶದಲ್ಲಿ ಯಾವ ವಂಶದಲ್ಲಿ ಜನ್ಮಗ್ರಹಣ ಮಾಡಿದನು ಎಂಬುದು ಅನೇಕ ವೇಳೆ ಗೊತ್ತಾಗುವುದಿಲ್ಲ. ಆದಕಾರಣವೆ ಗುರುಕುಲವನ್ನು ಪೂಜಿಸುವುದಕ್ಕೆ ಆಗುವುದಿಲ್ಲ. ಆದರೆ ಧಾರ್ಮಿಕ ಗೃಹಸ್ಥ ಗುರುವಾದರೆ ಅವನು ಬದುಕಿರುವಾಗ ಮತ್ತು ಕಾಲವಾದ ನಂತರವೂ ಶಿಷ್ಯರ ಭಕ್ತಿ ಆ ವಂಶದ ಮೇಲೆ ಇರುವುದು. ಗುರುಪುತ್ರ ಯೋಗ್ಯನೊ, ಅಯೋಗ್ಯನೊ, ಯಾರಾದರೂ ಆಗಲಿ ಶಿಷ್ಯಪುತ್ರನಿಗೆ ಗುರು ಪುತ್ರನ ಮೇಲೆ ಶ್ರದ್ಧೆ ಇರಲಿ ಬಿಡಲಿ, ಅವನಿಂದಲೆ ಮಂತ್ರ ಪಡೆದು ಈಶ್ವರ ಲಾಭಕ್ಕೆ ಸಹಾಯವನ್ನು ಪಡೆಯಬೇಕೆಂಬ ಒಂದು ನಿಯಮವಿಲ್ಲ

ವಂಗದೇಶದಲ್ಲಿ ಸಾಧುಗಳ ಸಂಖ್ಯೆ ಅಲ್ಪವಾಗಿರುವುದರಿಂದ ಪಿತನ ಗುಣ ಪುತ್ರನಲ್ಲಿ ಉಪಗತವಾಗಿದೆ ಎಂಬ ನಂಬಿಕೆ ಇಟ್ಟುದರಿಂದ ಕುಲಗುರು ಆಚಾರ ಜಾರಿಗೆ ಬಂದಿತು ಎಂದು ಕಾಣುವುದು. ಶ್ರೀರಾಮಕೃಷ್ಣದೇವರ ಜನನಕ್ಕೆ

ಮುಂಚೆ ಭದ್ರವಂಶದಲ್ಲಿ ಜನಿಸಿದವರು ಸಂಸಾರ ತ್ಯಜಿಸಿ ಸನ್ಯಾಸಗ್ರಹಣ ಮಾಡುವುದು ಬಹಳ ಅಪರೂಪವಾಗಿತ್ತು. ಉತ್ತರ ಪಶ್ಚಿಮದಿಂದ ಸಾಧು ಸನ್ಯಾಸಿಗಳ ಪ್ರಭಾವಕ್ಕೆ ಮುಗ್ಧರಾಗಿ ಅವರ ಪಂಥವನ್ನು ಅವಲಂಬಿಸಿ ದೇಶ ವನ್ನು ಬಿಟ್ಟು ಹೋಗಿರುವರು ಬಹಳ ವಿರಳ. ಆದಕಾರಣ ಸಾಧುಸಂಪ್ರ ದಾಯ ವೃದ್ಧಿಯಾಗಲಿಲ್ಲ. ಪ್ರಚಲಿತವಾದ ತಂತ್ರಶಾಸ್ತ್ರದಲ್ಲಿ ಸ್ತ್ರೀಸಹಿತ ಉಪಾಸನೆ ಮಾಡಿದರೆ ಬೇಗ ಫಲಪ್ರದವಾಗುವುದೆಂಬ ಭಾವನೆ ಇದ್ದುದರಿಂದ ನಿಷ್ಠಾವಂತನಾದ ಉದಾರ ಮನಸ್ಸಿನ ಗೃಹಸ್ಥನನ್ನು ಗುರುವಾಗಿ ಸ್ವೀಕರಿಸು ವುದು ರೂಢಿಯಲ್ಲಿತ್ತು.

ವಂಗದೇಶದಲ್ಲಿ ಬಳಕೆಯಲ್ಲಿರುವ ಕುಲಗುರು ಆಚಾರದಲ್ಲಿ ಗುರುವೃತ್ತಿ ಯಿಂದ ದ್ರವ್ಯಾರ್ಜನೆ ಮಾಡುವ ಕೆಟ್ಟ ಅಭ್ಯಾಸ ಜಾರಿಗೆ ಬರುವುದಕ್ಕೆ ಮುಂಚೆ ಇದರಲ್ಲಿ ಎಷ್ಟೋ ಲೋಪದೋಷಗಳಿದ್ದರೂ ಸಮಾಜಕ್ಕೆ ಸ್ವಲ್ಪ ಕಲ್ಯಾಣವನ್ನು ಮಾಡುತ್ತಿತ್ತು. ಅಂತಹ ಗುರುವಂಶದಲ್ಲಿ ಸನಾತನಗಣ ಮುಂದೆ ಗುರುವಾಗಬಲ್ಲರೆಂಬ ಆಶೆಯಿಂದ ಸದಾಚಾರ ಮತ್ತು ವಿದ್ಯೆಯನ್ನು ರೂಢಿಸುತ್ತಿದ್ದರು. ಸಮಾಜದಲ್ಲಿ ಒಂದು ಶ್ರೇಣಿಯ ಜನಾಂಗ ನಿಶ್ಚಿಂತ ಮನ ಸ್ಸಿನಿಂದ ಧರ್ಮಚರ್ಚೆಯಲ್ಲಿ ನಿರತರಾಗಿದ್ದು, ಧರ್ಮಾದರ್ಶವನ್ನು ಉಜ್ವಲ ವಾಗಿಟ್ಟುದರಿಂದ ಲೋಕಕಲ್ಯಾಣಕ್ಕೆ ಸಾಧಕವಾಯಿತು. ಉಪನಿಷತ್ತಿನ ಸಮಯದಲ್ಲಿ ಋಷಿಗಳು ಗೃಹಸ್ಥರಾದರೂ ಪ್ರಾಪಂಚಿಕ ವಿಷಯಗಳಿಗೆ ಗಮನ ಕೊಡದೆ ಧರ್ಮಚರ್ಚೆಯಲ್ಲಿ ನಿರತರಾಗಿದ್ದುದರಿಂದ ಸಮಸ್ತ ದೇಶ ಮತ್ತು ಜನಾಂಗದ ಏಳ್ಗೆಗೆ ಕಾರಣರಾದರು ಎಂಬುದು ಸರ್ವಜನ ವಿದಿತ.

ಹಿಂದಿನಕಾಲದಲ್ಲಿ ವಂಗದೇಶದಲ್ಲಿ ಆಹಾರ ಸಮೃದ್ಧಿಯಾಗಿತ್ತು. ಮುಸ ಲ್ಮಾನರ ಕಾಲದಲ್ಲಿಯೂ ರೂಪಾಯಿಗೆ ಎಂಟು ಸೇರು ಅಕ್ಕಿ ಸಿಕ್ಕುತ್ತಿದ್ದುದು ಇತಿಹಾಸ ಪ್ರಸಿದ್ಧ. ಈಗ ಆಹಾರ ಅಷ್ಟೇ ಸಮೃದ್ಧಿಯಾಗಿದ್ದರೂ ರೈಲ್ವೆಯ ಮೂಲಕ ಭರತಖಂಡದ ಇತರ ದೇಶಗಳಿಗೂ, ಹಡಗಿನ ಮೂಲಕ ಇತರ ಕಡೆ ಗಳಿಗೂ ಆಹಾರ ರಫ್ತಾಗಿ ವಂಗದೇಶದಲ್ಲಿ ಆಹಾರಕ್ಕೆ ಅಭಾವವಾಯಿತು. ಇದರ ಮೇಲೆ; ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ, ವಿಧ್ಯಾಶಿಕ್ಷಣಕ್ಕೆ ವ್ಯಯ ಮಾಡುವ ವಿಪರೀತ ದ್ರವ್ಯ ಮುಂತಾದವುಗಳಿಂದ ಗುರುಶಿಷ್ಯರಿಬ್ಬರೂ ಜೀವ ನೋಪಾಯದಲ್ಲಿ ಉದ್ಯುಕ್ತರಾಗಿರುವರು. ಇವರಿಬ್ಬರು ಹೇಗೊ ಜೀವನೋ

ಪಾಯವನ್ನು ಸಂಪಾದಿಸಬೇಕಾಗಿದೆ. ಹೆಚ್ಚು ಪರಿಶ್ರಮವಿಲ್ಲದೆ, ನಿಶ್ಚಿಂತ ಮನಸ್ಸಿನಿಂದ ಜೀವನೋಪಾಯವನ್ನು ಗುರುಕುಲದವರು ನಡೆಸಿಕೊಂಡು ಬರುತ್ತಿದ್ದರು. ಆದಕಾರಣವೇ ಅವರು ಈಗ ವಿಪತ್ತಿನಲ್ಲಿ ಸಿಕ್ಕಿಬಿದ್ದಿರುವರು. ಮಿಥ್ಯಾ ಭಾಷಣ, ಹೊಗಳಿಕೆ ಮುಂತಾದವುಗಳಿಂದ ಶಿಷ್ಯರನ್ನು ಮೆಚ್ಚಿಸಿ ದ್ರವ್ಯಾರ್ಜನೆಗೆ ಕೈಹಾಕುವಂತಹ ನೀಚವೃತ್ತಿಯನ್ನು ಅವಲಂಬಿಸಿ, ಹತಶ್ರೀಯರಾಗಿ ಅವನತರಾಗಿರುವರು. ಉಪಯುಕ್ತ ಗುರುವಿನ ಅಭಾವದಿಂದ ಶಿಷ್ಯರ ಭಕ್ತಿಯೂ ಮಾಯವಾಗಿದೆ. ಈಗ ಕುಲಗುರುಗಳ ಅಭ್ಯಾಸವನ್ನು ನಿರ್ಮೂಲ ಮಾಡುವುದು ಅನಿವಾರ್ಯವಾಗಿದೆ. ಅವರನ್ನು ಹಾಗೆ ನಿರ್ಮೂಲ ಮಾಡಿದರೂ ದೇಶಕ್ಕೆ ಯಾವ ಅಕಲ್ಯಾಣವೂ ಆಗುವುದಿಲ್ಲ.

ನಾವು ಮತ್ತೊಂದನ್ನೂ ನೋಡಬಹುದು. ಅವತಾರ ಅಥವಾ ವಿಶೇಷ ಶಕ್ತಿ ಸಂಪನ್ನ ಧರ್ಮಾತ್ಮ ಮಹಾಪುರುಷ ಯಾವ ವಂಶವನ್ನು ಪವಿತ್ರ ಮಾಡುವನೋ, ಆ ವಂಶ ಕಾಲಕ್ರಮೇಣ ಲೋಪವಾಗುವುದು. ಇಲ್ಲವೇ ಆ ವಂಶದಿಂದ ಇಂತಹ ಮಹಾಪುರುಷರು ಮತ್ತೊಮ್ಮೆ ಉದಿಸುವುದನ್ನು ನಾವು ನೋಡುವುದಿಲ್ಲ. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಿದ್ದರು: “ ವಿಶೇಷ ಶಕ್ತಿಮಾನ್ ಪುರುಷ ಯಾವ ವಂಶದಲ್ಲಿ ಹುಟ್ಟಲಿ, ಅವನ ಹಿಂದೆ ಮತ್ತು ಮುಂದೆ ಹಲವು ತಲೆಮಾರುಗಳವರೆಗೆ ಇರುವ ಶಕ್ತಿಯನ್ನೆಲ್ಲಾ ಹೀರಿಕೊಂಡು ಅವನು ಪ್ರಕಾಶಿತನಾಗುವನು. ಆದ ಕಾರಣವೆ ಅವರ ಜನ್ಮಾಂತರ ಆ ವಂಶದಲ್ಲಿ ಉದಿಸುವವರು ಶ್ರೀಹೀನರಾದ ಅತಿ ಸಾಧಾರಣ ವ್ಯಕ್ತಿಗಳು ಮಾತ್ರ. ಕೆಲವು ವೇಳೆ ಆ ವಂಶವೇ ನಿರ್ನಾಮವಾಗುವುದು. ಆದಕಾರಣವೇ ಅವತಾರ ಅಥವಾ ಸಿದ್ಧಪುರುಷರು ಉದಿಸಿದ ವಂಶದ ಮೇಲೆ ಜನರು ಶ್ರದ್ಧಾ ಭಕ್ತಿಯನ್ನು ಇಟ್ಟುಕೊಂಡಿದ್ದರೂ, ಅಲ್ಲಿ ಧರ್ಮಶಕ್ತಿ ಪ್ರಕಾಶ ಸರ್ವಕಾಲದಲ್ಲಿಯೂ ಸ್ಥಿರವಾಗಿರುವುದಿಲ್ಲ. ಆದಕಾರಣವೇ ಶಿಷ್ಯಗಣಕ್ಕೆ ಗುರುಕುಲದ ಮೇಲೆ ಗೌರವ ಕ್ರಮೇಣ ತಗ್ಗುವುದು.

ಮಂತ್ರದಾತಾ ಗುರು ಒಬ್ಬನೇ ಆದರೂ, ಅವನಿಂದ ಕಲಿಯಬೇಕಾದುದನ್ನೆಲ್ಲಾ ಕಲಿತು, ತನ್ನ ಜೀವನದಲ್ಲಿ ಸಾಧನೆಮಾಡಿ, ಇತರ ಆಧ್ಯಾತ್ಮಿಕ ವಿಷಯಗಳನ್ನು ಕಲಿಯುವುದಕ್ಕಾಗಿ ಇತರ ಗುರುಗಳ ಬಳಿಗೆ ಹೋಗುವುದು ವೇದಾದಿಗಳಲ್ಲಿ ಕಂಡುಬರುವುದು. ಯಾರಿಂದ ಹೀಗೆ ಸಹಾಯಪಡುವನೊ ಅವರನ್ನು ಉಪಗುರು ಎನ್ನುವರು.

ಅಧ್ಯಾತ್ಮಿಕ ಜಗತ್ತಿನಲ್ಲಿ ಗುರೂಪಾಸನೆಯಿಲ್ಲದೆ ಅಪರ ವಿದ್ಯೆಗೆ ಸೇರಿದ ಇತರ ಗುರುಗಳನ್ನು ಗೌರವದಿಂದ ಕಾಣುವುದು ಭಾರತದಲ್ಲಿ ರೂಢಿಯಲ್ಲಿತ್ತು. ಆದರೆ ಆಧುನಿಕ ಕಾಲದಲ್ಲಿ ಈ ಗೌರವದ ಅಭಾವವನ್ನು ನೋಡುವೆವು. ಇದಕ್ಕೆ ಕಾರಣ ಇಬ್ಬರಲ್ಲಿಯೂ ಇರುವ ದೋಷವೆ ಇರಬಹುದು. ಗುರು ಶಿಷ್ಯನನ್ನು ತನ್ನ ಮಗನಂತೆ ವಿಶ್ವಾಸದಿಂದ ನೋಡುತ್ತಿಲ್ಲ. ಶಿಷ್ಯರೂ ಕೂಡ ಗುರುಗಳನ್ನು ತಂದೆಯಂತೆ ಗೌರವದಿಂದ ಕಾಣುತ್ತಿಲ್ಲ. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಿದ್ದರು : "ಶ್ರದ್ಧೆಯ ಅಭಾವದಿಂದಲೇ ಈ ಶಿಕ್ಷಾ ಜಗತ್ತಿನಲ್ಲಿ ಸರ್ವ ನಾಶವಾಗಿದೆ. ಶುದ್ಧೆಯ ಅಭಾವದಿಂದ ನಮ್ಮ ಬಾಲಕರಿಗೆ ಸರಿಯಾದ ಶಿಕ್ಷಾ ಲಾಭವಾಗುತ್ತಿಲ್ಲ" ಗುರುಶಿಷ್ಯರಲ್ಲಿ ಶ್ರದ್ಧೆ ವಿಶ್ವಾಸಗಳಿದ್ದರೆ ವಿದ್ಯೆ ಕೇವಲ ಹಣವನ್ನು ಆರ್ಜಿಸುವುದಕ್ಕೆ ಮಾತ್ರವಲ್ಲ : ಜ್ಞಾನ ಪಡೆಯುವುದಕ್ಕೆ ಎಂಬ ಭಾವವನ್ನು ಮನದಲ್ಲಿ ಇಟ್ಟುಕೊಂಡಿರುವುದರಿಂದಲೇ ಯುರೋಪಿನಲ್ಲಿ ಆಧುನಿಕ ಕಾಲದಲ್ಲಿ ಉನ್ನತಿ ಹೊಂದಿರುವುದು. ಶಿಕ್ಷಾ ಕಾಲದಲ್ಲಿ ಗುರುಸಹಿತ ವಾಸಮಾಡುತ್ತಾ ಅವನು ಮಾಡುವ ಕಾರ್ಯವನ್ನೆಲ್ಲ ನೋಡುತ್ತಾ ಇರುವಾಗ ಸ್ವಭಾವತಃ ಗುರುವಿನ ಮೇಲೆ ಶಿಷ್ಯನಿಗೆ ಭಕ್ತಿ ಉದಿಸುತ್ತಿತ್ತು. ಈಗ ಅದೆಲ್ಲಾ ಸಾಧ್ಯವಿಲ್ಲದೇ ಇರುವುದರಿಂದಲೇ ಶ್ರದ್ಧಾಹೀನತೆಗೆ ಕಾರಣವೆಂದು ತೋರುವುದು. ಪೂರ್ವಕಾಲದಲ್ಲಿ ಬ್ರಹ್ಮಚಾರಿಗಳಾದ ವಿದ್ಯಾರ್ಥಿಗಳು ಗುರುಕುಲವಾಸ ಮಾಡಿ ಎಷ್ಟೊಂದು ವಿದ್ಯೆಯನ್ನು ಗಳಿಸಿವರು ಎಂಬುದನ್ನು ಪುರಾಣ ಇತಿಹಾಸಗಳಲ್ಲಿ ನೋಡಿರುವೆವು.

ಮಾನವನಲ್ಲಿ ಗುರುರೂಪಿ ದೈವೀಶಕ್ತಿ ಆವಿರ್ಭೂತವಾಗಿ, ಮಾನವ ಜಾತಿಯ ಪರಮ ಕಲ್ಯಾಣ ಸಾಧನದಲ್ಲಿ ನಿರತವಾಗಿ, ಅನಾಗರಿಕ ಜನಾಂಗಕ್ಕೆ ನೀತಿ, ವಿದ್ಯಾ, ಧರ್ಮಾದಿಗಳನ್ನು ನೀಡಿ ದೇವರಸಮಾನರನ್ನಾಗಿ ಮಾಡಿದರು. ಈ ವಿಷಯ ಭಾರತೀಯರಿಗೆ ತಿಳಿದ ದಿನದಿಂದಲೂ ಗುರು ಮನುಷ್ಯನಲ್ಲಿ ನರ ಶರೀರದಲ್ಲಿ ದೈವೀಶಕ್ತಿಯ ವಿಕಾಸ. ಅಂದಿನಿಂದ "ಗುರುರ್ಬ್ರಹ್ಮಾ, ಗುರುರ್ವಿಷ್ಣುಃ, ಗುರುರ್ದೇವೋ ಮಹೇಶ್ವರಃ" ಎಂಬ ಮಂತ್ರ ಪ್ರಚಾರವಾಯಿತು.

ಯಸ್ಯದೇವೇ ಪರಾಭಕ್ತಿರ್ಯಥಾದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶನ್ತೇ ಮಹಾತ್ಮನಃ ॥ (ಶ್ವೇತಾಶ್ವತರ)

ಗುರುವನ್ನು ಮನುಷ್ಯನೆಂದು ಭಾವಿಸಿದರೆ ಎಂದಿಗೂ ಜ್ಞಾನಲಾಭವಾಗದು. ಹೇ ಭಾರತ, ಶ್ರೀಗುರುಮೂರ್ತಿಯಲ್ಲಿ ಶಕ್ತಿಪೂಜೆಯನ್ನು ಎಂದಿನವರೆಗೂ ನೀನು ಮರೆಯುವುದಿಲ್ಲವೋ ಅಲ್ಲಿಯವರೆಗೆ ಪೃಥ್ವಿಯಲ್ಲಿ ಯಾರು ನಿನ್ನ ಜನಾಂಗ ಮತ್ತು ಶಕ್ತಿಯನ್ನು ನಾಶಮಾಡಬಲ್ಲರು? ಗುರುಬಲದಿಂದ ಬಲಯುತನಾಗು; ಗುರುರೂಪಿ ಧೃವತಾರನಿಬದ್ಧ ದೃಷ್ಟಿಯುತನಾಗಿ ಗಂತವ್ಯ ಪಥದಲ್ಲಿ ಮುಂದುವರಿ.

ಹೇ ನಿತ್ಯಮುಕ್ತ ಆತ್ಮಾರಾಮಗುರು, ನೀನು ನನ್ನ ಜ್ಞಾನಚಕ್ಷುಸ್ಸನ್ನು ಪೂರ್ಣವಿಕಸಿತಗೊಳಿಸು. ನಿನಗೆ ಬಾರಿ ಬಾರಿ ಪ್ರಣಾಮ ಮಾಡುವೆನು. ನಿನ್ನ ಕೃಪೆಯಿಂದ ಪ್ರತಿಯೊಬ್ಬ ಭಾರತೀಯನೂ ನವೀನ ಆಧ್ಯಾತ್ಮಿಕ ಜೀವನದಲ್ಲಿ ದಿವ್ಯಭಾವದಲ್ಲಿ ಅಮಿತ ತೇಜಸ್ಸನ್ನು ಪಡೆದು ಪ್ರಕಾಶಿಸಲಿ. ಶ್ರದ್ಧಾ ಸಹಕಾರದಿಂದ ನಿನ್ನ ಪೂಜೆಯನ್ನು ಮಾಡಿ ದೇಶಕಲ್ಯಾಣಕ್ಕಾಗಿ ಸ್ವಾರ್ಥವನ್ನು ಬಲಿದಾನಮಾಡಲು ಸಮರ್ಥರಾಗಲಿ. ಹೇ ಶ್ಯಾಮ, ಗುರುರೂಪಿ! ನಿನ್ನ ಪದಾಶ್ರಿತ ಭಾರತೀಯರಿಗೆ ನವಯುಗದಲ್ಲಿ ನವಶಕ್ತಿ ಸಂಚರಿಸುವಂತೆ ಮಾಡು. ನಿನ್ನ ಶ್ರೀ ಮೂರ್ತಿ ಜೀವಂತ ಪೂಜೆಯ ಪ್ರಚಾರಮಾಡಿ ಚಿರಕೃತಾರ್ಥರಾಗಲಿ. ಇತರರನ್ನು ಅವರು ಕೃತಾರ್ಥಿಗಳಾಗಿ ಮಾಡಲಿ.

೪. ಶಕ್ತಿಪ್ರತೀಕ-ದೇವಮಾನವ ಇತ್ಯಾದಿ

ಸರ್ವಕಾಲದಲ್ಲಿಯೂ ಯಾವುದಾದರೂ ವಸ್ತು ಅಥವಾ ವ್ಯಕ್ತಿ ಸಾಧಕ ನನ್ನು ಗುರಿಯೆಡೆಗೆ ಒಯ್ಯಲು ಸಹಾಯ ಮಾಡಿದೆ, ಅಥವಾ ಧರ್ಮಲಾಭಕ್ಕೆ, ಅಂದರೆ ನಿತ್ಯಶುದ್ಧ ಬುದ್ಧ ಮುಕ್ತಸ್ವಭಾವ ಮಾನವಾತ್ಮ ಈಶ್ವರಲಾಭಕ್ಕೆ ಸಹಾಯಕವಾಗಿ, ಅವನ ವಿಷಯವಾಗಿ, ಪವಿತ್ರ ಭಾವನೆಗಳನ್ನು ಉದ್ದೀಪನೆ ಗೊಳಿಸಿದೆ. ಭಾರತ ಅವನನ್ನು ಒಂದು ಪ್ರತೀಕ ಮಾಡಿಕೊಂಡು ಉಚ್ಚತರ ಸತ್ಯ ಸಾಕ್ಷಾತ್ಕಾರಕ್ಕೆ ಪಯಣ ಬೆಳೆಸಿದೆ. ಸರ್ವದೇಶದಲ್ಲಿಯೂ ಸತ್ಯಲಾಭಕ್ಕೆ ಇದೇ ಕ್ರಮ. ಪೃಥಿವಿಯಲ್ಲಿ ಇತರ ಜನಾಂಗಗಳು ನಿಮ್ನ ಸತ್ಯದಿಂದ ಉಚ್ಚ ತರ ಸತ್ಯಕ್ಕೆ ಹೋದಾಗ, ಪ್ರಥಮವನ್ನು (ನಿಮ್ನ ಸತ್ಯವನ್ನು) ಆಚೆಗೆ ಎಸೆ ದಿರುವರು. ಅದರೊಂದಿಗೆ ಸ್ವಲ್ಪವೂ ಸಂಪರ್ಕ ಇಟ್ಟುಕೊಂಡಿಲ್ಲ ಶ್ರದ್ಧಾ ಸಂಪನ್ನ ಭಾರತ ಹಾಗೆ ಮಾಡದೆ ಬೇರೆ ವಿಧದಲ್ಲಿ ಅದನ್ನು ಬಗೆಹರಿಸಿದೆ: ಕೃತಜ್ಞತಾಭಾವದಲ್ಲಿ ನಿಮ್ನಸತ್ಯವನ್ನು ಅದರ ಸ್ಥಾನದಲ್ಲಿಟ್ಟು, ಯಾರು ನಿಜವಾದ ಆದರ್ಶವನ್ನು ಸ್ವೀಕರಿಸಲು ಅಸಮರ್ಥರಾಗಿರುವರೊ ಅವರಿಗಾಗಿ ಇದನ್ನು ಕಾಪಾಡಿ ಇಟ್ಟಿದೆ. ಚಿರಕಾಲ ಇವನ್ನು ಗೌರವದೃಷ್ಟಿಯಿಂದ ಭಾರತ ಉಚ್ಚ ಉಚ್ಚತರ ಆದರ್ಶವನ್ನು ಪಡೆದು ಸ್ವಯಂಕೃತಾರ್ಥವಾಗಿ ಹೀಗೆ ಆಲೋಚಿಸಿದೆ: "ಏಣಿಗಳು, ಹಗ್ಗ ಇವುಗಳ ಸಹಾಯದಿಂದ ಇಂದು ನಾನು ಸತ್ಯಸೌಧದ ಮೇಲಕ್ಕೆ ಏರಿರುವೆನು. ನಾಳೆ ಇತರರು ಹೀಗೆ ಮೇಲೇರ ಬೇಕೆಂದು ಬಂದರೆ ಅವರಿಗೂ ಇವುಗಳ ಸಹಾಯವಿಲ್ಲದೆ ಬೇರೆ ಗತಿಯೇ ಇಲ್ಲ. ಆದಕಾರಣವೇ ಅವರ ಸಹಾಯಕ್ಕಾಗಿ ಇವುಗಳನ್ನು ನಾಶಮಾಡದೆ ಇಟ್ಟಿರು ವುದೇ ಒಳ್ಳೆಯದು. ಭಾರತದ ಈ ಭಾವನೆಯನ್ನು ಭಗವಂತನು ಶ್ರೀಕೃಷ್ಣ ನಂತೆ ಅವತಾರ ಮಾಡಿದಾಗ ಹೀಗೆ ಹೇಳಿರುವನು:

ನ ಬುದ್ಧಿ ಭೇದಂ ಜನಯೇದ ಜ್ಞಾನಂ ಕರ್ಮಸಂಗಿನಾಂ ।
ಯೋಜಯೇತ್ ಸರ್ವ ಕರ್ಮಾಣಿ ವಿದ್ವಾನ್ ಯುಕ್ತಃ ಸಮಾಚರನ್ ॥—ಗೀತಾ

ಜ್ಞಾನಿ ಸಾಧನಫಲದಿಂದ ಉಚ್ಚತಮಸತ್ಯವನ್ನು ಪಡೆದಿರುವನೆಂದು ಭಾವಿಸಿ ದೇಶಕಾಲ ಪಾತ್ರಭೇದಮಾಡದೆ ಜನಸಾಧಾರಣರಿಗೆ ಈ ಸತ್ಯವನ್ನು ವಿವರಿಸಕೂಡದು. ಅಜ್ಞರು ದೃಢಭಕ್ತಿವಿಶ್ವಾಸದಿಂದ ಯಾವುದನ್ನು ಉಪಾಸನೆ

ಮಾಡುತ್ತಿರುವರೋ ಅದನ್ನು ತಾನೂ ಅಭ್ಯಾಸಮಾಡಿ ಸ್ವೀಕರಿಸಿ ಅವರ ಶ್ರದ್ಧಾಭಕ್ತಿಯನ್ನು ಮತ್ತೂ ದೃಢಮಾಡಬೇಕು. ಧರ್ಮಗತ ಉಚ್ಚತಮ ಸತ್ಯದ ಧಾರಣ, ವ್ಯಕ್ತಿಯ ಸಾಧನೆ ಪರಿಪಕ್ವವಾದಾಗ ತಾನೇ ತಾನಾಗಿ ಉದಿಸುವುದು. ಇತರರ ಉಪದೇಶದಿಂದ ಅದು ಎಂದಿಗೂ ಲಭಿಸುವುದಿಲ್ಲ.

ಈ ಭಾವನೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಶ್ರೀರಾಮಕೃಷ್ಣರು ನಮಗೆ ವರ್ತಮಾನಯುಗದಲ್ಲಿ ಹೀಗೆ ಬೋಧಿಸಿರುವರು: "ಯಾರ ಭಾವಕ್ಕೂ ನಷ್ಟ ತರಬೇಡ. ಭಾವವನ್ನು ನಷ್ಟಗೊಳಿಸುವುದು ಮಹಾದೋಷ. ಭಾವವಿದ್ದಂತೆ ಭಕ್ತಿ. ಭಾವದ ಆಶ್ರಯದಿಂದ ಮಾನವ ಸತ್ಯವನ್ನು ಪಡೆಯುವನು. ಭಗವಂತ ಸ್ವಯಂಭಾವಮಯ." "ಬಣ್ಣದ ಹಣ್ಣನ್ನು ನೋಡಿದಾಗ ನಿಜವಾದ ಹಣ್ಣು ಜ್ಞಾಪಕಕ್ಕೆ ಬರುವಂತೆ ಮೃಣ್ಮಯಿ, ಶಿಲಾಮಯಿ ಮೂರ್ತಿಯನ್ನು ನೋಡಿದಾಗ ಚಿನ್ಮಯೀ ಮೂರ್ತಿಭಾವನೆ ಉದ್ದೀಪನೆಯಾಗುವುದು."

ಶಕ್ತಿ ಪೂಜೆಯ ಆರಂಭದಲ್ಲಿಯೇ ಗುರೂಪಾಸನೆಯ ವಿಷಯವನ್ನು ಉಲ್ಲೇಖಿಸಿರುವೆವು. ಏಕೆಂದರೆ ಪ್ರತೀಕದಲ್ಲೆಲ್ಲಾ ಗುರುಪ್ರತೀಕ ಸರ್ವಶ್ರೇಷ್ಠವೆಂದು ಜನಸಾಧಾರಣರಲ್ಲಿ ಪರಿಚಿತವಾಗಿದೆ. ಶ್ರೀಗುರು ಇಷ್ಟದೇವತಾ ಮಂದಿರಕ್ಕೆ ದ್ವಾರ ಸ್ವರೂಪರು. ಬಾಗಿಲು ಹಾಕಿರುವಾಗ ಒಳಗೆ ಹೇಗೆ ನಾವು ಪ್ರವೇಶ ಮಾಡಲಾರೆವೋ ಹಾಗೆಯೇ ಗುರುಶಕ್ತಿ ಪ್ರಸನ್ನವಾಗದೆ ಇದ್ದರೆ ಇಷ್ಟದೇವತಾ ದರ್ಶನ ಅಲಭ್ಯ. ಮಾಯಾಭ್ರಾಂತರಾದ ಮಾನವರ ಚಕ್ಷುಸ್ಸನ್ನು ತೆರೆಯುವುದಕ್ಕಾಗಿ ಕೃಪೆಯಿಂದ ಶ್ರೀಭಗವಾನ್ ಗುರುವಿನಂತೆ ಉದಿಸುವನು. ಸರ್ವದೇಶ, ಸರ್ವಕಾಲದಲ್ಲಿ ಮಾನವ ಯತ್ ಕಿಂಚಿತ್ ಸತ್ಯ ಮತ್ತು ಲಾಭವನ್ನು ಪಡೆದಿದ್ದರೆ, ಪಡೆಯುವಹಾಗಿದ್ದರೆ, ಅವೆಲ್ಲ ಗುರುಶಕ್ತಿ ಪ್ರಭಾವದಿಂದ.

ಗುರುಶಕ್ತಿ ಹಲವು ಪ್ರತೀಕಗಳ ಮೂಲಕ ಬಾಹ್ಯಾಂತರದಲ್ಲಿ ಪ್ರಕಾಶಿಸುತ್ತಿರುವುದು. ಅದು ದೇಶಕಾಲಾಪರಿಚ್ಛಿನ್ನ ಜಗತ್ತಿನಲ್ಲಿ ನಿಮ್ನ ಸತ್ಯದಿಂದ ಉಚ್ಚತರ ಉಚ್ಚತಮ ಸತ್ಯದವರೆಗೆ ಮೇಲಮೋಕ್ಕೆ ನಿಶ್ಚಿತವಾಗಿ ಹೋಗುತ್ತಿದೆ. ಆ ಗುರುಶಕ್ತಿ ಪೂರ್ಣ ಸ್ವರೂಪದಲ್ಲಿ ಸಾತ್ತ್ವಿಕಗುಣದ ಮೂಲಕ ಮಾನವ ಶರೀರ ಮತ್ತು ಮಾನವ ಮನಸ್ಸಿನ ಅವಲಂಬನೆಯ ಮೂಲಕ ಯುಗಯುಗದಲ್ಲಿ ಅವತೀರ್ಣನಾಗುವನು. ತನ್ನ ಜೀವನದಲ್ಲಿ ನಿತ್ಯನೂತನ ಆದರ್ಶಗಳನು

ಪ್ರತಿಬಿಂಬಿಸುತ್ತ, ಮಾನವನಿಗೆ ಅವುಗಳ ಮೂಲಕ ಶಿಕ್ಷಣ ಕೊಟ್ಟು, ದೇಶ ಕಾಲಾತೀತ ಕೇವಲಾನಂದರೂಪ ಸಮಾಧಿಯಲ್ಲಿ ತುರೀಯಾನಂದಾನುಭವ ವನ್ನು ಕೊಡುವನು. ಆದಕಾರಣವೇ ಉಪನಿಷತ್ತಿನ ಆಪ್ತಕಾಮರಾದ ಋಷಿಗಳು ಹೀಗೆ ಹೇಳುವರು :

ಯಸ್ಯದೇವೇ ಪರಾಭಕ್ತಿರ್ಯಥಾದೇವೆ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶನ್ತೇ ಮಹಾತ್ಮನಃ ॥ (ಶ್ವೇತಾಶ್ವತರ)

"ಇಷ್ಟದೇವತೆಯಂತೆ ಗುರುವಿನ ಮೇಲೆ ಯಾರಿಗೆ ಪರಮಶ್ರದ್ಧೆ ಭಕ್ತಿ ಗಳು ಇವೆಯೊ ಅವರಲ್ಲಿ ಪರಮಸತ್ಯ ತನ್ನ ಸ್ವರೂಪವನ್ನು ಪ್ರಕಾಶಿಸುವುದು." ಆದಕ್ಕೆ "ಶಿವೇ ರುಷ್ಟೇಗುರುಸ್ತ್ರಾತಾ ಗುರೌರುಷ್ಟೇ ನ ಕಶ್ಚನ" ದೇವತೆಗಳು ಅಸಂತುಷ್ಟರಾದರೆ ಗುರುಶಕ್ತಿ ಸಹಾಯದಿಂದ ಮಾನವ ಅವನ್ನು ಪುನಃ ಪಡೆಯಬಹುದು. ಆದರೆ ಯಾವುದಾದರೂ ಕಾರಣದಿಂದ ದಯಾಘನಮೂರ್ತಿ ಶ್ರೀಗುರುಶಕ್ತಿ ಅಪ್ರಸನ್ನವಾದರೆ ಮಾನವನ ಜ್ಞಾನಲಾಭ ಬಹುಕಾಲದವರೆಗ ಆಗಲಾರದು. ಅವನ್ನು ತಮಸ್ಸಿನಲ್ಲಿ ಬೀಳುವನು. ಅದರಿಂದ ಪಾರಾಗಲು ಒಂದೇ ಜೀವನದಲ್ಲಿ ಸಾಧ್ಯವಿಲ್ಲ ಆದಕಾರಣವೆ. ಯುಗಾವತಾರ ಶ್ರೀರಾಮ ಕೃಷ್ಣ ದೇವರು ಆಂಗ್ಲಭಾಷಾ ವಿದ್ಯಾವಂತರಾದ ಬಾಲ ಶಿಷ್ಯಮಂಡಲಿಗೆ ತಮ್ಮ ದೇಹವನ್ನು ತೋರುತ್ತ ಹೀಗೆ ಹೇಳುವರು: "ನೋಡಿ, ಇದೊಂದು ಹೊರಗಡೆ ಕವಚ ಮಾತ್ರ. ಇವರ ಮೂಲಕ ಶುದ್ಧ ಬೋಧಾನಂದಮಯಿ ತಾಯಿ ಲೋಕಕ್ಕೆ ಶಿಕ್ಷಣ ಕೊಡುತ್ತಿರುವಳು. ಆದಕಾರಣವೆ ಯಾರು ಇದನ್ನು ಸ್ಪರ್ಶ ಮಾಡುವರೊ, ಇದಕ್ಕೆ ಸೇವೆಮಾಡುವರೊ, ಅವರ ಧರ್ಮ ಭಾವನೆ ಉದ್ದೀಪನೆಯಾಗಿ ಈಶ್ವರ ಲಾಭವಾಗುವುದು. ಶ್ರದ್ಧಾಭಕ್ತಿಯಿಂದ ಇದಕ್ಕೆ ಸೇವೆ ಮಾಡಿ, ಶ್ರದ್ಧೆ ಇಲ್ಲದೇ ಇದ್ದರೆ ನಾನು ಅದನ್ನು ಮೆಚ್ಚು ವುದಿಲ್ಲ. ಆದರೆ ಯಾರು ಈ ದೇಹವನ್ನು ಉಪಯೋಗಿಸುತ್ತಿರುವನೊ ಅವನು ಅಸಂತುಷ್ಟನಾಗಿ ರೇಗಿಬಿದ್ದರೆ ನಿನಗೇ ಕೇಡು." ಒಂದು ಸಲಿ ಒಬ್ಬ ದುರಂತ ಶಿಷ್ಯ ತನ್ನ ಹೀನ ಬಾಳನ್ನು ಆಲೋಚಿಸಿ ವ್ಯಥೆಯಿಂದ ತಪ್ತನಾಗಿ ಮುಸಿಸಿ ಕೊಂಡು ಶ್ರೀರಾಮಕೃಷ್ಣರನ್ನು ತನ್ನ ಮನಸ್ಸಿಗೆ ಬಂದಂತೆ ನಿಂದಿಸಿದನು. ಆಗ ಅಪಾರ ಕರುಣಾನಿಧಿ ಶ್ರೀರಾಮಕೃಷ್ಣರು ವಿಶೇಷ ಚಿಂತಾನ್ವಿತರಾಗಿ ವ್ಯಾಕುಲದಿಂದ ಹೀಗೆ ಹೇಳಿದರು : "ಅವನು ನನಗೆ ಏನು ಬೇಕಾದರೂ

ಹೇಳಲಿ [ತಮ್ಮ ದೇಹಕ್ಕೆ]. ಆದರೆ ಯಾರು ಇಲ್ಲಿ ಇರುವರೊ ಅವರ ವಿಚಾರ ವಾಗಿ ಏನೂ ಹೇಳಲಿಲ್ಲವಲ್ಲ. ನನ್ನ ಚಿದಾನಂದಮಯಿಯ ವಿಷಯವಾಗಿ ಅವನು ಏನನ್ನೂ ಹೇಳಲಿಲ್ಲವಲ್ಲ.''

ಹೇ ಭಾರತ ಸಾವಧಾನ. ಗುರುಭಕ್ತಿಯಿಂದ ಬಲಯುತರು ನಾವು. ವಿದೇಶೀ ಭಾವಗಳಿಗೆ ಆಕರ್ಷಿತರಾಗಿ ವಿದೇಶೀ ಅನುಕರಣೆಯಲ್ಲಿ ಗುರುಪೂಜೆ ಯನ್ನು ನಿರ್ಲಕ್ಷಿಸಬೇಡಿ. ಇಂದಿಗೆ ಎಂಟುನೂರು ವರುಷಗಳಾದವು. ಹಲವು ಬಗೆಯ ವಿದೇಶಿಗಳು ಕೆಲವು ವೇಳೆ ನಿಮ್ಮನ್ನು ಹೊಗಳಿ, ಕೆಲವು ವೇಳೆ ಅಂಜಿಕೆ ತೋರಿ ಶಕ್ತಿಪೂಜೆಯನ್ನು ಮಾಡದಂತೆ ಪ್ರೇರೇಪಿಸುವರು. ಪಾಶವೀ ಶಕ್ತಿ ಯಿಂದ ಸನ್ನದ್ಧರಾಗಿ ದುಃಖದಾರಿದ್ರ್ಯದಿಂದ ಪೀಡಿತರಾದ ಜನರೆದುರಿಗೆ ಹಲವು ಪ್ರಲೋಭನೆಗಳನ್ನು ಬೀರಿದರು. ಆದರೆ ಗುರುಶಕ್ತಿ ಕೊನೆಗೆ ಗೆಲ್ಲುವು ದೆಂದು ಆ ಪ್ರಲೋಭನೆಗಳನ್ನು ನಿಕೃಷ್ಟ ದೃಷ್ಟಿಯಿಂದ ನೋಡಿದರು. ಆದ ಕಾರಣ ಬ್ಯಾಬಿಲೋನ್, ಈಜಿಪ್ಟ್, ಗ್ರೀಸ್, ತುರ್ಕಾದಿ ಜಾತಿಸಮೂಹ ದುರ್ಜಯಕಾಲಸ್ರೋತದಲ್ಲಿ ತೃಣದೋಪಾದಿ ಕೊಚ್ಚಿಕೊಂಡು ಹೋಗಿರು ವರು. ಆದರೆ ಕೌಪೀನ ಮಾತ್ರ ಧರಿಸಿದ್ದರೂ ತಿತಿಕ್ಷವೇ ಆಸ್ತಿ, ಅನಿತ್ಯದ ಅಂತರದಲ್ಲಿ ನಿತ್ಯ ದರ್ಶನಾಭಿಲಾಷಿ, ಗುರುಪಾದ ನಿಬದ್ಧದೃಷ್ಟಿ ಮತ್ತು ತದನ್ಯ ಶರಣರಾದ ನಿಮ್ಮ ಸಂತಾನ ಕುಲ ಹಲವು ಬಾಧೆಗಳಿಗೆ ಒಳಗಾದರೂ ಅವ ರಿನ್ನೂ ಇರುವರು. ನಿನ್ನ ಪುಣ್ಯ ಕ್ಷೇತ್ರದಲ್ಲಿ ಈಗಲೂ ಸರ್ವದೇವ ದೇವೀ ಸ್ವರೂಪ ಗುರುಶಕ್ತಿ ಮಾನುಷೀತನುವನ್ನು ಆಶ್ರಯಿಸಿ ನಿಜಮಹಿಮೆಯನ್ನು ಪ್ರಕಾಶ ಮಾಡಿ "ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ" ನೆರವೇರಿಸಿರುವೆ. ನಿನ್ನ ಮಾನವಕೋಟಿಯ ಪ್ರತಿನಿಧಿಯಂತಿರುವ ನರಾವ ತಾರಿ ಅರ್ಜುನ, ಕುರುಕ್ಷೇತ್ರ ಸಮರದ ಪ್ರಥಮ ಅಂಕದಲ್ಲಿ, ಶ್ರೀಗುರುಪಾದ ಪದ್ಮಗಳಲ್ಲಿ ಶರಣಾಗಿ ಕಾತರಕಂಠದಲ್ಲಿ ಹೀಗೆ ಹೇಳಿರುವನು :

> **ಕಾರ್ಪಣ್ಯ ದೋಷೋಪಹತಸ್ವಭಾವಃ**
> **ಪೃಚ್ಛಾಮಿ ತ್ವಾಂ ಧರ್ಮಸಂಮೂಢಚೇತಾಃ ।**
> **ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ**
> **ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಂ ॥** (ಗೀತಾ)

"ಹೇ ಪ್ರಭು, ಭಯಮಮತಾದಿ ದೌರ್ಬಲ್ಯಗಳಿಂದ ಆವೃತನಾಗಿ ನಾನು ಏನು ಮಾಡಬೇಕೆಂಬುದನ್ನು ಅರಿಯೆ. ನನ್ನ ಅಹಂಕಾರ ಅಭಿಮಾನ ದೂರವಾಗಿದೆ. ನಾನೀಗ ದಯೆಗೆ ಪಾತ್ರ. ಈ ಸಮಯದಲ್ಲಿ ನನ್ನ ಕರ್ತವ್ಯ ವೇನು, ಏನುಮಾಡಿದರೆ ನನಗೆ ಮತ್ತು ಇತರರಿಗೆ ಮೇಲು, ಯಾವುದನ್ನು ಮಾಡಿದರೆ ಅಧರ್ಮವಾಗುವುದಿಲ್ಲವೋ ಅದನ್ನು ಹೇಳು, ನಾನು ನಿನ್ನಲ್ಲಿ ಶರಣಾಗತನಾದ ಶಿಷ್ಯ, ನನಗೆ ದಾರಿ ತೋರು." ಇದನ್ನು ನಿನ್ನ ಎಲ್ಲಾ ಮಕ್ಕಳಿಗಾಗಿ ಸಾರಲ್ಪಟ್ಟಿದೆ. ಈ ಹೃದಯದ ಪ್ರಾರ್ಥನೆ ಶ್ರೀ ಗುರುಚರಣದಲ್ಲಿ ಸಕಲ ಕಾಲದಲ್ಲಿಯೂ ಸಕಲರಿಗೂ ಮಾಡಿದುದು. ನಿನ್ನ "ಅಹಂ ತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ" ಈ ಅಭಯವಾಣಿ ನಿನ್ನ ಮಕ್ಕಳನ್ನೆಲ್ಲಾ ದೈವಬಲದಲ್ಲಿ ಬಲಯುತರನ್ನಾಗಿ ಮಾಡಿದೆ. ಧೀರನಾಗು, ನಿನ್ನ ಮೂಲಕ ಶ್ರೀಗುರು ತನ್ನ ಲೀಲೆಯನ್ನು ಪ್ರಕಟಿಸುವನು. ಕಾಣುವುದಿಲ್ಲವೆ, ಅಂತರ್ಜಗತ್ತಿನಲ್ಲಿ, ಧಾರ್ಮಿಕ ಜಗತ್ತಿನಲ್ಲಿ, ನಿನ್ನ ಮಕ್ಕಳು ಇನ್ನೂ ಸಾರ್ವಭೌಮರು. ಇತಿಹಾಸ ದೃಷ್ಟಿಯಿಂದ ನೋಡಿ, ಹೊರಗಿನಿಂದ ಬಂದವರು ನಿನ್ನ ಮಕ್ಕಳಿಗೆ ಮಾಂಸ ಪಿಂಡಮಯ ಕ್ಷಣಭಂಗುರ ಶರೀರಕ್ಕೆ ಕೆಲವು ದಿನ ಹಲವು ಯಾತನೆ ಕೊಟ್ಟಿರುವರು. ಆದರೆ ಅವರ ಆತ್ಮನನ್ನು ಯಾರು ಬಂಧಿಸಿದರು? ಅವನ ಅಪ್ರತಿಹತಗತಿಯನ್ನು ಯಾರು ಯಾವ ಕಾಲದಲ್ಲಿ ನಿಗ್ರಹಿಸಿದರು? ಸತ್ಯಕ್ಕೆ ನಿಲ್ಲು, ನ್ಯಾಯಕ್ಕೆ ನಿಲ್ಲು, ಧರ್ಮದಲ್ಲಿ ಸದಾ ಪ್ರತಿಷ್ಠಿತನಾಗು. ಭಾವ ಜಗತ್ತು ಸ್ಥೂಲ ಜಗತ್ತನ್ನು ತನ್ನ ಇಚ್ಛಾಮಾತ್ರ ಸೃಷ್ಟಿಸ್ಥಿತಿ ಪ್ರಳಯ ಮಾಡುತ್ತಿದೆ. ಯಾವುದೂ ಚಿರಸ್ಥಾಯಿಯಲ್ಲ. ಎಲ್ಲಾ ಪರಿವರ್ತನಮಯ; ಅಹೇತುಕ ಕೃಪಾಸಿಂಧು ಗುರುಪೂಜೆ ಪ್ರಚಲಿತವಾಗುವುದಕ್ಕೆ ಮುಂಚೆ ಭಾರತದಲ್ಲಿ ಹಲವು ಪ್ರತೀಕಗಳು ಇದ್ದುವು. ಈಗ ಅವುಗಳನ್ನೆಲ್ಲಾ ಆಲೋಚಿಸದೆ ಶಕ್ತಿಪೂಜೆಗೆ ಸಹಾಯಕವಾದ ಇತರ ಪ್ರತೀಕಗಳನ್ನು ತೆಗೆದುಕೊಳ್ಳುವುದಿಲ್ಲ.

ಶ್ರದ್ಧವಾತಾಹತ, ಪ್ರೇಮವಿಕಂಪಭಂಗಿತ, ವಿಜ್ಞಾನ ಗುಹಾಶಾಯಿನೀ, ಪ್ರಣವನಾದಿನಿ, ಚಿರಪಾವನಕರಿ, ಭಾವಮಯೀ ಧರ್ಮಗಂಗಾ ಉತ್ಪತ್ತಿಸ್ಥಾನವನ್ನು ಕಂಡುಹಿಡಿಯಲು ಯತ್ನಿಸಿದ ಪಾಶ್ಚಾತ್ಯರುಗಳ ಎಲ್ಲರ ಹೃದಯದಲ್ಲಿರುವ ನಿರ್ಭೀತಿ ಶೈಲದ ಶಿಖರದ ಮೇಲೆ ನಿಂತಿರುವರು. ಮತ್ತೊಂದು ವಿಷಯವನ್ನೂ ಹೇಳುವರು. ಆದಿಯಲ್ಲಿ ಮಾನವ ವಿಚಿತ್ರ ಶಕ್ತಿಶಾಲಿ ಸಮಷ್ಟಿ ಭೂತದಲ್ಲಿ ವಿಶ್ವ

ವಿರಾಟದರ್ಶನದಿಂದ ಅವಾಕ್ಕಾಗಿ ಭಿನ್ನ ಭಿನ್ನ ಶಕ್ತಿಗಳ ಹಿಂದೆಲ್ಲ ಭಿನ್ನ ಭಿನ್ನ ದೇವತೆಗಳನ್ನು ಕಲ್ಪಿಸಿಕೊಂಡು ಹೃದಯದ ಪೂಜೆಯನ್ನು ಅರ್ಪಿಸಿದರು. ಆ ವಿಸ್ಮಯ ಪರ್ವತದ ಮೂಲವೆ ಸನಾತನ ಧರ್ಮಭಾಗೀರಥಿಯ ಆದಿ. ಇದೇ ಪ್ರತೀಕ ಉಪಾಸನೆಯ ಮೂಲ. ಭಾರತೀಯ ವೇದಗಾನ ಈ ರೂಪದಲ್ಲಿ ಪ್ರಥಮದಲ್ಲಿ ಉದಿಸಿ, ಜಲಧಿಗಂಭೀರವಾಮಧ್ವನಿಯನ್ನು ಉಚ್ಚರಿಸಿ, ಪೂತ ಗಂಧ ವಿಶ್ವೇದೇವ ಬಲಿಧೂಮ ಸಂಧ್ಯಾಗಗನವನ್ನೆಲ್ಲಾ ತುಂಬಿತ್ತು.

ನನ್ನ ಅಭಿಪ್ರಾಯ ಬೇರೆ; ಚಿತ್ ಜಡ ಸಮ್ಮಿಲಿನೀ, ವಿಪರೀತಗುಣ ಧಾರಿಣೀ ಬಾಹ್ಯ ಅಂತರ ಪ್ರತಿಘಾತಿನೀ. ಉಭಯಮುಖಿ ಮಾನ ಪ್ರಕೃತಿ, ಸರ್ವ ಕಾಲದಲ್ಲಿಯೂ ಭೀಷಣ ಜಟಿಲ ರಹಸ್ಯ. ಸಹಸ್ರ ಸಹಸ್ರ ವರ್ಷಗಳ ಘಾತ ಪ್ರತಿಘಾತಗಳನ್ನು ಹಲವುವೇಳೆ ಪರೀಕ್ಷಿಸಿ ಅದರಲ್ಲಿ ನಿತ್ಯಜೀವೇಶ್ವರ ಸಂಬಂಧ, ಪರಲೋಕಾಸ್ತಿತ್ವ, ಆತ್ಮದ ಚಿನ್ಮಯತ್ವ ಮತ್ತು ಅಮರತ್ವ, ಸೃಷ್ಟಿ ಪ್ರವಾಹದ ಅನಾದಿತ್ವ, ಮತ್ತು ದೇವದೇವಿಯ ಇರವಿನಲ್ಲಿ ನಂಬಿಕೆ ಇವುಗಳೆಲ್ಲ ಏಕತ್ರಿಭೂತವಾಗಿ ವರ್ತಮಾನಕಾಲದ ಧರ್ಮ ವಿಶ್ವಾಸ ಪ್ರಕಾಶಿತವಾಗಿದೆ. ಜಟಿಲ ಮಾನವ ಪ್ರಕೃತಿಯಲ್ಲಿ ಜಟಿಲವಾದ ಧಾರ್ಮಿಕ ವಿಶ್ವಾಸ ಉದಿಸಿತು. ಅದನ್ನು ಸಾಧಿಸಬೇಕಾದರೂ ಜಟಿಲವೆ. ತುಂಗ ಶೃಂಗ ಗಿರಿರಾಜಿ, ಸರ್ವ ಗ್ರಾಸಕರ ಜಲಧಿ, ವಿಕಟೋಲ್ಲಾಸ ಮಿಂಚು, ನಿಶಿ ದಿವಾಕರ ಸೂರ್ಯ, ರಾಗರಂಜಿತ ಉಷಾ, ಮುಂತಾದ ಹೊರಗಿರುವ ಭೀಷಣ ಮತ್ತು ಸುಂದರ ವಾದ ದೃಶ್ಯಗಳೆಲ್ಲಾ ಆದಿಮಾನವನಲ್ಲಿ ಜಾಗ್ರತಾವಸ್ಥೆಯಲ್ಲಿ ಉಡಿಸಿ, ಬಾಹ್ಯ ಪ್ರಕೃತಿಯ ಪ್ರತೀಕಗಳನ್ನು ಉಪಾಸನೆ ಮಾಡಲು ಆರಂಭಿಸಿದನು. ಇದರಂ ತೆಯೆ ಮೋಹಮಯೀ ನಿದ್ರಾರಾಜ್ಯದಲ್ಲಿ ನಿತ್ಯ ಪ್ರವೇಶಿಸಿ ಅಘಟನಘಟೀ ಯನ್ ಸ್ವಪ್ನ ಇಂದ್ರಜಾಲದಲ್ಲಿ ಅದೃಷ್ಟಪೂರ್ವ ದೇಶ ಕಾಲಪಾತ್ರಾದಿಗಳನ್ನು ಅನುಭವಿಸಿ, ಅವುಗಳೆಲ್ಲಾ ಜಾಗ್ರತಾವಸ್ಥೆಯಂತೆಯೇ ಸತ್ಯವೆಂದು ಭಾವಿಸಿ, ಬೇರೊಂದು ಪ್ರಪಂಚದ ಸತ್ಯವನ್ನು ನಂಬಲು ಆರಂಭಿಸಿದನು. ಬಾಹ್ಯ ಅಂತರ ಭೇದದಿಂದ ಈ ರೀತಿ ಏಕಕಾಲದಲ್ಲೆ ಎರಡು ಅನುಭವಗಳು ಸತ್ಯ ಎಂಬ ಭಾವ ಬಂದಿರಬಹುದು.

ಉಚ್ಚತಮ ರಹಸ್ಯವಾದ ಮೃತ್ಯುವನ್ನು ಪರಿಚಯ ಮಾಡಿಕೊಳ್ಳಲು ಮಾನವ ಯತ್ನಿಸಿದನು. ಮೃತ್ಯು ಅನಿವಾರ್ಯ : ಎಲ್ಲರನ್ನೂ ಒಂದು ದಿನ

ಕಬಳಿಸುವುದು. ಇದೇನು ಎಂದು ಅಧೀರರಾಗಿ ಅವರು ಚಿಂತಿಸತೊಡಗಿದರು. ಇದು ಯಾವ ದೇವತೆ ! ನಚಿಕೇತರೂಪಿ ಮಾನವ ಮೃತ್ಯು ಮುಖದಿಂದ ಅವರ ರಹಸ್ಯವನ್ನು ಅರಿತನು. ಈ ಜನ್ಮ ಒಂದರಲ್ಲೇ ಅವನು ಪರ್ಯವಸಾನವಾಗುವುದಿಲ್ಲ. ಪರಕಾಲವೂ ಇದೆ. ಪರಕಾಲವು ಇಹದಷ್ಟೇ ಸತ್ಯ. ಸ್ವಪ್ನದಲ್ಲಿ ಕೆಲವು ವೇಳೆ ಪ್ರೇತಾತ್ಮನನ್ನು ನೋಡಿ ಮತ್ತೆ ಕೆಲವು ವೇಳೆ ಜಾಗ್ರತಾವಸ್ಥೆಯಲ್ಲಿಯೂ ನೋಡಿ ಪರಕಾಲದಲ್ಲಿ ವಿಶ್ವಾಸ ದೃಢೀಭೂತವಾಯಿತು. ಪ್ರಪಂಚದ ಸಕಲ ಜಾತಿ ಪುರಾಣ ಸಂಗ್ರಹದಲ್ಲಿ ಪ್ರೇತಾತ್ಮರ ವಿಷಯ ಉಕ್ತವಾಗಿದೆ. ಈಗಲೂ ಕೂಡಪ್ರೇತಾತ್ಮನನ್ನು ನೋಡಲು ಸಾಧ್ಯ ಎಂದು ಹಲವರು ಪ್ರಾಚ್ಯ ಪಾಶ್ಚಾತ್ಯ ದೇಶಗಳಲ್ಲಿ ಹೇಳುವರು. ಅವರನ್ನು ಹಾಗೆ ನೋಡಿದುದರಿಂದಲೇ ಪಿತೃಪೂಜೆ ಪ್ರಚಲಿತವಾಗಿದೆ. ಇದು ನಿಸ್ಸಂದೇಹ. ಪುರಾತನ ಈಜಿಪ್ಟ್‌ನಲ್ಲಿ ಪ್ರೇತಾತ್ಮನನ್ನು "ಕಾ" ಎಂದು ಕರೆಯುತ್ತಿದ್ದರು. ಇವು ತಮ್ಮ ಸಂತಾನದ ಮೂಲಕ ಬಂದು ತಮ್ಮ ದುಃಖ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದುವು. "ನಮಗೆ ಅನ್ನ ಕೊಡು, ವಸ್ತ್ರಕೊಡು, ಇತರ ಭೋಗ್ಯಪದಾರ್ಥಗಳನ್ನು ಕೊಡು" ಎಂದು ಕೇಳಿಕೊಳ್ಳುತ್ತಿದ್ದುವು. "ನೀನು ಕೊಡದೆ ಇದ್ದರೆ ನಿನ್ನನ್ನು ಧ್ವಂಸಮಾಡುವೆ'' ಎಂದು ಭೀತಿಯನ್ನು ಹುಟ್ಟಿಸುತ್ತಿದ್ದುವು. ಇವುಗಳೆಲ್ಲ ಅವರ ಪುರಾಣದಲ್ಲಿ ಉಕ್ತವಾಗಿದೆ. ಭಾರತದಲ್ಲಿ ಪಿತೃಗಳ ಶ್ರಾದ್ಧ ಮುಂತಾದವು, ಚೀನ ಜಪಾನಿನಲ್ಲಿ ಷಿಂಟೋ ಉಪಾಸನೆ, ಯೂರೋಪ್ ಅಮೆರಿಕಾ ದೇಶಗಳಲ್ಲಿ ಹಿಂದಿನಕಾಲದ ವಿಷಯಗಳನ್ನು ಬಿಟ್ಟರೂ ಈಗ ಪ್ರಚಲಿತವಾಗಿರುವ **Spiritualism add Seance** (ಭೂತದಲ್ಲಿ ನಂಬಿಕೆ) ಇದಕ್ಕೆ ಸಾಕಷ್ಟು ಪ್ರಮಾಣವಾಗಿವೆ.

ಎಲ್ಲಿಯವರೆಗೆ ಆದಿಮಾನವನಲ್ಲಿ ಏಕಕಾಲದಲ್ಲಿ ನಂಬಿಕೆ ಇನ್ನೂ ಉದಿಸಿರಲಿಲ್ಲವೊ ಅಲ್ಲಿಯವರೆಗೆ ಅವನ ಧಾರ್ಮಿಕ ಭಾವನೆ ಅಷ್ಟು ಬಲವಾಗಿತ್ತೆಂದು ಹೇಳಲಾಗುವುದಿಲ್ಲ. ಪರಕಾಲ ವಿಶ್ವಾಸ, ವಿಭಿನ್ನ ಶಕ್ತಿಯ ಆಧಾರದ ಮೇಲೆ ನಿಂತ ನಾನಾ ದೇವ ದೇವಿಯರಲ್ಲಿ ವಿಶ್ವಾಸ ಅವರ ಮನಸ್ಸಿನಲ್ಲಿ ಕ್ರಮೇಣ ಮೂಡಿದುವು ಎಂಬುದು ಸಕಾರಣವಾಗಿರುವುದು. ಪ್ರಥಮದಲ್ಲಿ ಈ ದೇವ ದೇವಿಯರ ಆವಾಸ ಹಿಮಾಲಯ ಮತ್ತು ಸಿನಾಯ್ (ಗ್ರೀಸಿನ ಬೆಟ್ಟ) ಎಂದು ನಿರ್ಧರಿಸಲ್ಪಟ್ಟವೆ. ಆದರೆ ಮಾನವ ಸಾಹಸಪ್ರೇರಿತನಾಗಿ ಆ ಗಿರಿಮಸ್ತಕಗಳನ್ನು

ಏರಿ ಪರೀಕ್ಷಿಸಿದಾಗ ಯಾವ ದೇವದೇವಿಯರ ಚಿಹ್ನೆಯೂ ಕಾಣಲಿಲ್ಲ. ಆಗ ಯಾವಾಗಲಾದರೊಮ್ಮೆ ಈ ದೇವತೆಗಳು ಪ್ರಪಂಚಕ್ಕೆ ಬರುವರೆಂದು ನಿರ್ಧರಿಸುವನು. ಅನಂತರ ವಾಸಸ್ಥಳ ನಾನಾ ನಕ್ಷತ್ರ ವಿರಾಜಿತ ಸುನೀಲ ಗಗನ, ಕೈಲಾಸ, ಗೋಲೋಕ, ಕಿನ್ನರ ಕಿನ್ನರಿಯಿಂದ ಆವೃತವಾದ ಸ್ವರ್ಗಲೋಕ ಮುಂತಾದುವು ಇವೆ ಎಂದು ತಿಳಿದುಕೊಳ್ಳುವರು. ಅನಂತರ ಉಚ್ಚನೀಚ ಕರ್ಮಗಳಿಗೆ ತಕ್ಕಂತೆ ಪಿತೃಲೋಕ, ದೇವಲೋಕ ನರಕ ಮತ್ತು ತಿರ್ಯಕ್ ಯೋನಿ ಮುಂತಾದುವುಗಳಲ್ಲಿ ಜನ್ಮವನ್ನು ಪಡೆಯುವರೆಂದು ನಿರ್ಧರಿಸಿದರು.

ಪೃಥ್ವಿಯಲ್ಲಿ ಬಹುಕಾಲ ವಾಸಮಾಡಿ ಹಲವು ಅನುಭವಗಳನ್ನು ಪಡೆದ ಮೇಲೆ ಮಾನವರಲ್ಲಿ ಭೂತವಿಜ್ಞಾನ, ಮತ್ತು ಮನೋವಿಜ್ಞಾನ ಕ್ರಮೇಣ ವಿಕಾಸವಾಯಿತು. ಮುಂಚೆ ಭಿನ್ನ ಭಿನ್ನ ದೇವದೇವತೆಗಳಲ್ಲಿ ಇರುವ ಭಕ್ತಿ ಕ್ರಮೇಣ ಈ ವೈವಿಧ್ಯ ಶಕ್ತಿಗಳೆಲ್ಲಾ ಒಂದೇ ಮಹಾಶಕ್ತಿಯ ವಿವಿಧ ಆವಿರ್ಭಾವ ಎಂದು ಅರಿತರು. ಆಶ್ಚರ್ಯಚಕಿತರಾಗಿ ಅವನನ್ನು ಸಕಲ ನಿಯಂತೃ ಎಂದು ಕರೆದರು.

ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇಭವತ ಓದನಃ ।
ಮೃತ್ಯುರ್ಯಸ್ಯ ಉಪಸೇಚನಂ ಚ ಇತ್ಥಾ ವೇದ ಯತ್ರ ಸಹ ॥
(ಕಠೋಪನಿಷತ್)

"ಬ್ರಾಹ್ಮಣ ಕ್ಷತ್ರಿಯ ಇಬ್ಬರೂ ಅವನಿಗೆ ಆಹಾರ. ಮೃತ್ಯುವೇ ವ್ಯಂಜನ ಸ್ವರೂಪ. ಆ ಕಾಲಾಂತಕ ವಿಶ್ವದೇವನನ್ನು ಅರಿಯುವುದಕ್ಕೆ ಯಾರಿಗೆ ಸಾಧ್ಯ ?"

ಆದರೆ ಇದು ಇಲ್ಲೇ ಕೊನೆಗಾಣಲಿಲ್ಲ. ಈಗ ಉಪನಿಷತ್ತಿನ ಯುಗ ಆರಂಭವಾಯಿತು. ಮಾನವ, ಧ್ಯಾನಸಹಾಯದಿಂದ ಈಶ್ವರ ಸೃಷ್ಟಿಯ ಹೊರಗೆ ಇರುವನೆ ಅಥವಾ ಒಳಗೆ ಇರುವನೆ ಎಂದು ಪ್ರಶ್ನಿಸತೊಡಗಿದನು. ಮೊದಲು ಅವನು ಹೊರಗೆ ಇರುವನೆಂದು ಭಾವಿಸಿದನು. ಸೃಷ್ಟಿ ಅದರ ಕರ್ತನಿಗಿಂತ ಬೇರೆ ಗುಣದಿಂದ ಕೂಡಿರುವಂತೆ ಕಾಣುವುದು. ಜೀವ ಸೇವಕ. ಈಶ್ವರ ಸೇವ್ಯ. ಜೀವ ಈಶ್ವರನನ್ನು ಗ್ರಹಿಸಲಾರದು.

ಅನಂತರ ಈಶ್ವರ ಜಗತ್ತಿನ ಒಳಗೆ ಮತ್ತು ಹೊರಗೆ ಇರುವನು. ಈ ಸೃಷ್ಟಿ ಅವನ ಏಕಾಂಗದಿಂದ ಆಗಿದೆ. ಜೀವ ಅಂಶ, ಅವನು ಪೂರ್ಣ, ದೇಹದ

ಅವಯುವಗಳಂತೆ. ಮನೋಬುದ್ಧಿಯ ಮೂಲಕ ಅವನನ್ನು ನೋಡಿದಾಗ, ವಿಶ್ವರೂಪ ಅವನ ಒಂದು ತಾತ್ಕಾಲಿಕ ಅವಸ್ಥೆ ಮಾತ್ರ. ಮನಸ್ಸು ಮತ್ತು ಬುದ್ಧಿಯ ಆಚೆಗೆ ಹೋಗಲು ಸಾಧ್ಯವಾದರೆ ಮಾತ್ರ ಶುದ್ಧ ಸತ್ಯಾನುಭವ ಸಾಧ್ಯ. ಆಗಲೇ ಏಕಮೇವಾದ್ವಿತೀಯ. ಎರಡಿಲ್ಲ, ಆದರೆ ಒಂದೇ ಇರುವುದು ಎಂದು ಹೇಳುವ ಹಾಗಿಲ್ಲ. ಅವನು ಪೂರ್ಣ ನಿತ್ಯಶುದ್ಧ ಮುಕ್ತ ಸ್ವಭಾವ. ಹಾಗಾದರೆ ಜೀವ? ಜೀವ ಎಲ್ಲಿ ಇದೆ ಎಂದು ಭಾವಿಸುವೆವೋ ಅಲ್ಲಿ ಇಲ್ಲ. ಸಾಧಕಾಗ್ರಣಿ ರಾಮಪ್ರಸಾದ ಹೀಗೆ ಹಾಡುತ್ತಾನೆ:

ವೇದೇರ್ ಅಭಾಸ್ ತುಯಿ ಘಟಾಕಾಶ್
ಘಟೇರ್ ನಾಶಕೆ ಮರಣಬೊಲೆ
ಅರೆಶೂನ್ಯತೆ ಪಾಪಪುಣ್ಯಗಣ್ಯ
ಮಾನ್ಯಕರೆ ಸಬ್ ಖಯಾಲೆ ॥

ಪ್ರಸಾದ ಬೊಲೆ ಜಾಚಿಲಿ ಭಾಯಿರ್
ತಾಯಿರ್ ಹಟ ತುಯಿ ನಿದಾನ್ ಕಾಲೆ
ಜಮನ್ ಜಲೇರ್ ಬಿಂಬ ಜಲೇರ್ ಉದಯ್
ಜಲ್ ಹೊಟೆ ಸೆ ಮಿಶಾಯ್ ಜಲೆ ॥

[" ವೇದ, ನೀನು ಘಟಾಕಾಶ ಎಂದು ಸಾರುವುದು. ಘಟದ ನಾಶವನ್ನೇ ಮರಣ ಎನ್ನುವುದು. ಶೂನ್ಯದಲ್ಲಿ ಪಾಪ ಪುಣ್ಯ ಗಣ್ಯ ಮಾನ್ಯ ಎಂಬುದೆಲ್ಲ ಹುಸಿ. ನೀನು ಹಿಂದೆ ಏನಾಗಿದ್ದೆಯೋ ಕೊನೆಗೆ ನೀನು ಅದೇ ಆಗುವೆ ಎಂದು ಪ್ರಸಾದ ಸಾರುವನು. ನೀರಿನ ಗುಳ್ಳೆ ನೀರಿನಲ್ಲಿ ಹುಟ್ಟಿ ಕೊನೆಗೆ ನೀರಿನಲ್ಲೇ ಸೇರಿ ಹೋಗುವಂತೆ. ಹಾಗಾದರೆ ಪಾಪ ಪುಣ್ಯ, ಧರ್ಮ ಅಧರ್ಮ, ಕರ್ಮ ಅಕರ್ಮಕ್ಕೆ ಕಾರಣ ಯಾವುದು? ಎಲ್ಲಿಯವರೆಗೆ ದೇಹ ಮನಸ್ಸು ಬುದ್ಧಿ ಇರುವುದೋ ಅಲ್ಲಿಯವರೆಗೆ ಇವೆಲ್ಲ ಸತ್ಯ. ಸ್ವಪ್ನ ನೋಡುವ ತನಕ ಸತ್ಯವಾಗಿರುವಂತೆ].

ಈ ಸಂಸಾರಸ್ವಪ್ನ ಮೃತ್ಯುಸಮಯದಲ್ಲಿ ನಾಶವಾಗುವುದೆ? ಇಲ್ಲ. ಆದರೆ ತೀವ್ರ ಇಚ್ಛಾಸಹಾಯದಿಂದ ಒಂದು ಜನ್ಮದಲ್ಲೇ ಇದಕ್ಕೆ ಅತೀತರಾಗಿ ಬೇಕಾದರೆ ಹೋಗಬಹುದು.

ಧರ್ಮಚಕ್ರ ಹೀಗೆ ಪ್ರವರ್ತಿತವಾಯಿತು. ಇನ್ನು ಮಿಕ್ಕಿರುವುದೇ ಸಮಾಜ ಆ ಸತ್ಯದೆಡೆಗೆ ಹೋಗುವಂತೆ ಮಾಡುವುದು. ಭಾರತದಲ್ಲಿ ಕಪಿಲಾ ದಾರ್ಶನಿಕರು ಭಗವಾನ್ ಶ್ರೀಕೃಷ್ಣನಿಂದ ಆರಂಭವಾಗಿ ಬುದ್ಧ ಶಂಕರಾದಿ ಅವತಾರಗಳು, ಮತ್ತು ಮಹಾಪುರುಷರು ಭರತಖಂಡದಲ್ಲಿ ಜನ್ಮ ತಳೆದರೊ ಅವರೆಲ್ಲ ಈ ಧರ್ಮಕ್ಕೆ ಸಹಾಯ ಮಾಡಿರುವರು ಮತ್ತು ಮಾಡುತ್ತಿರುವರು. ಅದನ್ನೆಲ್ಲಾ ವಿಶದವಾಗಿ ವಿವರಿಸುವುದಕ್ಕೆ ಇಲ್ಲಿ ಸಾಧ್ಯವಿಲ್ಲ.

ಪಾಶ್ಚಾತ್ಯ ದಾರ್ಶನಿಕರು ಬರೆದಿರುವ ಧಾರ್ಮಿಕ ಸಂಶೋಧನೆಗಳನ್ನು ನಾವು ಓದಿದರೆ ಅಲ್ಲಿ ದೊಡ್ಡದೊಂದು ಲೋಪ ಕಾಣಬರುವುದು. ಏಕೆಂದರೆ ಪಾಶ್ಚಾತ್ಯರು ಪ್ರಚಂಡ ಕರ್ಮಿಗಳು. ಅವರು ಎಂದಿಗೂ ವಿಶಿಷ್ಟ ಧರ್ಮವಿಜ್ಞಾನಿಗಳಿಗೆ ಜನ್ಮಕೊಟ್ಟಿಲ್ಲ. ಪ್ರಾಚ್ಯ ಭೂಮಿ, ವಿಶೇಷವಾಗಿ ಭಾರತ, ಧಾರ್ಮಿಕ ಭಾವನೆಗಳನ್ನು ಅತಿ ಪುರಾತನಕಾಲದಿಂದಲೂ ಪಾಶ್ಚಾತ್ಯ ದೇಶಗಳಿಗೆ ಪ್ರಚಾರ ಮಾಡಿವೆ. ಪೃಥ್ವಿಯ ಪ್ರಾಚೀನ ಇತಿಹಾಸವನ್ನು ಓದಿದಂತೆಲ್ಲಾ ಇದು ಸತ್ಯವೆಂದು ಗೊತ್ತಾಗುವುದು. ಹಿಂದೂಗಳ ನಿತ್ಯಪೂಜ್ಯ ವೇದದಿಂದ ಇಡೀ ಪ್ರಪಂಚ ಆಚ್ಛಾದಿತವಾಗಿದೆ. ಕ್ರಿಸ್ತಪೂರ್ವಕ್ಕೆ ಒಂದುಸಾವಿರ ವರ್ಷಗಳ ಹಿಂದೆ ಗ್ರೀಸ್ ಇತರ ದೇಶಗಳನ್ನು ತನ್ನ ಬಲದ ಸಹಾಯದಿಂದ ವಶಪಡಿಸಿಕೊಳ್ಳುತ್ತಿರುವಾಗಲಿಂದಲೂ ಆಧುನಿಕ ಯೂರೋಪಿನ ಸಭ್ಯತಾ ಆದಿಗುರುವಾದ ಗ್ರೀಸ್ ಭಾರತದೊಂದಿಗೆ ಸಂಪರ್ಕ ಪಡೆದಿತ್ತು ಎನ್ನುವುದು ಇತಿಹಾಸ ಪ್ರಸಿದ್ಧವಾಗಿದೆ. ಅದಕ್ಕಿಂತಲೂ ಹಿಂದೆ ಸಂಬಂಧವಿಲ್ಲ ಎಂದು ಸ್ಪಷ್ಟವಾಗಿ ಹೇಳಲು ಆಗುವುದಿಲ್ಲ. ಭಾರತೀಯರ ಧರ್ಮಪ್ರಚಾರಕರು ಮತ್ತು ಕೆಲವು ಕಡೆ ಭಾರತೀಯ ವಣಿಕಕುಲ ಗ್ರೀಸ್ ಮತ್ತು ಅವರ ಸಂತಾನವಾದ ರೋಮ್ ಸಾಮ್ರಾಜ್ಯದೊಂದಿಗೆ ತನ್ನ ಭಾವನೆಗಳನ್ನು ಹರಡಿತ್ತು ಎನ್ನುವುದಕ್ಕೆ ಬೇಕಾದಷ್ಟು ಕಾರಣಗಳಿವೆ. ಪ್ಯಾಲೆ ಸ್ಟೈನಿನಲ್ಲಿರುವ ಆಂಟಿಯೋಕ್ ನಗರದಲ್ಲಿ ಅಶೋಕನ ಧರ್ಮಸ್ತಂಭ ಈಗಲೂ ಅದಕ್ಕೆ ನಿದರ್ಶನವಾಗಿದೆ. ಯೂರೋಪಿನ ಉಲ್ಲೇಖ ಯೋಗ್ಯ ಪ್ರಥಮದಾರ್ಶನಿಕನೇ ಪೈಥಾಗರಸ್. ಅವನ ತತ್ತ್ವದಲ್ಲಿ ಸಾಂಖ್ಯ ಪ್ರಭಾವವನ್ನು ನೋಡುವೆವು. ಭಾರತದಲ್ಲಿ ಜನಸಾಮಾನ್ಯರು ಆಚಾರ್ಯನನ್ನು ಗುರು ಮತ್ತು ಪಿತೃ ಎಂದು ಕರೆಯುವರು. ಅವನ ಸಂಖ್ಯೆಯ ಸಿದ್ಧಾಂತ ಭಾರತೀಯ ಸಾಂಖ್ಯ ಭಾವದಿಂದ ಬಂದಿಸಬಹುದು. ಭಗವಾನ್ ಕಪಿಲ ಚತುರ್ವಿಂಶತಿ ತತ್ತ್ವದಿಂದ

ಪ್ರಪಂಚ ಸೃಷ್ಟಿಸಲ್ಪಟ್ಟದೆ ಎಂದು ಭಾವ ಎಲ್ಲರಿಗೂ ಗೊತ್ತಿಧೆ. ಗ್ರೀಸ್ ಮತ್ತು ರೋಮಿನಲ್ಲಿ ಅತಿ ಪುರಾತನ ಕಾಲದಿಂದಲೂ ಭಾರತೀಯ ಧಾರ್ಮಿಕ ಭಾವನೆ ಪ್ರಚಾರದಲ್ಲಿರುವುದಕ್ಕೆ ದಿನ ಕಳೆದಂತೆ ಹೆಚ್ಚು ಪ್ರಮಾಣ ದೊರಕುತ್ತದೆ.

ಪ್ರಾಚೀನ ಯುರೋಪಿನ ಧರ್ಮಪ್ರಪಂಚದ ಮೇಲೆ ತನ್ನ ಪ್ರಭಾವ ವನ್ನು ಬೀರಿದ ಮತ್ತೊಂದು ದೇಶವಿದೆ. ಅದೇ ಈಜಿಪ್ಟ್. ಈಜಿಪ್ಟ್ ಕೂಡ ಭಾರತದ ಭಾವನೆಗಳಿಗೆ ಋಣಿ. ಪ್ರಾಚೀನ ಈಜಿಪ್ಟಿನವರು ದಕ್ಷಿಣ ಸಾಗರದ ಮೂಲಕ ಭರತಖಂಡಕ್ಕೆ ಬಂದು ಇಲ್ಲಿ ಕೆಲವು ಕಾಲ ಇದ್ದು ಹೋಗುತ್ತಿದ್ದರು ಎಂಬುದಕ್ಕೆ ಈಜಿಪ್ಟಿನ ಪ್ರಾಚೀನ ಶಾಸ್ತ್ರಗಳಿಂದ ಪ್ರಮಾಣ ದೊರಕುವುದು. ಈಜಿಪ್ಟಿಗೆ ದಕ್ಷಿಣದಲ್ಲಿ ಭರತಖಂಡವಲ್ಲದೆ ಬೇರೆ ದೇಶವಿಲ್ಲ. ದಾಕ್ಷಿಣಾತ್ಯರಾದ ದ್ರಾವಿಡರಿಗೂ ಈಜಿಪ್ಟಿನವರಿಗೂ ಬಣ್ಣ, ಆಚಾರ, ವ್ಯವಹಾರ, ದೇವದೇವತೆ ಗಳು ಇವರಲ್ಲಿ ಸಾಮ್ಯವಿದೆ. ಶಿವಶಕ್ತಿಪೂಜೆ, ವೃಷಭನ ಮೇಲೆ ಗೌರವ, ನೀಳ ಕೇಶ, ಪಂಚೆ, ಕಪ್ಪು ಬಣ್ಣ ಇವೆಲ್ಲ ಇವೆ. ದ್ರಾವಿಡರೇ ಈಜಿಪ್ಟಿಗೆ ಹೋಗಿ ಅಲ್ಲಿ ತಮ್ಮ ಕುಲವನ್ನು ಜಾರಿಗೆ ತಂದರು ಎಂದು ನಂಬದೇ ಇರುವುದಕ್ಕೆ ಆಗುವುದಿಲ್ಲ. ಭೂಮಾರ್ಗದ ಮೂಲಕವೂ ಈಜಿಪ್ಟ್ ಮತ್ತು ಭಾರತದ ಮಧ್ಯದಲ್ಲಿ ವ್ಯಾಪಾರ ಮಾರ್ಗಗಳು ಇದ್ದುವು. ಅವು ಈಗಲೂ ಕೂಡ ಇವೆ. ಕ್ರಿಸ್ತ ಕೂಡ ಈಜಿಪ್ಟಿನಲ್ಲಿ ಬಹುಕಾಲ ಇದ್ದ ಎನ್ನುವುದಕ್ಕೆ ಹೊಸ ಟೆಸ್ಟಮೆಂಟಿನಲ್ಲಿ ಪ್ರಮಾಣಗಳಿವೆ. ಮತ್ತೆ ಕೆಲವರು ಕ್ರಿಸ್ತ ಹಿಂದೂದೇಶಕ್ಕೂ ಬಂದಿದ್ದ ಎನ್ನುವರು. ಅವನು ಬೋಧಿಸಿದ ಹಲವು ವಿಷಯಗಳನ್ನು ಬೌದ್ಧರು ಮತ್ತು ಪಾರ್ಸಿಯವರು ಇವ ರಿಂದ ತೆಗೆದುಕೊಂಡನೆಂಬುದಕ್ಕೆ ಸಂದೇಹವಿಲ್ಲ. ಒಳ್ಳೆಯ ಕೆಟ್ಟ ಶಕ್ತಿಗಳಿಗೆ ದ್ವಂದ್ವವಾದಾಗ ಒಳ್ಳೆಯದು ಯಾವಾಗಲೂ ಜಯಿಸುವುದು. ಉತ್ತಮ ಆದ ರ್ಶಗಳನ್ನು ಅನುಸರಿಸುವಾಗ ದೊಡ್ಡ ಪ್ರಲೋಭನೆ ಜನಸಾಮಾನ್ಯರನ್ನು ಆಕ ರ್ಷಿಸುವುದು. ಉತ್ತಮ ಆದರ್ಶಕ್ಕೆ ಸ್ತೋತ್ರ ತಾನೇ ನರಶರೀರವನ್ನು ಧರಿಸಿ ಮಾನವಕೃತ ಅಪರಾಧಕ್ಕೆ ತಾನೇ ಪ್ರಾಯಶ್ಚಿತ್ತ ಮಾಡಿಕೊಳ್ಳುವನು. ಇದೆಲ್ಲ ಬೌದ್ಧ ಗ್ರಂಥದಲ್ಲಿ ಅಕ್ಷರಶಃ ಇರುವುವು. ಕ್ರಿಸ್ತನ ಶಿಷ್ಯನಾದ ಜಾನ್ ಬರೆದ ಪ್ರಚಾರ ವಿವರಣೆಯ ಪೂರ್ವಭಾಗದಲ್ಲಿ ಭಾರತದ ಬ್ರಹ್ಮ ಮುಂತಾದುವು ಅಸ್ಪಷ್ಟವಾಗಿ ಕಾಣುವುವು.

ಪಾಶ್ಚಾತ್ಯದೇಶ ಧಾರ್ಮಿಕ ಭಾವನೆಗಳ ಪ್ರಭಾವಕ್ಕೆ ಬೀಳುತ್ತಿದ್ದಾಗ

ಜಡ ವಿಜ್ಞಾನದ ಚರ್ಚೆ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಧರ್ಮ ಕ್ಷೀಣವಾಗಿ ಜಡವಾದ ಅಧಿಕವಾಗಿ ವಿಸ್ತಾರವಾಯಿತು. ಜಡವಾದಿ ಜಡ ಶಕ್ತಿಯ ತತ್ತ್ವ ಲಾಭದಿಂದ ವಿಜ್ಞಾನ ಪ್ರಪಂಚವಲ್ಲಿ ಮಾತ್ರ ಕುಶಲಿಯಾದನು. ಪಾಶವ ಬಲೋನ್ಮತ್ತರಾದ ಪಾಶ್ಚಾತ್ಯ ಧರ್ಮಮೀಮಾಂಸಕರು ಗೀತೆಯಲ್ಲಿ ಬರುವ ಈ ಭಾವನೆಗೆ ಸಮ್ಮತಿಸುವುದರಲ್ಲಿ ಆಶ್ಚರ್ಯವಿಲ್ಲ.

ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಮ್
ಅಪರಸ್ಪರಸಂಭೂತಂಕಿಮನ್ಯತ್ಕಾಮಹೇತುಕಮ್ ||

ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೊ ಅಲ್ಪಬುದ್ಧಯಃ
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೊ ಅಹಿತಾಃ ||

ಕಾಮಮಾಶ್ರಿತ್ಯ ದೂಷ್ಪೂರಂ ದಂಬಮಾನಮದಾನ್ವಿತಾಃ
ಮೋಹಾದ್ ಗೃಹೀತ್ವಾ ಅಸದ್ಗ್ರಾಹಾನ್ ಪ್ರವರ್ತನ್ತೇ ಅಶುಚಿವ್ರತಾಃ ||

ಚಿಂತಾಮಪರಿಮೇಯಾಂ ಚ ಪ್ರಲಯಾಂತಾಮುಪಾಶ್ರಿತಾಃ
ಕಾಮೋಪಬೋಗಪರಮಾ ಏತಾವದಿತಿ ನಿಶ್ಚಿತಾಃ (ಗೀತಾ)

(ಈಶ್ವರನೇ ಇಲ್ಲ. ಹೀಗಿರುವಾಗ ಅವನು ಜಗತ್ತನ್ನು ಸೃಷ್ಟಿಸಿದನಂತೆ! ಸ್ತ್ರೀಪುರುಷರ ಸಂಯೋಗದಿಂದ ಜಗತ್ ಸೃಷ್ಟಿಯಾಯಿತು. ಕಾಮವೊಂದೇ ಜಗತ್ತಿನಲ್ಲಿ ಶ್ರೇಷ್ಠವಾದುದು—ಇದನ್ನು ನಿಶ್ಚಯ ಮಾಡಿಕೊಂಡು ಆಸುರಿ ಪ್ರವೃತ್ತಿಯ ಅಲ್ಪ ಬುದ್ಧಿಗಳು ಅಹಂಕಾರ ಅಭಿಮಾನದಿಂದ ಮತ್ತರಾಗಿ, ಆ ಭೋಗವನ್ನು ಪಡೆಯುವುದು ಹೇಗೆ ಎಂದು ಹಗಲು ರಾತ್ರಿ ಚಿಂತಿಸುತ್ತಿರುವರು. ಹೇಗಾದರೂ ಅದನ್ನು ಪಡೆಯಲು ಲೆಕ್ಕಿಸುವುದಿಲ್ಲ.)

ಭಾರತ ತನ್ನ ಋಷಿ ಮತ್ತು ಅವತಾರಗಳ ಸಂದೇಶವನ್ನು ಆಲಿಸದಿದ್ದರೆ ಆಸುರೀಪ್ರವೃತ್ತಿಯ ಜನಾಂಗದ ಸಂದೇಶಕ್ಕೆ ಕಿವಿಗೊಟ್ಟರೆ, ಕಾಲಕ್ರಮದಲ್ಲಿ ಭಾರತ ನಾಶವಾಗುವುದು. ಆದಕಾರಣ ಪ್ರಾರಂಭದಿಂದಲೂ ನಾವು ಜೋಪಾನವಾಗಿರಬೇಕು. ಸರ್ವಕಾಲದಲ್ಲಿಯೂ ಸಮಾಧಿಗತ ಅನುಭವವೇ ಧರ್ಮದ ಮೂಲ. ಜನ ಸಾಧಾರಣರು ಅತೀಂದ್ರಿಯ ಅನುಭವದ ವಿಷಯವನ್ನು 'ಪಾವನಂ ಪಾವನಾನಾಂ' ಎಂಬಂತೆ ಇರುವ ಆಪ್ತರ ಮಾತಿನಿಂದ ತಿಳಿಯು

ವರು. ಅವರ ಸಂದೇಶದಂತೆ ತಮ್ಮ ಜೀವನವನ್ನು ಅಣಿಮಾಡಿಕೊಂಡಿರುವ ಭರವಸೆಯನ್ನು ಪಡೆಯುವರು. ಇಂತಹ ಪವಿತ್ರಾತ್ಮರ ದರ್ಶನ ಸ್ಪರ್ಶನಗಳಿಂದ ರೂಪರಸಾದಿಗಳಲ್ಲಿ ನಿರತನಾಗಿ ಮಾಯಾಗ್ರಸ್ಥ ಜೀವಿಗಳಿಗೆ ಮಾಯಾತೀತವಾದ ನಿತ್ಯಾನಂದ ಕ್ಷಣಿಕ ಲಾಭವಾಗುವುದು. ಅವರಿಗೆ ಭಾವವಿದ್ದಂತೆ ಅನುಭವವಾಗುವುದು. ಜಡವನ್ನೇ ಚಿಂತಿಸುತ್ತಿದ್ದರೆ ಜನ ಜಡರಾಗಿ ಹೋಗುವರು. ಸಚ್ಚಿದಾನಂದ ಸ್ವರೂಪ ಶ್ರೀ ಭಗವಂತ ಚಿಂತನೆಯಿಂದ ಅವನೂ ಅದರಂತೆಯೇ ಆಗುವನು. ಪಾಶ್ಚಾತ್ಯ ದೇಶದಲ್ಲಿ ಬಹುಕಾಲದಿಂದ ಇಂತಹ ಆಪ್ತಪುರುಷರ ಸಂದರ್ಶನ ಲಾಭವಾಗಲಿಲ್ಲ. ಆದಕಾರಣವೆ ಈ ದುರ್ದೆಶೆ. ಈಸಲ ಪುನಃ ಭಾರತೀಯ ಧಾರ್ಮಿಕ ಭಾವನೆಗಳು ಭಗವಂತನ ಅಪಾರ ಕರುಣೆಯಿಂದ ಅಸುರ ಮತಾವಲಂಬಿ ಪಾಶ್ಚಾತ್ಯರ ಪ್ರಪಂಚವನ್ನು ಪ್ರವೇಶಿಸಿರುವುದು. ಆದ ಕಾರಣ ಈಗ ಭರವಸೆ ಇದೆ. ಪಾಶ್ಚಾತ್ಯ ಭಾರತವನ್ನು ತನ್ನ ಧರ್ಮಗುರುವೆಂದು ಸ್ವೀಕರಿಸಿ ಧ್ವಂಸ ಪಥವನ್ನು ತ್ಯಜಿಸಿ ಜಗತ್ತಿನ ಕಲ್ಯಾಣಕ್ಕೆ ತನ್ನ ನೈಜವಾದ ಶಕ್ತಿಯನ್ನು ಕ್ರಮಶಃ ಪ್ರಕಟಗೊಳಿಸುವುದು.

ದೇಹಬಲದಿಂದ ಬಲಾನ್ವಿತವಾದ ಭಾರತ ಚಿರಕಾಲ ಧರ್ಮಸಾಕ್ಷಾತ್ಕಾರಕ್ಕೆ ತನ್ನ ಶಕ್ತಿಯನ್ನೆಲ್ಲಾ ವಿನಿಯೋಗಿಸಿದೆ. ಈ ಸಾಧನ ಫಲದಿಂದಲೇ ಧರ್ಮದಲ್ಲಿ ಸಾಕ್ಷಾತ್ ಪ್ರಮಾಣ ಅದಕ್ಕೆ ಲಭಿಸಿದೆ. ಭಾರತ ನೋಡಿದೆ—ಪ್ರತೀಕೋಪಾಸನ ಮತ್ತು ಶ್ರದ್ಧೆ ಭಕ್ತಿಗಳಿಗೆ ಬಹುಕಾಲದಿಂದಲೂ ಬಂದಿರುವ ಸಂಸಾರ ಸ್ವಪ್ನ ಒಂದಲ್ಲ ಒಂದು ದಿನ ಭಗ್ನವಾಗುವುದು. ಸಹಸ್ರಾರು ವರುಷಗಳಿಂದಲೂ ಅಂಧ ಕಾರದಿಂದ ತುಂಬಿದ ಕೋಣೆ ಈಶ್ವರ ಕೃಪೆಯಿಂದ ಒಂದು ಕ್ಷಣದಲ್ಲಿ ಜ್ಯೋತಿರ್ಮಯವಾಗುವುದು. ಪೂರ್ಣ ಚಿದಾನಂದಸ್ವರೂಪನಾದ ಶ್ರೀಭಗವಾನ್ ಸಕಲರ ಹೃದಯದಲ್ಲಿಯೂ ಇದ್ದುಕೊಂಡು ಅವರನ್ನು ಯಂತ್ರದಂತೆ ಚಲಿಸುತ್ತಿರುವನು.

> ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
> ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥
>
> (ಗೀತಾ)

“ ಸತ್ಯವಾಗಿ ನನ್ನಲ್ಲಿ ಶರಣಾದರೆ ಮಾತ್ರ ಪೂರ್ಣಶಾಂತಿ ಲಾಭ. ಬೇರೆ ಮಾರ್ಗದೇ ಇಲ್ಲ ”

ಯುಗಯುಗದಲ್ಲಿ ಭಿನ್ನಭಿನ್ನ ಪ್ರಕೃತಿ ಆಲಂಬನದ ಮೂಲಕ ಭಗವತ್ ಶಕ್ತಿ ಮಾನವರಿಗೆ ವ್ಯಕ್ತವಾಯಿತು. ವೈದಿಕ ಯುಗದಲ್ಲಿ ಮೂರು ಕೋಟಿ ದೇವತೆಗಳು, ಪೌರಾಣಿಕ ಯುಗದಲ್ಲಿ ಮೂನ್ನೂರ ಮೂವತ್ತು ಕೋಟಿ ದೇವತೆಗಳ ಹೆಸರು ಬರುವುದು. ಈ ದೇವತೆಗಳೆಲ್ಲಾ ಮಾನವನ ಮೇಲೆ ತಮ್ಮ ಪ್ರಭಾವವನ್ನು ಬೀರಿವೆ. ಭಿನ್ನಭಿನ್ನ ಕಾಲದಲ್ಲಿ ಭಿನ್ನಭಿನ್ನ ಪ್ರತೀಕೋಪಾಸನ ಪ್ರಚಲಿತವಾಗಿದ್ದುದು ಕಾಣುವುದು. ಇವೆಲ್ಲ ಭಾರತೀಯರ ಧರ್ಮಲಾಭಕ್ಕೆ ಸಹಾಯವಾಗಿವೆ. ಮಂತ್ರಶಾಸ್ತ್ರದಲ್ಲಿ ಎಲ್ಲೋ ಕೆಲವು ದೇವ ದೇವತೆಗಳ ಹೆಸರು ಮಾತ್ರ ಬರುವುದು. ಹಲವು ದೇವತೆಗಳು ಈಗ ಮಾಯವಾಗಿರುವರು. ಆದರೆ ಅವು ಈಗಲೂ ಟಿಬೆಟ್, ಚೀನ, ಜಪಾನ್ ದೇಶಗಳಲ್ಲಿವೆ. ಭಾರತದ ಪುರಾತನ ಪ್ರಚಾರಕರು ಈ ದೇವತೆಗಳನ್ನು ಅಲ್ಲಿಗೆ ತೆಗೆದುಕೊಂಡುಹೋದರು. ಇದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಬೌದ್ಧ ಯುಗದಲ್ಲಿ ಶತದಲಪದ್ಮದಲ್ಲಿ ಆಸೀನನಾದ ಬುದ್ಧಮೂರ್ತಿ ಉತ್ತರ ಭಾರತದಲ್ಲಿ ಅನೇಕ ಕಡೆ ಇವೆ. ಕ್ರಮೇಣ ಶತದಲಪದ್ಮಮೂರ್ತಿ ಅದರ ಒಳಗೆ ಇರುವ ಉಜ್ವಲ ಕಿರಣಮಣಿಯಾಗಿ ಮಾರ್ಪಡುವುದು. ಈಗಲೂ ಟಿಬೆಟ್ ಮುಂತಾದ ಕಡೆ ಸಾಧಕರ ಧ್ಯಾನಕ್ಕೆ ಸಹಾಯಕವಾಗುವಂತೆ " ಓಂ ಮಣಿ ಪದ್ಮಲುಂ " ಎಂದು ಉಚ್ಚರಿಸುವರು.

ಬಾಹ್ಯಜಗತ್ತಿನಲ್ಲಿ ಆಂತರಿಕ ಶರೀರವೂ ಇರುವುದರಿಂದ ಇದೂ ಒಂದು ಪ್ರತೀಕವಾಯಿತು. ಇವುಗಳಲ್ಲಿ ಕೆಲವು ಈಗಲೂ ಇವೆ. ಮತ್ತೆ ಕೆಲವು ಮಾಯವಾಗಿ ಹೋಗಿವೆ. ಹೃದಯಪುಂಡರೀಕದಲ್ಲಿರುವ ಉಜ್ವಲ ಆಕಾಶ "ದಹರಾಕಾಶ" "ಛಾಯಾಪುರುಷ" ಒಂದು ಕಾಲದಲ್ಲಿ ಪ್ರತೀಕವಾಗಿತ್ತು. ಇದಕ್ಕೆ ಪ್ರಮಾಣಗಳಿವೆ. ಶಂಕರಾಚಾರ್ಯರ ವೇದಾಂತ ಭಾಷ್ಯದಲ್ಲಿ ಇವು ಉಕ್ತವಾಗಿವೆ.

ಕ್ಷಿತಿ ಅಪ್ ತೇಜ ಮರುತ್ ವ್ಯೋಮ ಇಂತಹ ಭೂತ ಪಂಚಕಗಳನ್ನು ಅನ್ನ, ಪ್ರಾಣ, ಮನ ಇತ್ಯಾದಿ ಪ್ರತೀಕಗಳಿಂದ ಮಾನವ ಉಪಾಸನೆ ಮಾಡಲು ಪ್ರಾರಂಭಿಸಿದನು. ಆದಕಾರಣವೇ ಉಪನಿಷತ್ತಿನಲ್ಲಿ "ಖಂ ಬ್ರಹ್ಮೇತ್ಯುಪಾಸೀತ" " ಖಂ ಬ್ರಹ್ಮ " " ಅನ್ನಂ ಬ್ರಹ್ಮ " ಮುಂತಾದವು ಬರುತ್ತವೆ. ಶಬ್ದಪ್ರತೀಕ ಸೂಕ್ಷ್ಮವಾಗಿ ಮಾಂಡೂಕ್ಯ ಉಪನಿಷತ್ತಿನಲ್ಲಿ ಬರುವ ನಾದ ಬ್ರಹ್ಮವಾದದಲ್ಲಿ ಪರ್ಯಾವಸಾನವಾಗುವುದು. ಭಿನ್ನಭಿನ್ನ ಶಬ್ದಗಳಿಗೆ ತಕ್ಕಂತೆ ಮನಸ್ಸಿನಲ್ಲಿ ಭಿನ್ನ

ಭಿನ್ನ ಭಾವನೆಗಳಿವೆ. ಇವುಗಳೆಲ್ಲ ಕ್ರಮೇಣ ಒಂದಾಗಿ ನಾದ ಅಥವಾ ಶಬ್ದ ಬ್ರಹ್ಮ ನಿಂದ ವಿಶ್ವಸೃಷ್ಟಿಯಾಗಿದೆ ಎಂಬ ಭಾವನೆ ಬಂದಿತು.

ಬಾಹ್ಯಾಂತರ ಭೇದಕ್ಕೆ ತಕ್ಕಂತೆ ಕಾಲಕ್ರಮೇಣ ಹಲವು ಪ್ರತೀಕಗಳು ಜಾರಿಗೆ ಬಂದವು. ಅವನ್ನೆಲ್ಲ ಗಣನೆಗೆ ತರುವುದಕ್ಕೆ ಸಾಧ್ಯವಿಲ್ಲ. ಹಲವು ಪ್ರತೀಕ ಗಳಲ್ಲಿ ಮಾನವ ಶಕ್ತಿಯನ್ನು ಅನುಭವ ಮಾಡಿಕೊಂಡನು. ಅವನಲ್ಲಿ ಈಶ್ವರ ವಿಲಾಸ ಮೂಡಿತು. ಇವುಗಳೆಲ್ಲ ಒಂದು ವಿಭೂತಿರೂಪ ಎಂದು ನೋಡಲು ಉಪಕ್ರಮಿಸಿದನು. ಗೀತೆಯ ದಶಮ ಅಧ್ಯಾಯದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಹೇಳಿದ ವಿಭೂತಿಯೋಗದಲ್ಲಿ ಬರುವ ವಸ್ತುಗಳನ್ನೆಲ್ಲಾ ಮಾನವ ಒಂದಾ ನೊಂದು ಕಾಲದಲ್ಲಿ ಪೂಜಿಸುತ್ತಿದ್ದ. ಕಾಲಕ್ರಮೇಣ ಹಲವು ಬಾಹ್ಯಪ್ರತೀಕ ಸಮುದಾಯಗಳು ಏಕತ್ರೀಭೂತವಾಗಿ ಒಂದು ವಿರಾಟ್ ದೇವತನುವಾಯಿತು. ಹಲವು ಅಂತರ್ ಪ್ರತೀಕವಾಯಿತು. ಇವನ್ನೇ ಮಾನವ ವಿಶ್ವವಿರಾಟ್ ಮತ್ತು ಕುಲಕುಂಡಲಿನೀ ಎಂದು ಆರಾಧಿಸತೊಡಗಿದನು. ಈ ವಿಷಯವನ್ನು ನಾವು ಬೇರೆ ಕಡೆ ಉಲ್ಲೇಖಿಸುವೆವು.

೫ ಶಕ್ತಿಪ್ರತೀಕ-ನಾರಿ

ಸಹಸ್ರ ಸಹಸ್ರ ವರುಷಗಳ ಹಿಂದಿನ ಕಥೆ. ಆಗ ಇತಿಹಾಸ ಇನ್ನೂ ಪ್ರಾರಂಭವೇ ಆಗಿರಲಿಲ್ಲವೆಂದು ಹೇಳಬಹುದು. ಆ ಕಾಲವನ್ನು ನಿರ್ಣಯಿಸುವವರು ಯಾರು? ಜಗತ್ತಿನ ಅತಿ ಪುರಾತನ ಕಥೆಗಳನ್ನು ಕುರಿತು ಐರೋಪ್ಯ ಗತ ವಸ್ತುಗಳನ್ನು ವಿಮರ್ಶಿಸುವ ತಂಡ ಹೀಗೆ ಹೇಳುವರು:

ಆಗ ಅನಾಗರಿಕ ಜಗತ್ತು ಅಜ್ಞಾನದ ಅಂಧಕಾರದಿಂದ ಆವೃತವಾಗಿತ್ತು. ಯಾವ ಕಡೆ ಎಷ್ಟು ದೂರ ನೋಡಿದರೂ ತಮ ರಜೋಗುಣಗಳ ಒಂದು ದ್ವಂದ್ವಯುದ್ಧ ಕಾಣುವುದು. ಸ್ಥೂಲ ಮಾಂಸಖಂಡದಲ್ಲಿರುವ ಮಾನವನಲ್ಲಿ ಅಧಿಕತರ ಶಕ್ತಿ ಅಂತರ್ಗತವಾಗಿರುವಂತೆ ಬಹಿಃಪ್ರಕೃತಿಯು ಸ್ಥೂಲ ಸೃಷ್ಟಿಯಲ್ಲಿ ಶ್ರೇಷ್ಠ ಶಕ್ತಿಯೊಂದು ಅಂತರ್ಗತವಾಗಿದೆ. ಹಿಂದೆ ಆದ ಹೋರಟದಲ್ಲಿ ಮಾನವನಲ್ಲಿರುವ ಶಕ್ತಿಯ ಕ್ರಿಯೆ ಪ್ರತಿಕ್ರಿಯೆಗಳನ್ನು ನೋಡುತ್ತೇವೆ. ಇವು ಹಲವು ಆಕಾರಗಳನ್ನು ತಾಳಿ ವ್ಯಕ್ತವಾಗುತ್ತಿದ್ದುವು. ಮೊದಲನೆಯದೇ ಕ್ಷುದಾ ಪೀಡನ, ಎರಡನೆಯದೆ ಅತ್ಯಧಿಕ ಶೀತ, ವಾತ, ಉಷ್ಣ ಮತ್ತು ದುಷ್ಟ ವನ್ಯ ಮೃಗಗಳ ಕಾಟದಿಂದ ಪಾರಾಗುವುದು. ಮೂರನೆಯದೆ ಸಮಾಜದಲ್ಲಿ ಇರಬೇಕೆಂಬ ಇಚ್ಛೆ. ಇವು ಕ್ರಮೇಣ ಮಾನವನಲ್ಲಿರುವ ರಜೋಗುಣವನ್ನು ಜಾಗೃತಗೊಳಿಸಿ ಜೀವನ ಸಂಗ್ರಾಮದಲ್ಲಿ ಮುಂದುವರಿಯುವಂತೆ ಪ್ರೇರೇಪಿಸಿದವು. ಮಾನವ ಆಹಾರಕ್ಕಾಗಿ ಫಲಮೂಲಗಳನ್ನು ಹುಡುಕಲು ಪ್ರಾರಂಭಿಸಿದನು. ಇವು ಸಿಕ್ಕುವುದಕ್ಕೆ ಕಷ್ಟವಾದಾಗ ಮಾಂಸಾಹಾರವನ್ನು ಮಾನವ ಮಾಡಲು ಪ್ರಾರಂಭಿಸಿದನು. ಮೊದಮೊದಲು ಗಿರಿ ಗುಹೆ ಬಿಲಗಳಲ್ಲಿ ಮಾನವ ವಾಸಿಸುತ್ತಿದ್ದು ಅನಂತರ ಅದನ್ನು ಹೋಲುವ ಗುಡಿಸಿಲುಗಳನ್ನು ಕಟ್ಟಿ ಚಳಿಯಿಂದ ಪಾರಾಗಲು ಯತ್ನಿಸುವನು. ಹೇ ದೇವಿ ಮಾನವಿ, ನೀನು ನಿನ್ನ ಆತ್ಮಸ್ವರೂಪರನ್ನು ತಮೋಗುಣದ ಮೂಲಕ ವ್ಯಕ್ತಪಡಿಸಿ ಅನಾಗರಿಕ ಕಾಲದಿಂದಲೂ ಮಾನವನ ಸಹಚರಿಯಾಗಿರುವೆ.

ಕ್ರಮೇಣ ಆಹಾರಸಾಮಗ್ರಿಗಳು ಅನಿಶ್ಚಿತವಾದಾಗ ಅದನ್ನು ಬೆಳೆದು ಸಂಗ್ರಹಿಸುವುದಕ್ಕಾಗಿ ಪಶುಪಾಲನವೃತ್ತಿಯು ಆರಂಭವಾಯಿತು. ಅಷ್ಟು ಹೊತ್ತಿಗೆ ಮಾನವಕುಲ ಆಗಲೆ ಬಹಳ ವಿಸ್ತಾರವಾಗಿ ಹರಡಿತ್ತು. ಆಗ ಸಮಾಜದಲ್ಲಿ ಧಾರ್ಮಿಕ ವಿವಾಹಗಳು ಇನ್ನೂ ಜಾರಿಗೆ ಬಂದಿರುವುದಿಲ್ಲ.

ಸ್ತ್ರೀಪುರುಷರ ಸಂಗವೇ ಪ್ರಜೋತ್ಪತ್ತಿಗೆ ಕಾರಣವಾಯಿತು. ಕಾಮವೇ ಅದಕ್ಕೆ ಪುರೋಹಿತ, ಛಲ, ಬಲ, ಕೌಶಲ್ಯಗಳೇ ಮಂತ್ರ ತಂತ್ರಗಳಾದುವು. ಗಂಡ ಕಾಲವಾದರೆ ಅವನ ಸಹೋದರರಿಂದ ಮಕ್ಕಳನ್ನು ಪಡೆಯುವುದು ಮನು ಮುಂತಾದ ಧರ್ಮಶಾಸ್ತ್ರಗಳಲ್ಲಿ ಕೂಡ ಹೇಳಿರುವುದು. ನೋಹನ ಇಬ್ಬರು ಹುಡುಗಿಯರಿಗೆ ಗಂಡ ಸಿಕ್ಕುವುದು ಅಭಾವವಾದಾಗ ಅವರು ತಂದೆಗೆ ಮದ್ಯಪಾನಮಾಡಿಸಿ ಮೈತಪ್ಪಿದ ಮೇಲೆ ಅವನಿಂದಲೇ ಗರ್ಭವತಿಯರಾದರು (genesis xxi–30–38) ಹೀಗೆ ಮಾನವ ಕುಲದ ಆದಿಯಲ್ಲಿ ಕಂಡ ಹಲವು ಅಸದೃಶ ಸಮ್ಮಿಳನಗಳನ್ನು ವಿವರಿಸುವುದಕ್ಕೆ ಯಾರಿಗೆ ಸಾಧ್ಯ? ಧರ್ಮಕ್ಕೆ ವಿರುದ್ಧವಾದ ಹಲವು ವಿಪರೀತ ಸಮ್ಮಿಲನಗಳನ್ನು ನೋಡಿದಾಗ ಮಾನವಕೋಟಿ ಲಜ್ಜೆಯಿಂದ ತಲೆ ತಗ್ಗಿಸಿ ಶತಧಿಃಕ್ಕಾರಗಳನ್ನು ಕೊಡಬೇಕಾಗುವುದು.

ಇನ್ನು ಮೇಲೆ ಮಾನವರು ಭಿನ್ನಭಿನ್ನ ದಳದಲ್ಲಿ ನೆಲಸಲು ಪ್ರಾರಂಭಿಸಿದರು. ವನ್ಯಪಶುಕುಲಗಳು ಅಪಾಯದಿಂದ ಪಾರಾಗುವುದಕ್ಕೆ ಯಾವಾಗಲೂ ಮಂದೆಯಲ್ಲಿ ಇರುವುದನ್ನು ನೋಡಿ ಮಾನವರೂ ಕೂಡ ಬೇರೆ ಸಂಗಡಕ್ಕೆ ಸೇರಿದರು. ವಿರೋಧ ಸಂಗಡ ಮತ್ತು ಹಿಂಸಾ ಪ್ರಾಣಿಗಳ ಉಪಟಳದಿಂದ ಪಾರಾಗುವುದಕ್ಕೆ ತಳಬದ್ಧವಾಗಿ ನೆಲಸಲು ಪ್ರಾರಂಭಿಸಿದರು. ಇದರಿಂದ ತಮ್ಮ ಅನುಚರರು ಮತ್ತು ಪ್ರಾಣಿಗಳನ್ನು ರಕ್ಷಿಸುವುದಕ್ಕೆ ಸಹಾಯವಾಯಿತು. ಐಕ್ಯತೆಯೇ ಬಲಕ್ಕೆ ಕಾರಣ. ಸಮೂಹದಲ್ಲಿದ್ದರೇ ವಿಶೇಷ ಬಲ ಎಂಬುದನ್ನು ಅರಿತನು. ಕ್ರಮೇಣ ಮಾನವನು ಸಣ್ಣ ಸಣ್ಣ ಮಂಡಳಿಯನ್ನು ಮಾಡಿಕೊಂಡು ಎಲ್ಲರೂ ಒಟ್ಟಿಗೆ ದನ ಮೆಯಿಸುವುದು, ರಾತ್ರಿ ವೇಳೆ ಒಂದೇ ಕಡೆ ದನಗಳನ್ನು ಕಟ್ಟುವುದು ಇತ್ಯಾದಿ ಬಳಕೆಗೆ ಬಂದಿತು. ಆಯಾ ಮಂಡಲಿಯಲ್ಲಿರು ಶ್ರೇಷ್ಠ ಬಲಶಾಲಿಗಳು ಇತರರ ಮೇಲೆ ತಮ್ಮ ಪ್ರಭಾವವನ್ನು ಬೀರಿ ನಾಯಕರಾದರು. ಆ ಸಂಗಡ ಆ ನಾಯಕನ ಹೆಸರಿನಲ್ಲಿ ಇತರರಿಗೆ ಪರಿಚಯವಾಗತೊಡಗಿತು. ಪ್ರತಿಯೊಂದು ಸಂಗಡವೂ ಒಂದೊಂದು ಗೋತ್ರಗಳಾದವು. ಗೋತ್ರಗಳು ಉದಿಸಿದ್ದು ಹೀಗೆ ಆಯಾ ಗೋತ್ರದಲ್ಲಿರುವ ನಾರಿಯರೆಲ್ಲ ಆ ಗೋತ್ರದ ನಾಯಕನಿಗೆ ವಿಶೇಷವಾಗಿ ಮತ್ತು ಇತರರಿಗೆ ಸಾಮಾನ್ಯವಾದ ಭೋಗವಸ್ತುವೆಂದು ಪರಿಗಣಿತವಾದರು. ಹೀಗೆ ಸ್ತ್ರೀಯರು ಮೊದಲು ಒಂದು ಗೋತ್ರದವರನ್ನು ಮದುವೆಯಾಗುವುದು ಜಾರಿಗೆ ಬಂದಿತು. ದ್ರೌಪದೀ

ರೂಪಿಣಿ ನಾರಿ, ಹಿಂದೆ ಒಂದು ಕಾಲದಲ್ಲಿ ಶತಪತಿಗಳ ಮನೋರಂಜನೆ ಮಾಡು ಬೇಕಾಗಿತ್ತು. ಪುರುಷನ ಸುಖ ದುಃಖಗಳಲ್ಲಿ ಸಮಭಾಗಿನಿಯಾದ, ಏಕಾಕಿ ಯಾದ ಅಸಹಾಯಕಳಾದ ನಾರಿ, ಗೋತ್ರ ಬಲದರ್ಪಿತ ಪುರುಷನ ಪಾಶವಿ ಪ್ರವೃತ್ತಿಯನ್ನು ತೃಪ್ತಿಪಡಿಸುವ ಕುಶಲಿಯಾದಳು. ಪರಾಧೀನಳಾದ ದಾಸಿ ಮಾತ್ರ ಎಂದು ಪರಿಗಣಿಸಲ್ಪಟ್ಟಳು.

ಅನಂತರ ಗೋತ್ರ ಗೋತ್ರಗಳಲ್ಲಿ ದ್ವಂದ್ವ ಶುರುವಾಯಿತು. ಒಂದು ಗೋತ್ರದವರು ಮತ್ತೊಂದು ಗೋತ್ರದ ನಾರಿ ಮತ್ತು ಪಶುಗಳನ್ನು ಛಲ ಬಲ ದಿಂದ ಅಪಹರಿಸಲು ಯತ್ನಿಸುತ್ತಿದ್ದರು. ಕೆಲವು ವೇಳೆ ಯುದ್ಧಮಾಡಿ ಬೇರೆ ಗೋತ್ರದ ಪುರುಷರನ್ನೆಲ್ಲಾ ವಧಿಸಿ ಅಲ್ಲಿಯ ನಾರಿ ಮತ್ತು ಪಶುಗಳನ್ನು ತಮ್ಮ ಗೋತ್ರಕ್ಕೆ ಸೇರಿಸಿಕೊಳ್ಳುತ್ತಿದ್ದರು. ಹೀಗೆ ಯುದ್ಧಕ್ಕೆ ತುತ್ತಾಗಿ ಗೋತ್ರಗಳ ನಾಮಾವಶೇಷವಾಗಿದೆ. ಅಸಹಾಯ ಅಬಲ ನಾರಿ ಬಲಿಷ್ಠನಾದ ಮಾನವನ ಕೈಗೊಂಬೆಯಾದಳು. ದೇವತೆಗಳ ರಾಣಿಯಾದ ಶಚಿಯಂತೆ ಯಾರು ಇಂದ್ರನಾಗುವನೋ ಅವನ ಮನೋಲ್ಲಾಸವನ್ನು ಮಾಡ ಬೇಕಾಯಿತು.

ಪಶುಪಾಲನೆ ಮತ್ತು ಧಾನ್ಯ ಸಂಗ್ರಹಕ್ಕಾಗಿ ಕೃಷಿಯನ್ನು ಅನುಸರಿಸಿ ಮಾನವರು ಗ್ರಾಮ ಗ್ರಾಮಗಳಲ್ಲಿ ನೆಲೆಸತೊಡಗಿದರು. ಗ್ರಾಮ ನಗರಗಳು ಹೀಗೆ ಉದಿಸಿದುವು. ಮಾನವನ ಸ್ಥಿತಿ ಮೇಲಾದರೆ ಏನಾಯಿತು ? ನಾರಿಯ ಸ್ಥಿತಿ ಉತ್ತಮಗೊಳ್ಳಲಿಲ್ಲ. ದಾಸಿ ದಾಸಿಯಾಗಿಯೇ ಉಳಿದಳು. ಪಶು, ಧನ ಧಾನ್ಯಗಳಂತೆ ಸೌಂದರ್ಯಭೂಷಿತಳಾದ ನಾರಿ ಮಾನವನ ಮತ್ತೊಂದು ಆಸ್ತಿ ಯಾಗಿ ಉಳಿದಳು.

ಹೀಗೆ ಕಾಲಾನಂತರ ಹಲವು ಗೋತ್ರ ಸಮೂಹ ಏಕವಾಗಿ " ಸುಮೇರು ಜನಾಂಗವಾಗಿ ಬ್ಯಾಬಿಲೋನಿನಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಿದರು " " ಡಮೂಜಿ " ಮತ್ತು " ಆದುನಾಯಿ "ಯರನ್ನು ಸಕಾಮದಿಂದ ಪೂಜಿಸು ವುದು ಜಾರಿಗೆ ಬಂದಿತು. ಸೃಷ್ಟಿಯಲ್ಲಿ ಪ್ರಜೆಗಳ ಪ್ರಯೋಜನ ಎಷ್ಟು ಮುಖ್ಯ ಎಂಬುದನ್ನು ಅರಿತು ಅದಕ್ಕೆ ಕಾರಣವಾದ ಯೋನಿ ಮತ್ತು ಲಿಂಗವನ್ನು ಪೂಜಿಸತೊಡಗಿದರು. ದೇವಮಂದಿರದೊಳಗೆ ಪೂರ್ವ ಅಪರಿಚಿತನಾದ ಪುರುಷ ನೊಂದಿಗೆ ನಾರಿ ವಿವಾಹದಲ್ಲಿ ಬೆರೆಯತೊಡಗಿದಳು.

ಈ ಸುಮೇರು ಜನಾಂಗ ಕ್ರಮೇಣ ವಾಸಕ್ಕಾಗಿ ಫಲವತ್ತಾದ ಭೂಮಿ

ಯನ್ನು ಹುಡುಕಿಕೊಂಡು ಅವರಲ್ಲಿ ಒಂದು ಭಾಗ ಭರತಖಂಡವನ್ನು ಪ್ರವೇಶಿಸಿತು. ಬರುವಾಗ ತಮ್ಮ ದೇವ ದೇವಿಯನ್ನು ತಂದರು. ಹಲವು ಕಾಲ ಸಮೃದ್ಧಿಯಿಂದ ಬಾಳಿ ಇವರಲ್ಲಿ ಒಂದು ಶಾಖೆ ಮಲಬಾರ್ ಕರಾವಳಿ ಮೂಲಕ ಹೋಗಿ ಅಲ್ಲಿಂದ ನೌಕೆಯಲ್ಲಿ ಈಜಿಪ್ಟನ್ನು ಸೇರಿ ಅಲ್ಲಿ ನೈಲ್ ನದೀ ತೀರದಲ್ಲಿ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿದರು. ಹೀಗೆ ಮಾನವರ ಧನ, ಧಾನ್ಯ, ಸಂಪತ್ತು ಅಭಿವೃದ್ಧಿಯಾಯಿತು. ಸ್ತ್ರೀಯಲ್ಲಿ ಅಂತರ್ನಿಹಿತವಾದ ದೈವೀಶಕ್ತಿ ಕೂಡ ಜಾಗ್ರತವಾಗಿ ಪುರುಷನ ಉನ್ನತಿಗೆ ಉತ್ತೇಜಿತಳಾದಳು. ಸರ್ವಕಾಲದಲ್ಲಿಯೂ ಪುರುಷನೊಡನೆ ವಾಸಿಸುತ್ತಾ ಅವನ ಸಂತಾನ ಧನ ಮುಂತಾದುವನ್ನು ಪಾಲಿಸುವ ಮತ್ತು ರಕ್ಷಿಸುವ ಕೆಲಸದಲ್ಲಿ ನಿರತಳಾದಳು. ಆದಕಾರಣ ಪ್ರಪಂಚದ ಹಲವು ಕಡೆ ಜನ ಅವಳನ್ನು ಸಕಾಮ ದೃಷ್ಟಿಯಿಂದ ಉಪಾಸನೆ ಮಾಡಲು ಯತ್ನಿಸಿದರು. ಈ ಉಪಾಸನೆಯ ಮೂಲಮಂತ್ರ ಮಾನವನ ಸ್ವಾರ್ಥ ಸುಖಾನ್ವೇಷಣೆ. ಅದರ ಗುರಿಯೋ ಮಾನವನ ಭೋಗತೃಪ್ತಿ. ಇದರಿಂದ ಏನು ಪ್ರಯೋಜನವಾಯಿತು? ದುರ್ಗಂಧದಿಂದ ಕೊಳೆತು ನಾರುವ ಪಂಕದಲ್ಲಿ ದೇವಯೋಗ್ಯವಾದ ಪರಿಮಳವನ್ನು ಬೀರುವ ಕಮಲ ಹುಟ್ಟುವಂತೆ ಇಂದ್ರಿಯ ಸುಖಕ್ಕಾಗಿ ಮಾಡುತ್ತಿದ್ದ ಸಹಾಯ ಮತ್ತು ಪ್ರೀತಿಯಿಂದ ಕಾಲಕ್ರಮೇಣ ಉದಿಸಿದ ಜಗನ್ಮಾತೆಯ ಹ್ಲಾದಿನೀ ಶಕ್ತಿಯನ್ನು ಉಪಾಸನೆ ಮಾಡಲು ಆರಂಭಿಸಿದರು. ತ್ರಿಜಗತ್ ಪ್ರಸವಿನೀ ಶಕ್ತಿಯನ್ನು ಕಾಲಕ್ರಮೇಣ ಮಾನವ ನಾರೀ ಪ್ರತೀಕದಲ್ಲಿ ಉಪಾಸನೆ ಮಾಡಿ ಕೃತಾರ್ಥನಾಗುವುದನ್ನು ಕಲಿತನು.

ಪ್ರಕೃತಿಯ ಜಟಿಲಾರಣ್ಯದಲ್ಲಿ ಸಿಕ್ಕಿದ ಮಾನವನಿಗೆ ದಿಕ್‌ಗೋಚರವಾಗದ ಹಾಗೆ ಆಯಿತು. ಸ್ತ್ರೀಯಲ್ಲಿ ಕಮನೀಯ ಕಾಂತಿಕಲೆಯನ್ನು ಕಂಡನೇ ಹೊರತು "ಸೂರ್ಯಕೋಟಿ ಪ್ರತೀಕಾಶ" "ಚಂದ್ರಕೋಟಿ ಸುಶೀತಲಾ" ದೇವತೆ ಪ್ರತ್ಯಕ್ಷವಾಗಲಿಲ್ಲ. ಕಾಲಾನಂತರ ಭಾರತೀಯ ದೇವಕುಲ, ದೇವದ್ರುಮ ಪರಿಶೋಭಿತ ಅಭ್ರಭೇದಿ ಹಿಮಾಚಲ ಶೃಂಗದಲ್ಲಿ ಜಗತ್ತಿನ ಸಮಸ್ತ ನಾರಿಯರ ಸಮಷ್ಟಿಭೂತಳಾದ ಉಮಾಹೈಮವತಿಯನ್ನು ಪ್ರಥಮ ಸಂದರ್ಶನ ಪಡೆದು ಕೃತಾರ್ಥರಾದರು. ಬಾಲಾರ್ಕರೂಪಿಣಿ ಅನಂತಕೋಟಿ ಬ್ರಹ್ಮಾಂಡ ಪ್ರಸವಿನೀ ಬ್ರಹ್ಮಶಕ್ತಿದೇವಿಯನ್ನು ನೀಲಾಂಬರದಲ್ಲಿ ಕಂಡು ಅವಳ ಶ್ರೀಮುಖದಿಂದಲೇ ಇದನ್ನು ಕೇಳತೊಡಗಿದರು :

ಅಹಂ ರಾಷ್ಟ್ರೀ ಸಂಗಮನೀ ವಸೂನಾಂ
ಚಿಕಿ ತುಷೀ ಪ್ರಥಮಾ ಯಜ್ಞಿಯಾನಾಮ್

* * *

ಮಯಾ ಸೋಽನ್ನಮತ್ತಿ ಯೋ ವಿಪಶ್ಯತಿ
ಯಃ ಪ್ರಾಣಿತಿ ಯ ಇಂ ಶೃಣೋತ್ಯುಕ್ತಮ್

ಅಮಂತವೋ ಮಾಂ ತ ಉಪಕ್ಷಿಯಂತಿ
ಶ್ರುಧಿ ಶ್ರುತ ಶ್ರದ್ಧಿವಂ ತೇ ವದಾಮಿ

* * *

ಯಂಕಾಮಯೇ ತಂತಮುಗ್ರಂ ಕೃಣೋಮಿ
ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಮ್ ||

—ಋಕ್ ದೇವಿಸೂಕ್ತ

"ನಾನೇ ಸಮಸ್ತ ಜಗತಿಗೆ ಈಶ್ವರಿ; ಧನವನ್ನು ಹಂಚಿಕೊಡುವವಳೂ ನಾನೇ; ನಾನೇ ಜ್ಞಾನವುಳ್ಳವಳು ಮತ್ತು ಯಜ್ಞಾರ್ಹರಾದ ದೇವತೆಗಳ ಮಧ್ಯದಲ್ಲಿ ಶ್ರೇಷ್ಠಳಾದವಳು."

"ಯಾವನು ಅನ್ನವನ್ನು ತಿನ್ನುತ್ತಾನೋ ನೋಡುತ್ತಾನೋ, ಉಸಿರಾಡುತ್ತಾನೋ, ಹೇಳಿದ್ದನ್ನು ಕೇಳುತ್ತಾನೋ, ಅವನು ನನ್ನ ಶಕ್ತಿಯಿಂದಲೇ ಇದೆಲ್ಲವನ್ನೂ ಮಾಡುತ್ತಾನೆ. ಇಂತಹ ನನ್ನ ವಿಷಯದಲ್ಲಿ ಯಾರು ಜ್ಞಾನಹೀನರಾಗಿರುತ್ತಾರೋ ಅವರು ನಾಶವಾಗುತ್ತಾರೆ. ಎಲೈ ಜ್ಞಾನಿಯೇ ಕೇಳು—ಶ್ರದ್ಧೆಯ ಸತ್ಯವನ್ನು ನಿನಗೆ ಹೇಳುತ್ತೇನೆ."

"ನಾನು ಯಾರನ್ನು ಪ್ರೀತಿಸುತ್ತೇನೆಯೋ ಅವನನ್ನು ಬಲಿಷ್ಠನನ್ನಾಗಿ ಮಾಡುತ್ತೇನೆ, ಬ್ರಹ್ಮನನ್ನಾಗಿ ಮಾಡುತ್ತೇನೆ, ಋಷಿಯನ್ನಾಗಿ ಮಾಡುತ್ತೇನೆ, ಪ್ರಾಜ್ಞನನ್ನಾಗಿ ಮಾಡುತ್ತೇನೆ."

ದೇವತೆಗಳಾದ ಮೇಲೆ ಭಾರತೀಯ ಮಂತ್ರದ್ರಷ್ಟರಾದ ಋಷಿಗಳು ನಾರೀ ಮೂರ್ತಿಯನ್ನು ಕಾಮಗಂಧ ಹೀನವಾದ ದೃಷ್ಟಿಯಿಂದ ನೋಡುವುದನ್ನು ಪ್ರಚಾರಕ್ಕೆ ತಂದರು. ಉಪನಿಷತ್ತಿನ ಪ್ರಾಣರಾದ ಋಷಿಗಳು ದೇವೀ ಮಹಿಮೆಯನ್ನು ತಮ್ಮ ಜೀವನದಲ್ಲಿ ಅನುಭವಿಸಿ ಹೀಗೆ ಹೇಳಿರುವರು :

ಅಜಾಂ ಏಕಾಂ ಲೋಹಿತ ಶುಕ್ಲ ಕೃಷ್ಣಾಂ
ವಹ್ನೀಃ ಪ್ರಜಾಃ ಸೃಜಮಾನಾಂ ಸರೂಪಾಃ

ಅಜೋ ಹ್ಯೇಕೋ ಜುಷಮಾಣೋಽನು ಶೇತೇ
ಜಹಾತ್ಯೇನಾಂ ಭುಕ್ತ ಭೋಗಾಮಜೋಽನ್ಯಃ (ಶ್ವೇತಾಶ್ವತರ)

“ ಶುಕ್ಲ ಕೃಷ್ಣರಕ್ತವರ್ಣೆಯಾದ ಸತ್ತ್ವರಜೋತಮೋಗುಣಿಯಾದವಳು ಅಜಳಾಗಿರುವಳು. ಅವಳು ತನ್ನಂತೆ ಇರುವ ಹಲವು ವಸ್ತುಗಳನ್ನು ಸೃಷ್ಟಿಸುತ್ತಿರುವಳು. ಅವಳ ಪಕ್ಕದಲ್ಲಿ ಒಬ್ಬ ಅಜನಾದ ಪುರುಷ ಆಸಕ್ತಿಯಿಂದ ಕೂಡಿರುವನು; ಮತ್ತೊಬ್ಬ ಪ್ರಜಾಸೃಷ್ಟಿಯಾದ ಮೇಲೆ ಅವಳನ್ನು ತ್ಯಜಿಸಿರುವನು.”

ದೇವೀ ಮಹಿಮೆಯನ್ನು ಸಾಕ್ಷಾತ್ಕಾರ ಮಾಡಿಕೊಂಡ ಜ್ಞಾನಿ ಹೀಗೆ ಉಪದೇಶ ಕೊಡುವನು :

ನ ವಾ ಅರೆ ಜಾಯಾಯೈ ಕಾಮಾಯ ಜಾಯಾ ಪ್ರಿಯಾ ಭವತಿ ।
ಆತ್ಮನಸ್ತು ಕಾಮಾಯ ಜಾಯಾ ಪ್ರಿಯಾ ಭವತಿ ॥ (ಬೃಹದಾರಣ್ಯಕ)

ಸತಿಯಲ್ಲಿ ಆತ್ಮಸ್ವರೂಪಿಣಿಯಾದ ದೇವಿ ಅವಸ್ಥಿತಳಾಗಿರುವುದರಿಂದ ಅವಳು ಪ್ರೀತಿಪಾತ್ರಗಳಾಗಿರುವಳು ; ಕೇವಲ ಸತಿಗಾಗಿ ಅಲ್ಲ.

ಋಷಿಗಳನ್ನು ಅನುಸರಿಸಿ ಬಂದ ಅತಿ ಹಿರಿಯನಾದ ಮನು ಕೂಡ ಹೀಗೆ ಹೇಳುವನು:

ದ್ವಿಧಾಕೃತ್ವಾತ್ಮನೊ ದೇಹ ಮರ್ಧೇನ ಪುರುಷೋ ಽಭವತ್ ।
ಅರ್ಧೇನ ನಾರೀ ತಸ್ಯಾಂ ಸ ವಿರಾಜಮಸೃಜತ ಪ್ರಭುಃ ॥

ಸೃಷ್ಟಿಗೆ ಪೂರ್ವದಲ್ಲಿ ಬ್ರಹ್ಮ ಎರಡು ಭಾಗವಾಗಿ ಒಂದು ಭಾಗ ನಾರಿ ಮತ್ತೊಂದು ಭಾಗ ಪುರುಷನಾದನು. ಅನಂತರ ಇದರ ಮಿಲನವಾಯಿತು ಅದರಿಂದ ಬ್ರಹ್ಮಾಂಡವನ್ನೇ ತನ್ನ ಶರೀರವಾಗಿವುಳ್ಳ ವಿರಾಟ್‌ಪುರುಷ ಜನಿಸಿದನು.

ಬಲಿಷ್ಠನಾದ ಮಾನವ ಹಿಂದೆ ಒಂದು ಕಾಲದಲ್ಲಿ, ತನ್ನ ಸುಖಕ್ಕಾಗಿ ಸ್ವಾರ್ಥಕ್ಕಾಗಿ ನಾರಿಯನ್ನು ಪಾಲಿಸುತ್ತಿದ್ದನು. ಮನು ಅವರನ್ನು ಸಹಧರ್ಮಿಣಿ ಎಂದು ನೋಡುವಂತೆ ಬೋಧಿಸಿ ನಾರೀ ಪೂಜೆಯಲ್ಲಿ ಮತ್ತೂ ಮುಂದುವರಿದು ಹೋಗುವನು.

ಯತ್ರನಾರ್ಯಸ್ತು ಪೂಜ್ಯನ್ತೆ ರಮನ್ತೇ ತತ್ರ ದೇವತಾಃ ।
ಯತ್ರೈತಾಸ್ತು ನ ಪೂಜ್ಯನ್ತೆ ಸರ್ವಾಸ್ತತ್ರಾಫಲಾಃ ಕ್ರಿಯಾಃ ॥ (ಮನು)

“ ಯಾವ ಗೃಹದಲ್ಲಿ ನಾರಿಯನ್ನು ಪೂಜ್ಯದೃಷ್ಟಿಯಿಂದ ನೋಡುತ್ತಾರೊ ಅಲ್ಲಿಗೆ ದೇವತಾಕುಲಗಳೆಲ್ಲ ಆನಂದದಿಂದ ಆಗಮಿಸುವರು. ಎಲ್ಲಿ ಅವರಿಗೆ

ಗೌರವ ಸಲ್ಲಿಸುವುದಿಲ್ಲವೋ ಆ ಮನೆಯಲ್ಲಿ ಮಾಡಿದ ಕ್ರಿಯಾದಿಗಳೆಲ್ಲ ನಿಷ್ಪ್ರಯೋಜನ." ಈ ರೀತಿಯಾಗಿ ಭಾರತೀಯ ಆರ್ಯಗೌರವ ಋಷಿಕುಲ ಜಗತ್ತಿನಲ್ಲಿ ನಾರೀ ಮಹಿಮೆಯನ್ನೇ ಪ್ರಥಮವಾಗಿ ಪ್ರಚಾರಮಾಡಿತು. ಸಕಾಮ ಜಗತ್ತು ಮುಗ್ಧರಾಗಿ ಅವರ ಪವಿತ್ರವಾಣಿಯನ್ನು ಆಲಿಸಿತು. ನಾರೀ ಪ್ರತೀಕವನ್ನು ಕಾಮ ಗಂಧಹೀನವಾದ ಮಾತೃದೃಷ್ಟಿಯಿಂದ ನೋಡಿದ ಆ ಮಹಾಋಷಿಗಳನ್ನು ಇತರರು ಅನುಸರಿಸಿದರು. ಹೇ ದೇವಿ, ಮಾನವಿ, ಭಾರತ ನಿನ್ನನ್ನು ನಿಷ್ಕಾಮದೃಷ್ಟಿಯಿಂದ ಪ್ರಪಂಚದಲ್ಲಿ ಪ್ರಥಮ ಪೂಜಿಸಿ ಧನ್ಯವಾಯಿತ್ತು. ಅಂದಿನಿಂದ ಭಾರತ ಪ್ರತಿಯೊಂದು ಗೃಹದಲ್ಲಿಯೂ ಸ್ತ್ರೀಯನ್ನು ಕುಲದೇವತೆಯೆಂದು ಪೂಜಿಸಿ ಸನ್ಮಾನಮಾಡಲಾರಂಭಿಸಿತು.

ಸನ್ಮಾನ ಪೂಜೆ ಶ್ರದ್ಧೆಯ ಪ್ರತ್ಯಕ್ಷ ಅನುಭವ ಭಾರತಕ್ಕೆ ದೊರಕಿತು. ಸೀತಾ, ಸಾವಿತ್ರಿ, ದಮಯಂತಿ, ದ್ರೌಪದಿ ಮುಂತಾದ ಉಜ್ವಲವಾದ ದೇವೀ ಮೂರ್ತಿಯರು ಭಾರತದಲ್ಲಿ ಇತರ ಕಡೆಗಳಿಗಿಂತ ಮುಂಚೆ ಪ್ರಕಾಶಿತರಾಗಿ ದೇಶವನ್ನು ಪವಿತ್ರಗೊಳಿಸಿದರು, ಅದನ್ನು ಧರ್ಮಕ್ಷೇತ್ರವಾಗಿ ಮಾಡಿದರು. ಹೇ ಭಾರತ ಸಂತಾನ, ನೀನು ಇಂದು ವಿದೇಶೀ ಅನುಕರಣೆಯಿಂದ ನಿನ್ನ ಕುಲ ಲಕ್ಷ್ಮಿಯನ್ನು ಮರೆತಿರುವೆ. ಅಸ್ವಾಭಾವಿಕ ಶಿಕ್ಷಾಸಂಪನ್ನನಾದ ಹೀನ ಬುದ್ಧಿಯ ಮೂಢನೆ, ನಿನ್ನ ಆಧ್ಯಾತ್ಮಿಕ ದೃಷ್ಟಿ ಎಷ್ಟು ಅವನತಿ ಇಳಿದಿದೆ! ಒಮ್ಮೆ ವಿದೇಶಿ ಮೋಹದಿಂದ ಪಾರಾಗಿ ಭಾರತ ಭೂಮಿಯ ಕಡೆ ನೋಡು! ಜಗತ್ತಿನ ಆದರ್ಶ ಸ್ಥಾನದಲ್ಲಿ ನಿಮ್ಮ ದಿವ್ಯ ನಾರೀ ಕುಲ ದಾಟಲಸಾಧ್ಯವಾದ ಭೀಮಹಿಮಾಲಯದಂತೆ ಮಂಡಿಸಿರುವುದು ಗೋಚರಿಸುವುದು. ನಿಮ್ಮ ಕುಲ ಲಕ್ಷ್ಮಿ ನಿಮ್ಮ ಸಹಾಯಕ್ಕೆ ಬರಲು ಕಾತರಳಾಗಿರುವುದು ಕಾಣುವುದು. ಅವರ ಪದರಜದಿಂದ ಭಾರತವೇ ಅಲ್ಲ, ಇಡೀ ಪ್ರಪಂಚವೇ ಸರ್ವ ಕಾಲದಲ್ಲಿಯೂ ಧನ್ಯವಾಗಿದೆ. ಮೂಢ ಭಾರತದ ಮೃತ್ತಿಕೆಯನ್ನು ನೋಡು–ಇದರಿಂದ ನಿಮ್ಮ ಮತ್ತು ನಿಮ್ಮ ಕುಲಲಕ್ಷ್ಮಿಯರ ದೇಹ ಮನ ಸೃಷ್ಟಿಯಾಗಿದೆ. ಭಾರತದ ಧೂಳಿ ನಿಮ್ಮನ್ನು ಬಾಲ್ಯದಿಂದಲೂ ಸದೃಢರನ್ನಾಗಿ ಮಾಡಿದೆ. ಸೀತಾ, ಸಾವಿತ್ರಿ, ಬುದ್ಧಪ್ರಾಣ ಯಶೋಧರೆ, ಚೈತನ್ಯನ ಗೃಹಿಣಿ ವಿಷ್ಣುಪ್ರಿಯೆ, ಧರ್ಮಪ್ರಾಣ ಅಹಲ್ಯಾಬಾಯಿ, ಚಿತ್ತೂರಿನ ದೇವಾರಾಧ್ಯ ವೀರರಮಣೀಕುಲದ ಪದಸ್ಪರ್ಶ ಧೂಳಿ ಅದು.

ಭಾರತದ ಗಾಳಿಯನ್ನು ನೋಡಿ, ಪ್ರತಿಸಲಿಯೂ ನೀವು ಅದನ್ನು ಸೆಳೆದುಕೊಂಡು ನಿಮ್ಮ ಶರೀರವನ್ನು ಪುಷ್ಟಿಗೊಳ್ಳುತ್ತಿರುವಿರಿ. ಇದು ಹಿಂದಿನಿಂದಲೂ ಆ ಪವಿತ್ರ ನಾರಿಯರ ಶ್ವಾಸಕೋಶಕ್ಕೆ ಹೋಗಿ ಪವಿತ್ರವಾಗಿ ಬಂದ ಗಾಳಿ. ಇದೇ ದೇಶವೆಲ್ಲ ಪವಿತ್ರಭಾವನೆಯಿಂದ ಓತಪ್ರೋತವಾಗಿರುವಂತೆ ಮಾಡಿದೆ ಪಾಶ್ಚಾತ್ಯ ಮೋಹ ಮರುಮರೀಚಿಕೆಯಂತೆ. ಅಲ್ಲಿ ಇನ್ನು ಮುಂದೆ ಜಲವನ್ನು ಹುಡುಕುವುದಕ್ಕೆ ನೀವು ಪ್ರಯತ್ನಿಸುವುದಿಲ್ಲ. ನಿಮ್ಮ ಜಗನ್ಮಾತೆ ಜಗನ್ಮಾತೆಯಾದ ನಾರೀ ಕುಲದಲ್ಲಿ ವಿಶೇಷತಃ ಭಾರತೀಯರು ರಮಣಿಯರಿಗೆ ನಿಮ್ಮ ಹೃದಯದಲ್ಲಿ ಭಕ್ತಿ ಪ್ರೇಮ ಜಾಗ್ರತವಾದಾಗ ನಿಮ್ಮನ್ನು ಯಥಾರ್ಥ ಮನುಷ್ಯರನ್ನಾಗಿ ಮಾಡುವುದು. ನಿಮ್ಮ ಕುಲಲಕ್ಷ್ಮಿಯರನ್ನು ಸಾಕ್ಷಾತ್ ದೇವೀಪ್ರತಿಮೆಯಂತೆ ಮಾಡುವುದು.

ನಾರಿಯಲ್ಲಿ ಜಗತ್‌ಪ್ರಸೂತಿಯನ್ನು ವಿಶೇಷವಾಗಿ ಕಂಡ ದಿವ್ಯದರ್ಶನ ಸಂಪನ್ನ ಋಷಿಕುಲ ಮುಕ್ತಕಂಠದಿಂದ ಅವರನ್ನು ಹೊಗಳಿರುವರು: ನಾರಿ, ಬುದ್ಧಿರೂಪಾ, ಜಗಜ್ಜನನಿಯು ಹ್ಲಾದಿನೀ ಸೃಜಿನೀ ಮತ್ತು ಪಾಲಿನಿ ಶಕ್ತಿಯ ಜೀವಂತ ಪ್ರತೀಕ. ಈ ಪ್ರತ್ಯಕ್ಷ ಅನುಭವ ಸರ್ವಾಂಗಸಂಪನ್ನವಾಗುವುದಕ್ಕೆ ಹಲವು ಕಾಲ ಅನೇಕರ ಸಾಧನೆ ಆವಶ್ಯಕವಾಗಿತ್ತು ಎನ್ನುವುದರಲ್ಲಿ ಸಂದೇಹವಿಲ್ಲ. ವೇದ ಉಪನಿಷತ್ತು ಮತ್ತು ದಾರ್ಶನಿಕ ಕಾಲದ ನಾರೀ ಉಪಾಸನೆಯನ್ನು ಬೌದ್ಧ ಮತ್ತು ತಾಂತ್ರಿಕ ಯುಗದ ನಾರೀ ಉಪಾಸನೆಯೊಂದಿಗೆ ತುಲನೆ ಮಾಡಿನೋಡಿದರೆ ನಮಗೆ ಇದು ಸ್ಪಷ್ಟವಾಗಿ ತೋರುವುದು.

ವೈದಿಕ ಉಪನಿಷತ್ತಿನ ಯುಗದಲ್ಲಿ ನಾರಿಯನ್ನು ಧೀರ, ಸ್ಥಿರ, ಶಾಂತ ಭಾವದ ಮೂಲಕ ಉಪಾಸನೆ ಮಾಡುತ್ತಿದ್ದರು. ಅದರಲ್ಲಿ ಉನ್ಮತ್ತ ಪ್ರವಾಹದ ತಾಂಡವಗತಿ ಇರಲಿಲ್ಲ. ಅಥವಾ ಉಪಾಸಕರನ್ನು ಚಿರಕಾಲ ಉನ್ಮತ್ತಸ್ಥಿತಿಯಲ್ಲಿ ಇಡುವಂತಹ ಭಾವೋದ್ರೇಕವಾಗಲೀ ಇರಲಿಲ್ಲ. ವೈದಿಕ ಋಷಿಗಳು ಸ್ತ್ರೀಯರನ್ನು ಪುರುಷನಿಗೆ ಸರಿಸಮನಾಗಿ ನೋಡುತ್ತಾ ಅವರಿಗೆ ಸನ್ಮಾನವನ್ನು ಮಾಡುತ್ತಿದ್ದರು. ಪರಮಾತ್ಮನ ಸಾಕ್ಷಾತ್ ಸಂದರ್ಶನ, ಮತ್ತು ಅವನ ಪವಿತ್ರಸ್ಪರ್ಶನದಿಂದ ಪುರುಷನಂತೆ ನಾರಿಯೂ ಅತೀಂದ್ರಿಯ ದಿವ್ಯದೃಷ್ಟಿ ಸಂಪನ್ನರಾಗಿ ಋಷಿತ್ವವನ್ನು ಗಳಿಸಿಕೊಂಡಿದ್ದರು, ಇವರನ್ನು ಅವನತ ಮಸ್ತಕದಿಂದ ಗೌರವಿಸಿದರು. ಜನಕರಾಜನ ಆಸ್ಥಾನದಲ್ಲಿ ಬರುವ ಗಾರ್ಗಿ ಮುಂತಾ

ದವರು ಪುರುಷನಂತಹ ಜ್ಞಾನಿಗೆ ಸರಿಸಮನಾಗಿದ್ದರು, ಅಶ್ವಮೇಧಾದಿ ಯಜ್ಞ ಯಾಗಾದಿಗಳಲ್ಲಿ ರಾಣಿರಾಜನೊಂದಿಗೆ ಸಮಾಭಾಗಿನಿಯಾಗಿದ್ದಳು ಎಂಬುದನ್ನು ಉಲ್ಲೇಖಿಸಿರುವರು. ಇದೇ ಸಾಕಷ್ಟು ಪ್ರಮಾಣಗಳು. ಇವೆಲ್ಲ ಆಧ್ಯಾತ್ಮಿಕ ಜಗತ್ತಿಗೆ ಸೇರಿದ ವಿಷಯಗಳಾದವು. ವ್ಯಾವಹಾರಿಕ ಪ್ರಪಂಚದಲ್ಲಿಯೂ ಸ್ತ್ರೀಪುರುಷನಂತೆ ಸಮಸನ್ಮಾನದಲ್ಲಿ ವೈದಿಕಯುಗದಲ್ಲಿದ್ದಳು ಎಂಬುದಕ್ಕೆ ಸಾಕಾದಷ್ಟು ಪ್ರಮಾಣ ದೊರಕುವುದು. ಆದರೆ ನಾರಿಯರಿಗೇ ಸ್ವಾಭಾವಿಕ ವಾಗಿ ಕೆಲವು ವಿಶೇಷ ಕಾರ್ಯಗಳಿವೆ, ಎಂಬುವನ್ನು ವೇದಗಳಲ್ಲಿ ಗಮನಿಸು ವೆವು. ಇದನ್ನು ಭರತಖಂಡ ಯಾವಾಗಲೂ ಒಪ್ಪಿಕೊಂಡಿರುವುದು. ಮುಂದೆಯೂ ಒಪ್ಪಿಕೊಳ್ಳುವುದು. ಆದರೆ ಪಾಶ್ಚಾತ್ಯ ದೇಶಗಳಲ್ಲಾದರೊ ಕ್ರಿಸ್ತಶಕ ಐದು ಆರು ಶತಮಾನದವರೆಗೆ ನಾರಿಯನ್ನು ಯೋಗ್ಯ ದೃಷ್ಟಿಯಿಂದ ನೋಡುತ್ತಿರಲಿಲ್ಲ. ಅವರಲ್ಲಿ ಆತ್ಮವಿಲ್ಲ ಎಂದು ಭಾವಿಸಿದ್ದರು. ಆಸ್ತಿಯಲ್ಲಿ ಪುರುಷರಂತೆ ಅವರಿಗೆ ಯಾವ ಪಾಲೂ ಬರುತ್ತಿರಲಿಲ್ಲ. ಆ ಸಮಾಜ ಇದನ್ನು ಒಪ್ಪಿಕೊಂಡು ಇದರಂತೆ ಆಚರಿಸುತ್ತಿತ್ತು. ಆದರೆ ವೈದಿಕಯುಗದಲ್ಲಿ ಎಲ್ಲಿ ಹುಡುಕಿದರೂ ಇಂತಹ ವಿಷಯಗಳು ನಮಗೆ ಕಾಣಬರುವುದಿಲ್ಲ.

ವಿವಾಹ ಸಮಯದಲ್ಲಿ ಹೇಳುವ “ ಗರ್ಭಂ ದೇಹಿ ಸಿನಿವಾಲಿ ” ಎಂಬ ಗರ್ಭಾದಾನದ ಮಂತ್ರದಲ್ಲಿ ಮಾತೃಪೂಜೆ ಉಕ್ತವಾಗಿದೆ. ವೇದದಲ್ಲಿ ಬರುವ ಸ್ತ್ರೀ ಚಿಹ್ನೆಯ ಪೂಜೆ ಅದಕ್ಕೆ ಸಂಬಂಧಪಟ್ಟ ದ್ರಾವಿಡ ಪೂಜೆಯನ್ನಾಗಲಿ ತಾಂತ್ರಿಕ ಪೂಜೆಯನ್ನಾಗಲಿ ಹೋಲುವುದಿಲ್ಲ. ಎಲ್ಲರೂ ಒಂದೇ ಚಿಹ್ನೆಯನ್ನು ಪೂಜಿಸಿದರೂ ಉದ್ದೇಶ ಪ್ರಭೇದವಿದೆ. ವೈದಿಕಪೂಜೆಯ ಉದ್ದೇಶ ಕೇವಲ ಮಾತೃತ್ವಶಕ್ತಿಯ ಸನ್ಮಾನ. ದ್ರಾವಿಡಾದಿ ಜನಾಂಗಗಳಲ್ಲಿ ಪ್ರಕಾಶಿತ ವಾಗಿರುವುದು ನಾರಿಪೂಜೆ. ಶಾಕ್ತಪೂಜೆ ಸತಿ ಮತ್ತು ಮಾತೃರೂಪಿನಲ್ಲಿ ಪ್ರಕಾಶಿತಳಾಗಿರುವ ಸ್ತ್ರೀಯ ಪೂಜೆಯಾಗಿದೆ.

ವೇದದಲ್ಲಿ ನಾರಿಯ ಮಾತೃಶಕ್ತಿಪೂಜೆ ಅಲ್ಲಿ ಇಲ್ಲಿ ಸ್ವಲ್ಪ ಬಂದರೂ ಇದು ದ್ರಾವಿಡರಲ್ಲಿ ಇರುವ ಯೋನಿಲಿಂಗದ ಪೂಜೆಯಲ್ಲ. ಸ್ವಾಮಿ ವಿವೇಕಾ ನಂದರು ಈ ಚಿಹ್ನೆ ಸುಮೇರು ಮತ್ತು ಅದರ ಶಾಖೆಯಾದ ದ್ರಾವಿಡ ಜನಾಂಗದಲ್ಲಿ ಮಾತ್ರ ರೂಢಿಯಲ್ಲಿದ್ದುದೆಂದು ಹೇಳುವರು. ಇದು ವೈದಿಕ ಆರ್ಯ ಜನರಲ್ಲಿ ಇರಲಿಲ್ಲ. ವೇದದಲ್ಲಿ ನಮಗೆ ಇದಕ್ಕೆ ಪ್ರಮಾಣ ಸಿಕ್ಕು ವುದಿಲ್ಲ. ಶೈವಸಂಪ್ರದಾಯದಲ್ಲಿರುವ ಲಿಂಗೋಪಾಸನೆ ವೇದವಿರುದ್ಧವಲ್ಲ.

ಅಥರ್ವಣವೇದದಲ್ಲಿ ಹೇಳಿರುವ ಯೂಪಸ್ತಂಭವನ್ನು ಲಿಂಗವೆಂದು ಭಾವಿಸು ವರು. ಆದರೆ ವೇದದಲ್ಲಿ ಎಲ್ಲಿಯೂ ಯೋನಿಲಿಂಗದ ಚಿಹ್ನೆ ಬರುವುದಿಲ್ಲ. ಶಿವಪೂಜೆ ಯೋನಿಲಿಂಗದ ಪೂಜೆಯಲ್ಲ. ಧ್ಯಾನಮಂತ್ರಗಳು "ಧ್ಯಾಯೇನ್ನಿತ್ಯಂ ಮಹೇಶಂ ರಜಗಿರಿನಿಭಂ ಚಾರುಚಂದ್ರಾವತಂಸಂ" ಎಂದಿರುವುದು. ವೇದೋಕ್ತ ಶಿವಪೂಜೆ ಮತ್ತು ಬೌದ್ಧಕಾಲದ ಸ್ತೂಪಪೂಜೆಗಳೆರಡೂ ಒಟ್ಟಿಗೆ ಕಲೆತು ವರ್ತಮಾನಕಾಲದ ಲಿಂಗಪೂಜೆಯಾಗಿರಬಹುದೆಂಬುದು ವಿವೇಕಾ ನಂದರ ಮತ.

ಸ್ತ್ರೀಯ ಮೂಲಕ ನಾರಿಶಕ್ತಿಯ ದ್ರಾವಿಡ ರೀತಿಯ ಉಪಾಸನೆ ಬೌದ್ಧ ಯುಗದಲ್ಲಿ ಇಂಡಿಯಾದೇಶದಲ್ಲಿ ಪ್ರಥಮ ಪ್ರಚಾರಕ್ಕೆ ಬಂದಿತು. ಹೊಸ ಭಾವನೆ ದೇಶದಲ್ಲಿ ಪ್ರಚಾರಕ್ಕೆ ಬಂದಾಗ ಅದು ತಾನೇತಾನಾಗಿ ದೇಶಾದ್ಯಂತ ವನ್ನೂ ವ್ಯಾಪಿಸಿತು. ಆದಕಾರಣವೇ ಬೌದ್ಧಯುಗದಲ್ಲಿ ತಂತ್ರ ಮುಂತಾದು ವೆಲ್ಲ ಸ್ತ್ರೀಯರನ್ನು ಸತಿ ದೃಷ್ಟಿಯಿಂದ ನೋಡುವುದಾಯಿತು. ಸಂಯಮೀ ಪುರುಷನಿಗೆ ಇದರಿಂದ ಯಾವ ಹಾನಿಯೂ ಆಗುವುದಿಲ್ಲ ಅಂದರೆ ಸಮಾಜ ದಲ್ಲಿ ಎಷ್ಟು ಜನ ಸಂಯಮೀ ಪುರುಷರು ಇರಬಲ್ಲರು? ಇಂದ್ರಿಯ ಪರವಶ ರಾದ ಸಾಧಾರಣ ಮಾನವರು ಇದನ್ನು ಸ್ಥೂಲಭಾವದಲ್ಲಿ ಗ್ರಹಿಸಿ ಬೌದ್ಧರ ಕಾಲದಲ್ಲಿ ಗ್ರಹಿಸಿ ಒಂದು ದೊಡ್ಡ ಅನಾಚಾರ ಮತ್ತು ವ್ಯಭಿಚಾರದ ಪ್ರವಾಹ ವನ್ನೇ ಎಬ್ಬಿಸಿದರು. ಇದನ್ನು ಪೂರಿ ಮತ್ತು ಇತರ ದಾಕ್ಷಿಣಾತ್ಯ ದೇವಾ ಲಯಗಳಲ್ಲಿ ಇರುವ ಪಶುಭಾವ ಸೂಚಕ ವಿಗ್ರಹಗಳಲ್ಲಿ ನೋಡಬಹುದು. ಆದಕಾರಣವೆ ಭಾರತೀಯ ತಂತ್ರಕಾರರು ಸಾವಧಾನವಾಗಿ ಅಧಿಕಾರಭೇದಕ್ಕೆ ತಕ್ಕಂತೆ ಜನರಿಗೆ ರತೀದೃಷ್ಟಿಯಿಂದ ಉಪಾಸನೆ ಮಾಡುವುದನ್ನು ಬೋಧಿ ಸಿದರು. ಆದರೆ ವೈದಿಕ ಅನುಗಾಮಿಗಳು ರಮಣಿಯ ಮಾತೃಭಾವವನ್ನು ಉದ್ದೇಶಿಸಿ ಬೌದ್ಧ ಧರ್ಮದಿಂದ ಆದ ಹಾನಿಯನ್ನು ಪರಿಹರಿಸಲು ಯತ್ನಿ ಸಿದರು. ಪಂಚ "ಮ"ಕಾರ ಸಂಯುಕ್ತ [ಮದ್ಯ ಮಾಂಸ ಮತ್ಸ್ಯಮುದ್ರ ಮೈಥುನ] ತಾಂತ್ರಿಕ ವೀರಭಾವ ಪೂಜೆಯನ್ನೇ ಸಾಧಾರಣವಾಗಿ ವಾಮಾ ಚಾರ ಎನ್ನುವುದು ಇಲ್ಲಿ ಸತೀಭಾವದಿಂದ ಉಪಾಸನೆ ಮಾಡುವುದು ಇರುವುದು. ಅದನ್ನು ಈಗ ವಿವರಿಸುವುದಿಲ್ಲ. ವೀರಭಾವದಲ್ಲಿ ಪ್ರಯೋಗ ಕುಶಲಿಯಾದ ಸಿದ್ಧಗುರು, ಅನುಷ್ಠಾನ ಕುಶಲಿ ಸಂಯಮೀ ಶ್ರದ್ಧಾವಾನ್ ಸಾಧಕ ಇವೆರಡೂ ಅತಿ ವಿರಳ. ಸಾಧನ ಉಪಯುಕ್ತನಾದ ಗುರುವನ್ನು

ಪಡೆದು ತಾನು ವಿವಾಹವಾದ ಸ್ತ್ರೀಯೊಂದಿಗೆ ಈ ಭಾವವನ್ನು ಉಪಾಸನೆ ಮಾಡಿದರೆ ಮುಂದುವರಿಯುವನು. ಇದನ್ನು ಗಮನಿಸದೆ ಇದಕ್ಕೆ ಕೈಹಾಕಿದರೆ ಪಥಭ್ರಷ್ಟನಾಗಿ ಪತನವಾಗುವುದರಲ್ಲಿ ಸಂದೇಹವಿಲ್ಲ. ಸಿದ್ಧಗುರುವಿನ ಸಹಾಯ ದಿಂದ ಪಥಭ್ರಷ್ಟನಾಗಿ ಪತನವಾಗುವುದರಲ್ಲಿ ಸಂದೇಹವಿಲ್ಲ. ಸಿದ್ಧಗುರುವಿನ ಸಹಾಯದಿಂದ ಸಂಯಮಿಯಾದ ಸಾಧಕ ಉಪಾಸನೆ ಮಾಡಿದರೆ ಅವನ ಗುರಿ ಸಿದ್ಧಿಸುವುದು. ಇದನ್ನು ನಾವು ಸರ್ವದಾ ಗಮನದಲ್ಲಿಡುವುದು ಉಚಿತ.

ವಾಮಾಚಾರವೆಂದರೆ ಏನೆಂಬುದು ಗೊತ್ತಾದರೆ ನಾವು ಹಿಂದೆ ಹೇಳಿರುವುದು ಚೆನ್ನಾಗಿ ಅರ್ಥವಾಗುವುದು, ವಾಮ ಎಂದರೆ ವಿಪರೀತ ಎಂದು ಅರ್ಥ. ಪಂಚ ಮಕಾರಾದಿ ವಸ್ತುಗಳ ಮೇಲೆ ಮಾನವರು ಸಾಧಾರಣವಾಗಿ ಉನ್ಮತ್ತರಾಗಿಹೋಗುವರು. ಅದಕ್ಕೆ ವಿರೋಧವಾಗಿರುವುದೇ ವಾಮಾಚಾರದ ಉದ್ದೇಶ. ಮತ್ತೊಂದು ಅರ್ಥವೇ ಯಾವ ಪದಾರ್ಥಗಳ ಗ್ರಹಣೆಯಿಂದ ಸಾಧಾರಣ ಮಾನವರಲ್ಲಿ ಅಧರ್ಮ ಭಾವನೆ ಉದ್ದೀಪನವಾಗುವುದೋ ಹಾಗೆ ಆಗದೆ ಅವರಲ್ಲಿ ಗುಪ್ತವಾಗಿರುವ ಕುಂಡಲಿನೀಶಕ್ತಿ ಜಾಗ್ರತವಾಗಿ ಸಾಧಕನಿಗೆ ಅಧಿಕತರ ಸಂಯಮ, ಅಧಿಕತರ ಧರ್ಮಭಾವವನ್ನು ನೀಡುವುದೇ ವಾಮಾಚಾರದ ಲಕ್ಷ್ಯ. ತಂತ್ರಶಾಸ್ತ್ರ ಹೀಗೆ ಹೇಳುವುದು : ಕುಂಡಲಿನಿಶಕ್ತಿ ಜಾಗರಿತವಾಗಿ ತಲೆಯಲ್ಲಿರುವ ಸಹಾಸ್ರಾರಕ್ಕೆ ಹೋಗುವಾಗ, ಮೂಲಾಧಾರದಿಂದ ಆರಂಭವಾಗಿ ಪ್ರತಿ ಚಕ್ರದಲ್ಲಿಯೂ ವಾಮಾಭಾಗದಲ್ಲಿ ಸುತ್ತಿಕೊಂಡು ಅದರಲ್ಲಿರುವುದೆನ್ನೆಲ್ಲಾ ತನ್ನಲ್ಲಿ ಮಿಲನಮಾಡಿಕೊಂಡು ಮೇಲೇಳುವುದು. ಸಮಾಧಿಯ ನಂತರ ಕೆಳಗೆ ಇಳಿಯುವಾಗ ಆಯಾ ಚಕ್ರದ ಹತ್ತಿರ ಬಂದು ದಕ್ಷಿಣಾವರ್ತವಾಗಿ ಸುತ್ತಿಕೊಂಡು ಆಯಾ ಚಕ್ರಗಳನ್ನು ಪುನಃ ಕಾಣುವಂತೆ ಮಾಡಿ ಕೆಳಗೆ ಇಳಿಯುವುದು. ಕುಂಡಲಿನಶಕ್ತಿ ಜನಸಾಧಾರಣರಿಗೆ ಅಪರಿಚಿತವಾದ ವಾಮಾವರ್ತದ ಮೂಲಕ ಪರಿಭ್ರಮಣವಾಗಿ ಸಹಸ್ರಾರಕ್ಕೆ ಸೇರಿ ಸಮಾಧಿಯನ್ನು ನೀಡುವುದನ್ನೇ ವಾಮಾಚಾರ ಎನ್ನುವುದು. ಇದೇ ವಾಮಾಚಾರಕ್ಕೆ ಇರುವ ಮತ್ತೊಂದು ಅರ್ಥ. ವಾಮಾಚಾರವೆಂದರೆ ತಂತ್ರ ಶಾಸ್ತ್ರದಲ್ಲಿ ಮತ್ತು ಇತರ ಕಡೆ ಬರುವ ಅರ್ಥದ ಪ್ರಕಾರ, ಒಬ್ಬನಿಗೆ ಅಸಂಯಮೀ ಜೀವನ ನಡೆಸುವುದಕ್ಕೆ ಅವಕಾಶ ಕೊಡುವುದಲ್ಲ, ಕಠೋರತ್ಯಾಗಿ ಗೌರಾಂಗ ದೇವನಿಂದ ಪ್ರಚುರಿತವಾದ ಪ್ರೇಮ ಧರ್ಮ, ಕ್ರಮೇಣ ಬಾಬಾಜಿ ವೈರಾಗಿಗಳ ಕೈಯಲ್ಲಿ ಸಿಕ್ಕಿ ಹೇಯವಾದ ವ್ಯಭಿಚಾರಕ್ಕೆ ಇಳಿದರೆ ಅದಕ್ಕೆ ಗೌರಾಂಗ

ಹೇಗೆ ದೂಷಣೆಗೆ ಪಾತ್ರನಲ್ಲವೋ, ಹಾಗೆಯೇ ಧರ್ಮದ ಹೆಸರಿನಲ್ಲಿ ಬೌದ್ಧ ಮತ್ತು ತಾಂತ್ರಿಕ ಶಾಸ್ತ್ರದ ಪ್ರಕಾರ ಅನುಷ್ಠಾನಕ್ಕೆ ಬಂದು ಹಲವು ಅನಾಚಾರಗಳಿಗೆ ಅದು ಗುರಿಯಾಗಿದ್ದರೆ ತಂತ್ರ ಶಾಸ್ತ್ರವನ್ನೇ ದೂರುವುದು ಯುಕ್ತಿಯುತವಲ್ಲ.

ಮಾನವ ಸ್ವಭಾವವನ್ನು ಪರ್ಯಾಲೋಚಿಸಿ ನೋಡಿದರೆ ವಾಮಾಚಾರಕ್ಕೆ ಸಂಬಂಧಪಟ್ಟ ಮತ್ತೊಂದು ಭಾವನೆ ಹೊಳೆಯುವುದು. ಮಾನವರಲ್ಲಿ ಯಾವುದನ್ನುಮಾಡಬೇಡಿ ಎನ್ನುವೆವೊ ಅದನ್ನು ಮೊದಲುಮಾಡುವ ವಿಪರೀತ ಸ್ವಭಾವದವರು ಇರುವರು. ವಾಮಮಾರ್ಗ, ನಿಷಿದ್ಧವಸ್ತುಗಳಿಗೂ ಒಂದು ಕಾಲದಲ್ಲಿ ಪ್ರಯೋಜನವಿದೆ ಎನ್ನುವುದು. ಹಿಂದೆ ಹೇಳಿದ ವಿಪರೀತ ಪ್ರಕೃತಿಯ ಸ್ವಭಾವದವರ ಪಾಶವೀವೃತ್ತಿ ಕ್ರಮೇಣ ತಗ್ಗುವುದು, ಯಾವುದನ್ನು ಹಿಂದೆ ಮಾಡಿದ್ದರೆ ಕಪಟಾಚಾರವಾಗುತ್ತಿತ್ತೊ ಅದು ಇನ್ನುಮೇಲೆ ಹಾಗೆ ಆಗುವುದಿಲ್ಲ. ಧರ್ಮದ ಹೆಸರಿನಲ್ಲಿ ಕಪಟಾಚಾರಿಯಾಗಬೇಕಾಗಿಲ್ಲ. ಸಾಧಾರಣವಾಗಿ ನಿಂದಾದೃಷ್ಟಿಯಿಂದ ನೋಡುವ ವಸ್ತುಗಳಿಗೂ ವಾಮಮಾರ್ಗದಲ್ಲಿ ಸ್ಥಾನವಿದೆ. ವಾಮಮಾರ್ಗವನ್ನು ನಿಂದಿಸುವುದನ್ನೇ ನಾವು ಸಾಧಾರಣವಾಗಿ ಕೇಳುವೆವು. ಈ ಮಾರ್ಗದಲ್ಲಿಯೂ ಕೆಲವು ಒಳ್ಳೆಯ ಅಂಶಗಳಿವೆ ಎಂಬುದನ್ನು ಯಾರೂ ಕೇಳಿಯೆ ಇಲ್ಲ. ಈ ಮಾರ್ಗದಲ್ಲಿ ಸಾಧಾರಣ ಗುರು, ಶಿಷ್ಯನ ಯೋಗ್ಯತೆಯನ್ನು ಅರಿಯದೆ ಎಲ್ಲರಿಗೂ ಇದನ್ನು ಬೋಧಿಸಿದುದರ ಪರಿಣಾಮವಾಗಿ ಅನೇಕರು ಪತಿತರಾದರು. ಅದಕ್ಕೆ ಜನ ವಾಮಮಾರ್ಗವನ್ನೇ ಗುರಿಮಾಡಿರುವರು. ಆದಕಾರಣ ವಾಮಮಾರ್ಗದ ಸಮರ್ಥನೆಗಾಗಿ ನಾವು ಕೆಲವು ವಿಷಯಗಳನ್ನು ಹೇಳಬೇಕಾಯಿತು.

ಭರತಖಂಡದಲ್ಲಿ ತಂತ್ರಶಾಸ್ತ್ರ ನಾರಿಯ ಸತಿ ಮತ್ತು ಮಾತೃಸ್ವರೂಪ ಎರಡನ್ನೂ ಪ್ರಚಾರಮಾಡಿತು. ನಾರೀಪ್ರತೀಕದಲ್ಲಿ ವಿಶ್ವಜನನಿಯ ಉಪಾಸನೆ ಸರ್ವಸಂಪನ್ನವಾಯಿತು. ಗೊಂಬೆ ಮಾಡುವವನು ಹೇಗೆ ಮಣ್ಣು ಬೊಂಬು ಬಟ್ಟೆಗಳ ಸಹಾಯದಿಂದ ಸುಂದರವಾದ ವಿಗ್ರಹಗಳನ್ನು ಮಾಡುವನೊ ಹಾಗೆಯೇ ಭಾರತೀಯ ದಾರ್ಶನಿಕರಾದ ಕಪಿಲಾದಿ ಮಹಾ ಋಷಿಗಳು ಪ್ರಚಾರಕ್ಕೆ ತಂದ ಪ್ರಕೃತಿಪುರುಷ ತತ್ತ್ವಗಳ ಆಧಾರದಿಂದ ತಾಂತ್ರಿಕೋಪಾಸಕರು ಸಾಧಕರ ಪ್ರಯೋಜನಕ್ಕಾಗಿ "ಅಸಿಮುಂಡಾ ವರಾಭಯಕರಾ, ಸೌಮ್ಯ-ಕಠೋರ ಜೀವನ ವ್ಯತ್ಯಯರೂಪ" ವಿಪರೀತಭಾವದ ಮಾತೃಮೂರ್ತಿಯನು

ಆಚರಣೆಗೆ ತಂದರು. ಶ್ರದ್ಧೆ ಸಂಯಮಯುಕ್ತನಾದ ತಾಂತ್ರಿಕಸಾಧಕ ಭಕ್ತಿ ಪೂರಕಚಿತ್ತದಿಂದ ವಿಗ್ರಹಗಳನ್ನು ಪೂಜಿಸಿ ಕಾಲಾನಂತರ ಸಮಾಧಿಸ್ಥನಾಗಿ ನೋಡಿದಾಗ ವಿಗ್ರಹ ಜೀವಂತವಾಗಿ, ಜಾಗೃತವಾಗಿ ಪೃಥ್ವಿಯಲ್ಲೆಲ್ಲಾ ಓತ ಪ್ರೋತವಾಗಿ ಕಂಡಿತು. ಸಮಾಧಿ ಸಹಾಯದಿಂದ ತನ್ನ ವ್ಯಕ್ತಿತ್ವಕ್ಕೆ ಅತೀತ ನಾಗಿ ಹೋಗಿ ಬ್ರಹ್ಮಾಂಡಸ್ವರೂಪ ಪ್ರಕೃತಿಯನ್ನು ನೋಡಿದಾಗ ಅದೊಂದು ವಿರಾಟ್ ಶವ—ಶಿವಮೂರ್ತಿಯಂತೆ ಗೋಚರಿಸಿತು. ವಿಶ್ವವೆಲ್ಲಾ ಅದರಲ್ಲಿ ಅಂಗೋಪಾಂಗವಾಗಿ ವಿರಾಜಮಾನವಾಯಿತು. ಆಗ ವಿಸ್ಮಯ ಭಯಭಕ್ತಿ ಯಿಂದ ಅವರ ಹೃದಯ ವಿಕಸಿತವಾಗಿ ಅವರ ಮುಖದಿಂದ ಧ್ಯಾನಶ್ಲೋಕಗಳು ಹೊರ ಹೊಮ್ಮಿದವು.

> ಕರಾಲವದನಾಂ ಘೋರಾಂ ಮುಂಡಕೇಶೀಂ ಚತುರ್ಭುಜಾಂ ।
> ಕಾಲಿಕಾದಕ್ಷಿಣಾಂ ದಿವ್ಯಾಂ ಮುಂಡಮಾಲಾ ವಿಭೂಷಿಣೀಂ ॥

ಹೀಗೆ ಸಮಾಧಿ ಮತ್ತು ಭಾವಮುಖದಲ್ಲಿ ಪ್ರತ್ಯಕ್ಷದರ್ಶನ ಪಡೆದ ವಿಶ್ವ ರೂಪಿಣಿ ಮತ್ತು ವಿಶ್ವಜನನಿಯ ವಿವಿಧ ರೂಪುಗಳು ಮತ್ತು ವಿವಿಧ ಭಾವಗಳು ಮಂತ್ರಸಹಿತ ಪ್ರಚಾರಕ್ಕೆ ಬಂದವೆಂಬುದರಲ್ಲಿ ಸಂದೇಹವಿಲ್ಲ.

ನಾರಿಯ ವಿಭೂತಿ ಮತ್ತು ಜಾಯಾಭಾವದ ಉಪಾಸನೆ ಬಹು ಪ್ರಾಚೀನ ಕಾಲದಲ್ಲಿ ಪಾಶ್ಚಾತ್ಯ ದೇಶದ ದ್ರಾವಿಡ ಜನಾಂಗದ ನಿಕಟ ಸಂಬಂಧದಿಂದ ಪಡೆದಿರಬಹುದು. ಅವರ ಮದ್ಯಪ್ರಿಯ ಭುಜಗಭೂಷಿತ ಉಕ್ಷದೇವ (Bacchus) ಮತ್ತು ಅವನ ಶಕ್ತಿ ಐಸೀ (Isis) ಹಲವುಕಡೆ ಹಲವು ಹೆಸರುಗ ಳಿಂದ ಪೂಜಿಸಲ್ಪಡುವರು. ಅತಿ ವಿರಳರಾದ ಜಿತೇಂದ್ರಿಯ ಸಾಧಕರು ಅವರನ್ನು ಪೂಜಿಸುತ್ತಿದ್ದರು. ಅಸಂಯಮಿಗಳು ಇಂತಹ ಪೂಜೆಯ ಹೆಸರಿನಲ್ಲಿ ಹಲವು ಕಡೆ ಘೋರ ವ್ಯಭಿಚಾರಕ್ಕೆ ಕಾರಣರಾದರು. ಇತಿಹಾಸ ಇದಕ್ಕೆ ಸಾಕ್ಷಿ. ಉಕ್ಷ ದೇವರಪೂಜೆಗಾಗಿ ನರನಾರಿಯರು ಗಂಭೀರ ನಿಶೆಯಲ್ಲಿ ಗುಪ್ತ ಚಕ್ರದಲ್ಲಿ ಕಲೆತು ಮದ್ಯಪಾನ ಮಾಡಿ ಹಲವು ಅಸಭ್ಯ ಆಚರಣೆಯಲ್ಲಿ ಮತ್ತರಾಗುತ್ತಿದರು ಎಂಬುದನ್ನು ಇತಿಹಾಸದ ಮೂಲಕ ತಿಳಿಯುತ್ತೇವೆ. ಸಭ್ಯವಂಶ ಮಹಿಳೆಯ ರಲ್ಲಿ ಕೂಡ ಇಂತಹ ಪೂಜಾನುಷ್ಠಾನ ಪ್ರಚಾರದಲ್ಲಿತ್ತು, ಜಗದ್ ವಿಜಯಿ ಅಸಮಾನ್ಯವೀರ ಅಲೆಗ್ಸಾಂಡರನ ತಾಯಿ ಈ ವಿಧವಾದ ಪೂಜೆಯನ್ನು ಮಾಡು ತ್ತಿದ್ದಳು ಎಂದು ಇತಿಹಾಸ ಹೇಳುವುದು. ಕ್ರೈಸ್ತಧರ್ಮದ ಅಭ್ಯುದಯಕ್ಕೆ ಮುಂಚೆ ಇವುಗಳೆಲ್ಲವೂ ಸರ್ವಸಾಮಾನ್ಯ ಎಂಬುದು ತಿಳಿದುಬರುವುದು.

ಬೌದ್ಧ ಮತ್ತು ಪಾರ್ಸಿ ಧರ್ಮಗಳ ಸಾರವನ್ನು ಸೇರಿಸಿಕೊಂಡು ನವೀನ ಕ್ರೈಸ್ತಧರ್ಮ ಆರಂಭವಾಯಿತು. ಅದು ಪೂರ್ವೋಕ್ತ ಪೂಜೆಗೆ ವಿರೋಧವಾಗಿ ನಿಂತಿತು. ಕಾಲಕ್ರಮೇಣ ಸಾಲಮನ್ ಮುಂತಾದ ದೊರೆಗಳನ್ನು ಆ ಧರ್ಮಕ್ಕೆ ಸೇರಿಸಿ ಅವರ ಖಟ್ಗಬಲದಿಂದ ಯೂರೋಪಿನಲ್ಲಿ ಸ್ಥಿರವಾಗಿ ನೆಲೆಸಲು ಸಾಧ್ಯವಾಯಿತು. ಛಲಬಲ ಕೌಶಲದಿಂದ ಯೂರೋಪಿನಲ್ಲಿ ಕ್ರೈಸ್ತಧರ್ಮ ಪ್ರಾಚೀನ ಕಾಲದಲ್ಲಿ ಏಕಾಧಿಪತ್ಯವನ್ನು ಸಂಪಾದಿಸಿತು. ಈ ಸಂಗತಿ ಇತಿಹಾಸ ಪ್ರಸಿದ್ಧವಾಗಿದೆ. ಅದು ಹೇಗಾದರೂ ಇರಲಿ, ಕ್ರೈಸ್ತಧರ್ಮ ಮೇರಿಯ ಪೂಜೆಯನ್ನು ಪ್ರಚಾರಮಾಡಿ ಪಾಶ್ಚಾತ್ಯದೇಶದಲ್ಲಿ ನಾರಿಯ ಮಾತೃಭಾವ ಪೂಜೆಯನ್ನು ಸ್ವಲ್ಪ ಪ್ರಚಾರ ಮಾಡಿತು. ಆದರೂ ಮಾತೃ ಭಾವದ ಪೂಜೆ ಕೇವಲ ಬೀಜರೂಪದಲ್ಲಿ ಇದ್ದಿತೇ ಹೊರತು ಪುಷ್ಪಫಲಗಳಿಂದ ಕೂಡಿದ ಭಾರತದ ಮಹೀರುಹದಂತೆ ಆಗಲಿಲ್ಲ.

ಯೂರೋಪಿನಲ್ಲಿ ಮಾತೃಪೂಜೆ ಮೇರಿಯವರೆಗೆ ಹೋಯಿತೇ ವಿನಃ ಅದರಿಂದ ಮುಂದಕ್ಕೆ ಮುಂದುವರಿಯಲಿಲ್ಲ. ಬಹು ಪ್ರಾಚೀನ ವೃಕ್ಷದೇವರ ಪೂಜಾ ಕಾಲದಲ್ಲಿ ಬಳಕೆಯಲ್ಲಿದ್ದ ಸತೀಭಾವ, ಅಲ್ಲಿಯ ಜನರು ಕ್ರೈಸ್ತರಾದರೂ ಅವರ ಪೂಜಾವಶೇಷ ಕ್ರೈಸ್ತಧರ್ಮದಿಂದ ಸಂಪೂರ್ಣ ಮಾಯವಾಗಲಿಲ್ಲ. ಕಾಲಕ್ರಮೇಣ ಕೆಲವರು ಶುದ್ಧಭಾವದಲ್ಲಿ ನಾರಿಯನ್ನು ಆ ದೃಷ್ಟಿಯಿಂದ ಉಪಾಸನೆ ಮಾಡುವುದನ್ನು ಕಲಿತರು.

ಸಮಗ್ರ ಪಾಶ್ಚಾತ್ಯ ಜಗತ್ತು ನಾರಿಯನ್ನು ವಿಶೇಷವಾಗಿ ಗೌರವಿಸುವರು, ಇದು ನಿತ್ಯ ಪ್ರತ್ಯಕ್ಷವಾಗಿದೆ. ಯೂರೋಪಿನ ಪುರುಷ, ನಾರಿಗೆ ಅಗ್ರ ಆಸನ, ವಸನ, ಭೋಜನವನ್ನು ಕೊಡುವನು. ಟ್ರಾಂ ಮತ್ತು ರೈಲುಗಾಡಿಗಳಲ್ಲಿ ಸ್ತ್ರೀಗೆ ಸ್ಥಳವಿಲ್ಲದೆ ನಿಂತಿದ್ದರೆ ತಮ್ಮ ಸ್ಥಳವನ್ನು ಕೊಟ್ಟು ತಾವು ನಿಂತುಕೊಳ್ಳುವರು. ಯಾನಾರೋಹಕ ಸಮಯದಲ್ಲಿ ಸ್ತ್ರೀಯರಿಗೆ ಮೊದಲು ಅವಕಾಶ ಕೊಡುವರು. ಈ ರೀತಿ ಹಲವು ಸನ್ಮಾನಗಳನ್ನು ಪುರುಷರು ಸ್ತ್ರೀಯರಿಗೆ ಮಾಡುವರು. ಆದರೆ ನಾವು ಇದನ್ನು ಒಳಹೊಕ್ಕು ನೋಡಿದರೆ ಇದು ಮಾತೃಭಾವಕ್ಕೆ ಕೊಡುವ ಗೌರವವಲ್ಲ, ಕೇವಲ "ಗೃಹಲಕ್ಷ್ಮಿ, ಕುಲಲಕ್ಷ್ಮಿ, ಆನಂದಮಯಿ" ಎಂಬ ಸತೀ ಭಾವಕ್ಕೆ ಕೊಡುವ ಗೌರವವಾಗಿದೆ. ಈ ಭಾವ ಘನೀಭೂತವಾದರೆ ಕಾಲಕ್ರಮೇಣ ಮಧುರಭಾವ ಅಥವಾ ಸತೀಭಾವ ಆಗುವುದು, ಇದೇ ಭಾರತೀಯರ ಉಪಾಸನೆ, ಅದು ಇಲ್ಲಿ ನೈಜವಾಗಿ ವ್ಯಕ್ತವಾಗಿದೆ.

ಯುರೋಪಿನ ಪುರುಷರು ಸನ್ಮಾನವನ್ನು ಅಪ್ರಾಪ್ತವಯಸ್ಕ ಕುಮಾರಿಗಾಗಲಿ, ರೂಪು ಯೌವನಗಲಿತ ವೃದ್ಧೆಗಾಗಲಿ ಕೊಡುವುದಿಲ್ಲ. ಸರ್ವಾಗ್ರದಲ್ಲಿ ಯುವತಿ, ಅವಳನಂತರ ಪ್ರೌಢೆ ಪುರುಷನ ಸನ್ಮಾನಕ್ಕೆ ಅಧಿಕಾರಿಣಿ. ರೂಪು ಸೌಂದರ್ಯಭೂಷಿತ ಪ್ರೌಢೆಯರ ಸಮ್ಮುಖದಲ್ಲಿ ಕುರೂಪಿಯಾಗಿರುವ ಯುವತಿಗೂ ಕೆಳಗಿನ ಅಂತಸ್ತು ಸಿಕ್ಕುವುದು. ಅಪರಿಚಿತ ಪುರುಷ ಅಪರಿಚಿತ ನಾರಿಯನ್ನು ಸಂಭೋಧಿಸುವಾಗ ಮೆಡಾಮ್ ಅಥವಾ ಮಿಸೆಸ್ ಎಂದು ಕರೆಯುವನು. ಇದರಲ್ಲಿ ನಾರೀಶಕ್ತಿಯ ಐಶ್ವರ್ಯ ಭಾವ ಮಾತ್ರ ಪ್ರದರ್ಶಿತವಾಗಿದೆ, ಯುರೋಪಿನ ಪುರುಷರ ಆಚರಣೆಯನ್ನು ನೋಡಿದರೆ ಇದು ವ್ಯಕ್ತವಾಗುವುದು.

ಭಾರತೀಯ ತಂತ್ರಶಾಸ್ತ್ರದಲ್ಲಿ ಬರುವ ಶಕ್ತಿಪೂಜೆಯಲ್ಲಿ ನಾರಿಯರ ಮಾತೃಭಾವ ಉಕ್ತವಾಗಿರುವುದು. ನಾವು ಇದರ ಪ್ರಭಾವವನ್ನು ಪುರುಷರ ಪ್ರತಿಯೊಂದು ಆಚರಣೆಯಲ್ಲಿಯೂ ನೋಡುವೆವು. ಆದಕಾರಣವೇ, ವೃದ್ಧವಯಸ್ಕಳಾದ ನಾರಿಗೆ ಪುರುಷ ಅಗ್ರ ಸನ್ಮಾನವನ್ನು ಮಾಡುವನು. ರೂಪು ಸೌಂದರ್ಯಭೂಷಿತ ನಾರಿ ತನ್ನ ಪತಿಯ ಜನನಿಯ ಅಧೀನದಲ್ಲಿ ಇಲ್ಲದೇ ಇದ್ದರೆ, ದೂಷಣಕ್ಕೆ ಭಾಗಿನಿಯಾಗುವಳು. ಪುತ್ರನಾದವನು ಹೆಂಡತಿಯ ಮಾತನ್ನು ಕೇಳಿ ತಾಯಿಗೆ ಅಗೌರವ ತಂದರೆ ಅಂತಹವನು "ಸ್ತ್ರೀಜಿತ, ಅಧರ್ಮಚಾರಿ" ಎಂದು ನಿಂದೆಗೆ ಗುರಿಯಾಗುವನು. ಅಪರಿಚಿತ ರಮಣಿ ಪ್ರೌಢವಯಸ್ಕಳಾದರೆ ತಾಯಿ ಎಂತಲೂ ಇನ್ನೂ ಸಣ್ಣ ವಯಸ್ಸಿನವಳಾಗಿದ್ದರೆ ಲಕ್ಷ್ಮಿ, ಸೀತೆ ಎಂತಲೂ ಸಂಬೋಧಿಸಲ್ಪಡುವಳು. ಮಾತೃವಿಗೆ ಸರ್ವ ಅಗ್ರಪೂಜೆ. ಅಪರಿಚಿತ ಪುರುಷನಾದರೂ ಸ್ತ್ರೀಯನ್ನು ತಾಯಿ ಎಂದು ಕರೆದಾಗ ಆಕೆ ನಿಸ್ಸಂಕೋಚವಾಗಿ ಅವನೊಡನೆ ಮಾತನಾಡುವಳು, ಅವನ ಸಹಾಯವನ್ನು ಸ್ವೀಕರಿಸುವಳು. ಇಂತಹ ಆಚರಣೆಗಳನೆಲ್ಲಾ ನೋಡಿದರೆ ನಾರಿಯನ್ನು ಮಾತೃ ದೃಷ್ಟಿಯಿಂದ ನೋಡುವುದು ಭಾರತದಲ್ಲಿ ಎಷ್ಟು ಆಳಕ್ಕೆ ಹೋಗಿದೆ ಎಂಬುದು ಗೊತ್ತಾಗುವುದು.

ಜಗತ್ಕಾರಣನಾದ ಈಶ್ವರನನ್ನು "ಜಗಜ್ಜನನೀ, ಜಗದಾಂಬಾ" ಎಂದು ನಾರೀ ಭಾವದಲ್ಲಿ ಉಪಾಸನೆ ಮಾಡುದು ಭಾರತೀಯರ ಒಂದು ವೈಶಿಷ್ಟ್ಯ. ಭಾರತೇತರ ಜಾತಿಗಳು ಈಶ್ವರನನ್ನು ತಂದೆ ಎಂದು ಉಪಾಸನೆ ಮಾಡುವುದನ್ನೂ ನೋಡುವೆವು. ಇದು ಮಾತ್ರವಲ್ಲ, ಅವನಿಗೆ ಮಾತೃಭಾವವನ್ನು ಆರೋ

ಪಣೆ ಮಾಡುವುದು. ಮಹಾ ಪಾಪ ಎಂದು ಕ್ರೈಸ್ತರಲ್ಲಿ ಪರಿಗಣಿಸುವರು. ಪಾಶ್ಚಾತ್ಯರು ಬಹುಕಾಲದಿಂದ ನಾರಿಯ ಐಶ್ವರ್ಯ ಮತ್ತು ಶಕ್ತಿಭಾವವನ್ನು ಉಪಾಸನೆ ಮಾಡಿದರೂ ತಂತ್ರದಲ್ಲಿ ವಾಮಮಾರ್ಗದಲ್ಲಿ ಹೇಳಿರುವಂತೆ ಯಾರೂ ಆದಿಶಕ್ತಿ ತನ್ನ ಸತಿ ಎಂದು ಹೇಳುವ ಸಾಹಸ ಮಾಡಿಲ್ಲ. ಬಹು ಪ್ರಾಚೀನ ಕಾಲದಲ್ಲಿ ಇದರ ಚಿಹ್ನೆಗಳು ಸ್ವಲ್ಪ ಇದ್ದರೂ ಆಧುನಿಕ ಕಾಲದಲ್ಲಿ ಅದೆಲ್ಲ ನಾಮಾವಶೇಷವಾಗ ಹೋಗಿದೆ. ಪ್ರಾಚೀನ ಕಾಲದಲ್ಲಿ ಯುರೋಪಿನ ಕೆಲವು ಕ್ರೈಸ್ತಸಾಧಕರು ಏಸುವನ್ನು ಪತಿಯಂತೆ ಉಪಾಸನೆ ಮಾಡಿದ ಉದಾಹರಣೆಗಳಿವೆ. ಏಸುವಿನ ಧ್ಯಾನಾಸಕ್ತರಾಗಿ ಶಿಲುಬೆಗೆ ಏಸುವನ್ನು ಏರಿಸಿದಾಗ ಯಾವ ಯಾವ ಭಾಗಕ್ಕೆ ಅವನಿಗೆ ಮೊಳೆ ಹೊಡೆದರೋ ಅಲ್ಲೆಲ್ಲ ಸಾಧಕರಿಗೆ ವ್ರಣವಾಗಿ ಅದರಿಂದ ರಕ್ತಸ್ರುರಿಯುತ್ತಿತ್ತು ಎಂಬ ನಿದರ್ಶನಗಳು ಲಿಖಿತವಾಗಿವೆ. ಮತ್ತೊಂದು ವಿಧವಾದ ನಿದರ್ಶನವಿದೆ, ಏರಾಸ್‌ಮುಸ್ Erasumus ಎಂಬ ಜ್ಞಾನಿ ಮೇರಿಯ ಕೈಗಳಲ್ಲಿದ್ದ ಅಂಗುಳೀಯಕವನ್ನು ತೆಗೆದು ಆಕೆಯನ್ನು ತನ್ನ ಶಕ್ತಿ ಎಂದು ಉಪಾಸನೆ ಮಾಡಿದ ಎಂಬುದು ಲಿಪಿಬದ್ಧವಾಗಿದೆ.

ಪ್ರಾಚೀನ ಯುರೋಪಿನವರು ಭಾರತೀಯ ಶಕ್ತಿಪೂಜೆಯ ಪ್ರಭಾವಕ್ಕೆ ಒಳಗಾಗಿದ್ದರು ಎಂಬುದಕ್ಕೆ ಸಾಕಷ್ಟು ಚಾರಿತ್ರಿಕ ಪ್ರಮಾಣಗಳಿವೆ. ಭಾರತಕ್ಕೂ ಯುರೋಪಿಗೂ ಸಂಬಂಧ ಕಡಿಮೆಯಾದಂತೆಲ್ಲಾ ಆಧ್ಯಾತ್ಮಿಕ ಜೀವನದಲ್ಲಿಯೂ ಯುರೋಪಿನಲ್ಲಿ ಈ ಸಂಬಂಧ ಕಡಿಮೆಯಾಗುವುದು. ಮಾರ್ಟಿನ್ ಲೂಥರ್ ಮೂಲಕ ಪ್ರವರ್ತಿತವಾದ ಪ್ರಾಟಿಸ್ಟೆಂಟ್ ಬ್ರಹ್ಮಚರ್ಯ ಮತ್ತು ಸನ್ಯಾಸ ಜೀವನಕ್ಕೆ ವಿರೋಧವಾಗಿತ್ತು ಕೇವಲ ನೀತಿಯನ್ನು ಮಾತ್ರ ಪ್ರಚಾರ ಮಾಡಿ ಯುರೋಪಿನ ಆಧ್ಯಾತ್ಮಿಕ ತರುವಿಗೆ ಕುಠಾರಪ್ರಾಯರಾದರು. ಯುರೋಪಿನ ಜಡವಿಜ್ಞಾನ ಪ್ರಚಾರವಾಗಿ ಅವರ ದೃಷ್ಟಿ ಜಡವಸ್ತುವಿನ ಮೇಲೆ ನಿಂತು ಇಹ ಕಾಲವೊಂದೇ ಅವರಿಗೆ ಸರ್ವಸ್ವವಾಗಿದೆ. ಸಂಸಾರದಲ್ಲಿ ಭೋಗಸುಖಲಾಭವೇ ಯುರೋಪ್ ಪಾಶ್ಚಾತ್ಯ ದೇಶಗಳ ಪರಮ ಪುರುಷಾರ್ಥವಾಗಿದೆ, ಯುರೋಪಿನ ಆಧ್ಯಾತ್ಮಿಕ ಜೀವನದ ಕಾರಿರುಳು ಎಂದು ದೂರ ಸರಿಯುವುದೋ ಪರಮೇಶ್ವರನಿಗೆ ಗೊತ್ತು, ಇಲ್ಲಿ ಭರವಸೆಯ ಅಂಶ ಸ್ವಲ್ಪ ಇದೆ. ಅದೇ ಪೂಜ್ಯ ಪಾದ ಸ್ವಾಮಿ ವಿವೇಕಾನಂದರಿಂದ ಯುರೋಪ್ ಮತ್ತು ಅಮೆರಿಕಾದಲ್ಲಿ ಪ್ರಚಾರಿತವಾದ ಭಾರತೀಯ ಧರ್ಮ ಭಾವನೆ ಅಲ್ಲಿ ಯತ್ ಕಿಂಚಿತ್ ಹರಡಿ ಪುಷ್ಟಿಯಾಗಿ ಕ್ರಮೇಣ ಪ್ರಸಾರವಾಗುತ್ತಿದೆ.

ಯುಗಾವತಾರ ಭಗವಾನ್ ಶ್ರೀರಾಮಕೃಷ್ಣರ ಪುಣ್ಯಾವತಾರದಿಂದ ನಾರೀ ಪ್ರತೀಕ ಶಕ್ತಿಪೂಜೆ, ಭಾರತದ ವರ್ತಮಾನ ಯುಗದಲ್ಲಿ ವಿಶೇಷ ಸಜೀವ ವಾಗಿ ಜಾಗ್ರತವಾಗಿದೆ. ನಾರೀ ಪ್ರತೀಕವನ್ನು ಇಷ್ಟು ಶುದ್ಧಭಾವದಿಂದ ಉಪಾ ಸನೆ ಮಾಡಿದ ಮತ್ತೊಂದು ವ್ಯಕ್ತಿಯನ್ನು ಜಗತ್ತು ನೋಡಿದೆಯೆ ಎನ್ನುವುದು ಸಂದೇಹ. ಜಗನ್ಮಾತೆಯ ಧ್ಯಾನಸಮಾಧಿಯಲ್ಲಿ ನಿರಂತರ ತನ್ಮಯರಾಗಿರುವುದು. ಆಕೆಯ ಪ್ರತ್ಯಕ್ಷದರ್ಶನಲಾಭವನ್ನು ಪಡೆದು ಐದುವರುಷದ ಎಳೆ ಹಸುಳೆಯಂತೆ ಸದಾ ಆಕೆಯನ್ನು ನೆಚ್ಚಿರುವುದು, ಸಕಲ ನಾರಿಯರಲ್ಲಿಯೂ ಸಾಕ್ಷಾತ್ ಜಗ ನ್ಮಾತೆಯನ್ನು ಕಂಡು ಎಲ್ಲಾ ಕಾಲದಲ್ಲಿಯೂ ಭಕ್ತಿಪೂರ್ಣ ಚಿತ್ತದಿಂದ ಅವ ಳನ್ನು ಇಷ್ಟದೇವತೆಯಂತೆ ಉಪಾಸನೆ ಮಾಡುವುದು, ವಿವಾಹಿತರಾಗಿದ್ದರೂ ಯುವತಿ ಪತ್ನಿಯನ್ನು ನೋಡಿದೊಡನೆಯೆ ಅವರನ್ನು ಜಗನ್ಮಾತೆ ಎಂದು ಕರೆದು ಜಾವ ಬಿಲ್ವದಳಗಳಿಂದ ಪತ್ನಿಯ ಶ್ರೀಪಾದಪದ್ಮಗಳನ್ನು ಪೂಜಿಸುವುದು, ವೇಶ್ಯಾರಮಣಿಯರಲ್ಲಿಯೂ ಜಗನ್ಮಾತೆಯನ್ನು ಕಂಡು ಅವರನ್ನೂ ತಾಯಿ ಎಂದು ಕರೆದು ಸಮಾಧಿ ಮಗ್ನರಾದುದು, ಬಹಿರಂಗವಾಗಿ ಭಕ್ತಿಪೂತ ಚಿತ್ತದಿಂದ ಕುಲಾಗಾರ ಪ್ರತೀಕದಲ್ಲಿ ಬ್ರಹ್ಮಯೋನಿಯನ್ನು ಪೂಜಿಸಿ ಆನಂದ ಸಮಾಧಿಮ ಗ್ನರಾದುದು, ತಾಂತ್ರಿಕ ಪೂಜೆಯ ಉಪಕರಣವಾದ ಕಾರಣ(ಮದ್ಯ)ವನ್ನು ಕಂಡ ಮಾತ್ರದಿಂದಲೇ ಜಗತ್‌ಕಾರಣ ಭಾವನೆ ಮನಸ್ಸಿನಲ್ಲಿ ಉದಿಸಿ ಪ್ರೇಮ ಭಕ್ತಿಯಿಂದ ವಿಹ್ವಲರಾಗುವುದು, ಎಲ್ಲಕ್ಕಿಂತ ಹೆಚ್ಚಾಗಿ ಜಗನ್ಮಾತೆಯ ಪ್ರೇಮ ದಿಂದ ತಮ್ಮನ್ನು ಮರೆತು ಸ್ವಾರ್ಥಪರ ಭೋಗಸುಖವನ್ನು ಸಂಪೂರ್ಣ ತ್ಯಾಗ ಮಾಡಿ ಪೂರ್ಣ ಬ್ರಹ್ಮಚರ್ಯೆಯಲ್ಲಿ ಸದಾ ಪ್ರತಿಷ್ಠಿತರಾಗಿರುವುದು—ಇವುಗ ಳನ್ನು ಶ್ರೀರಾಮಕೃಷ್ಣರ ಜೀವನವನ್ನು ಬಿಟ್ಟರೆ ಮತ್ತೆ ಯಾವ ಯುಗದಲ್ಲಿ ಅವ ತಾರದಲ್ಲಿ ಇಂತಹ ಉಜ್ವಲ ಉಚ್ಚ ಆದರ್ಶ ಸಾಧ್ಯ? ಅವರ ಅಲೌಕಿಕ ಜೀವನದ ಸಹಾಯದಿಂದ ಭಾರತ ಭೂಮಿ ನಾರೀ ಪ್ರತೀಕದಲ್ಲಿ ಶಕ್ತಿ ಪೂಜೆಯನ್ನು ಅನು ಷ್ಠಾನ ಮಾಡಲಿ. ಭರತ ಖಂಡದ ನರನಾರಿಯರೆ, ಗುರೂಪದೇಶ ಹೊಂದಿ ಪಶು ಅಥವಾ ವೀರಭಾವದಿಂದ ನಾರೀಪ್ರತೀಕದ ಮೂಲಕ ಶ್ರೀರಾಮಕೃಷ್ಣರ ಜೀವನ ವನ್ನು ಮನಸ್ಸಿನಲ್ಲಿಟ್ಟುಕೊಂಡು ಶಕ್ತಿಪೂಜೆಯಲ್ಲಿ ನಿರತರಾಗಿ. ಇದೊಂದು ಭಾವನೆಯನ್ನು ಸದಾ ನಿಮ್ಮ ಹೃದಯದಲ್ಲಿ ಇಟ್ಟುಕೊಳ್ಳಿ. ತ್ಯಾಗ ತಪಸ್ಸು ಬ್ರಹ್ಮಚರ್ಯ ಸಹಾಯದಿಂದ ಏಕಾಂತವಾದ ಭಕ್ತಿಪ್ರೇಮದಿಂದ ಜಗನ್ಮಾತೆ

ಯನ್ನು ಒಲಿಸಿಕೊಳ್ಳಬೇಕೆ ವಿನಃ ಬೇರೆ ದಾರಿಯಿಲ್ಲ. ನಿಮ್ಮ ಜೀವನದಲ್ಲಿ ಮಿಥ್ಯಾಚಾರವಿಲ್ಲದಿರಲಿ.

ಹೇ ವೀರಸಾಧಕರೆ, ನೀವು ಅತೀಜಾಗ್ರತೆಯಿಂದ ಇರಬೇಕಾಗಿದೆ, ನೀವು ಹಿರಿದ ಅಲಗಿನ ಮೇಲೆ ನಡೆಯುವಂತಿರುವ ದುರ್ಗಮವಾದ ಮಾರ್ಗವನ್ನು ಹಿಡಿದಿರುವಿರಿ. ನಾರೀ ಪ್ರತೀಕದಲ್ಲಿ ಜಗತ್ ಶಕ್ತಿರೂಪಿಣಿ ಜಗದಾಂಬೆಯನ್ನು ಉಪಾಸನೆ ಮಾಡಿ. ಪ್ರಕೃತಿಯ ಕುಹಕಕ್ಕೆ ಒಳಗಾದ ಪದಚ್ಯುತರಾಗುವ ಸಂಭವವಿದೆ. ಭಾರತೀಯ ತಂತ್ರಕಾರರು ನಿಶಿಪೂಜಾವಿಧಾನವನ್ನು ಪ್ರಚಾರಕ್ಕೆ ತಂದಿರುವರು. ಹಿಂಸಪ್ರಾಣಿಗಳು ಹಗಲಿಗಿಂತ ರಾತ್ರಿಯಲ್ಲಿ ಗೋಚರಿಸುವುವು.

ನಿಷ್ಕಾಮ ದೃಷ್ಟಿಯಿಂದ ನಾರೀಪೂಜೆ ನಮ್ಮಿಂದ ಸಾಧ್ಯವಿಲ್ಲ ಎಂದು ಭಾವಿಸಬೇಡಿ. ವೃದ್ಧದಂಪತಿಗಳಲ್ಲಿ ಇಂದ್ರಿಯ ನಿಸ್ತೇಜವಾದಾಗ ವಿಷಯಾಸಕ್ತಿ ಕಡಿಮೆಯಾಗಿ ಕೇವಲ ಪ್ರೇಮವೊಂದೇ ಘನೀಭೂತವಾಗಿರುವುದನ್ನು ಯೋಚಿಸಿ ನೋಡಿ. ಆಗ ಪುರುಷನ ನಿಕಟ ಸತೀ ಸ್ನೇಹಿತಳಂತೆ ಇರುವಳು. ಆಗ ಆ ಸತಿಗೂ ತಾಯಿಗೂ ಯಾವ ಪ್ರಭೇದ ಇರುವುದು ? ಯಾವ ಸ್ಥಿತಿ ಕಾಲ ಧರ್ಮದಿಂದ ಬರುವುದೋ ಅದನ್ನ ಸಾಧನೆಯ ಮೂಲಕ ಸದಾ ಕಾಲದಲ್ಲಿಯೂ ನಿಮ್ಮದನ್ನಾಗಿ ಮಾಡಿಕೊಳ್ಳಿ. ಆಗ ನಿಮ್ಮ ಭಾವ ಶುದ್ಧಿಯಾಗುವುದು. ಸುಖವಾಗಲಿ ದುಃಖವಾಗಲಿ, ಯಾವ ಮಾರ್ಗವನ್ನು ನೀವು ಗುರುದೀಕ್ಷೆಯನ್ನು ಪಡೆದು ಅವಲಂಬಿಸಿರುವರೋ ಅದನ್ನು ಎಂದಿಗೂ ಬಿಡಬೇಡಿ. ಯುಗಾವತಾರ ಶ್ರೀರಾಮಕೃಷ್ಣರು ಯಾರಿಗೂ ಭಾವನಷ್ಟವನ್ನು ಉಂಟುಮಾಡಲಿಲ್ಲ. ಮಾಡುವಂತೆಯೂ ಹೇಳಲಿಲ್ಲ. ತ್ಯಾಗದೃಷ್ಟಿಯಲ್ಲಿ ನಿಬದ್ಧರಾಗಿ, ಶ್ರದ್ಧಾಭಕ್ತಿಯಿಂದ ನೀವು ಉಪಾಸನೆ ನಿರತರಾದರೆ, ನೀವು ಕೂಡ ಕಾಲಕ್ರಮೇಣ ಜಗದಂಬೆಯ ದರ್ಶನ ಪಡೆದು ಕೃತಕೃತ್ಯರಾಗುವಿರಿ. ಗುರುಭಕ್ತ ಶ್ರದ್ಧಾವಾನ್ ಸಾಧಕರೆ. ಬಾರಿಬಾರಿಗೆ ಶ್ರೀರಾಮಕೃಷ್ಣರು ಈ ಅಭಯವಚನವನ್ನು ನಿಮಗೆ ನೀಡಿದ್ದಾರೆ. ಜಗದ್ಗುರುಗಳ ಪಾದುಕ ಧ್ಯಾನಮಾಡಿ, ಅವರ ಅಭಯವಾಣಿಯನ್ನು ಹೃದಯದಲ್ಲಿ ಧರಿಸಿ ಶಕ್ತಿಪೂಜೆಯಲ್ಲಿ ನಿರತರಾಗಿ.

ರೂ. 4=50